# ಹೊಸ ಮನುಷ್ಯ

ಸಮಾಜವಾದಿ ಮಾಸಿಕ

ಸೆಪ್ಟಂಬರ್, ೨೦೨೦ | ಸಂಪಾದಕ : ಡಿ.ಎಸ್. ನಾಗಭೂಷಣ | ಸಂಪುಟ: ೯ ಸಂಚಿಕೆ: ೦೭

ಚಂದಾ ರೂ. ೨೦೦/- (೨೦೨೦ರ ಅಕ್ಟೋಬರ್‌ನಿಂದ ೨೦೨೧ರ ಸೆಪ್ಟಂಬರ್‌ವರೆಗೆ) ಸಂಸ್ಥೆಗಳಿಗೆ ರೂ.೩೦೦/- ಪುಟ: ೨೦ ಬೆಲೆ:ರೂ.೨೫/-

ವಿಳಾಸ: ಎಚ್.ಐ.ಜಿ.-೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ-೫೭೭ ೨೦೪

ದೂ: ೦೮೧೮೨-೨೪೮೫೭೪ ಸಂಚಾರಿ: ೯೪೪೯೨ ೪೨೨೮೪ *ಈ ಮೇಲ್:* dsnagabhushana@gmail.com

## ಸಂಪಾದಕರ ಟಿಪ್ಪಣಿಗಳು

**ಗಮನಿಸಿ: ಈ ಸಂಚಿಕೆಯೊಂದಿಗೆ ನಿಮ್ಮ ಚಂದಾ ಮುಗಿದಿದೆ**

ಹೆಚ್ಚಿನ ವಿವರಗಳಿಗೆ ಮುಂದಿನ ಪುಟ ನೋಡಿ-ಸಂ.

ಪ್ರಿಯ ಓದುಗರೇ,

ಕಳೆದ ಒಂದು ತಿಂಗಳು ಹಲವು ದೂರಗಾಮಿ ಪರಿಣಾಮಗಳ ಘಟನಾವಳಿಯಿಂದ ಕಿಕ್ಕಿರಿದು ಹೋಗಿತ್ತು. ಕೋವಿಡ್-೧೯ರ ಭೀತಿ ನಿಯಂತ್ರಣಕ್ಕೆ ಬಾರದೆ ಜನ ಸಮುದಾಯವನ್ನು ಆತಂಕದಲ್ಲೇ ಇಟ್ಟಿರುವಾಗ ೭೪ನೇ ಸ್ವಾತಂತ್ರ್ಯ ದಿನಾಚರಣೆ ಯಾವುದೇ ಸಂಭ್ರಮವಿಲ್ಲದೆ ಕಳೆದು ಹೋಗಿದೆ. ಮೋದಿಯವರ ಆಡಳಿತಕ್ಕಿದು ಸಂಕಷ್ಟದ ಕಾಲ. ಎಷ್ಟೇ ದೀಪ ಹೊತ್ತಿಸಿ, ಜಾಗಟೆ ಬಾರಿಸಿ, ಹೆಲಿಕಾಪ್ಟರುಗಳಿಂದ ಹೂ ಸುರಿಸಿ ಒಂದಾದರಮೇಲೊಂದು ಲಾಕ್‌ಡೌನ್‌ಗಳನ್ನು ಘೋಷಿಸಿದರೂ ನಿಯಂತ್ರಣಕ್ಕೆ ಬಾರದ ಈ ಮಹಾಮಾರಿ ಮೋದಿಯವರ ಆಡಳಿತಕ್ಕೆ ಒಂದು ಸವಾಲಾಗಿಯೇ ಉಳಿದ ಒಂದು ಮುಜುಗರದ ವಿಷಯವಾಗಿದೆ. ಈ ಕೋವಿಡ್ ವೈರಾಣುವಿನ ಸ್ವರೂಪದ ಬಗ್ಗೆ ಈಗ ವಿಭಿನ್ನ ವಾದಗಳು ವಿಶ್ವಾದ್ಯಂತ ಮಂಡಿತವಾಗಿ, ಈ ವೈರಾಣುವಿನ ಪರಿಣಾಮವನ್ನು ಔಷಧ ಮತ್ತು ವೈದ್ಯಕೀಯ ಉಪಕರಣಗಳ ಉದ್ಯಮದ ಪಟ್ಟಭದ್ರ ಹಿತಾಸಕ್ತಿಗಳು ಉತ್ಪ್ರೇಕ್ಷಿಸುತ್ತಿವೆ ಎಂಬ ಮಾತು ಪ್ರಚಲಿತವಾಗುತ್ತಿದ್ದರೂ, ಈ ಹಾವಳಿಯ ಬಲಿಯ ಪ್ರಮಾಣ ಕುಗ್ಗದಿರುವ ಸಂಗತಿ ಜನರ ಮತ್ತು ಸರ್ಕಾರದ ಮಟ್ಟಿಗೆ ಆತಂಕಕಾರಿಯೇ ಆಗಿದೆ.

ಇದರ ಜೊತೆಗೇ ಚೀನಾ ನಮ್ಮ ಗಡಿಯನ್ನು ಹಲವೆಡೆ ಅತಿಕ್ರಮಿಸಿ ಕೂತಿರುವ ಖಚಿತ ಸುದ್ದಿ ಆ ದೇಶದ ಪ್ರಧಾನಿಯವರೊಂದಿಗೆ ವೈಯಕ್ತಿಕ ಸಂಬಂಧದ ನೆಲೆಯಲ್ಲಿ ವ್ಯವಹರಿಸಿ ಅದನ್ನು ಓಲೈಸಿದ ಮೋದಿಯವರಿಗೆ ಇದೊಂದು ನುಂಗಲಾರದ ಸಂಕಟವಾಗಿದೆ.ಹಾಗೆ ನೋಡಿದರೆ ವಿದೇಶಾಂಗ ಸಚಿವರನ್ನು ಪಕ್ಕಕ್ಕಿರಿಸಿ ವೈಯಕ್ತಿಕ ನೆಲೆಯಲ್ಲಿಯೇ ವಿವಿಧ ದೇಶಗಳೊಡನೆಯ ವಿದೇಶಾಂಗ ನೀತಿಯನ್ನು ರೂಪಿಸತೊಡಗಿದ್ದ ಮೋದಿಯವರ ಪ್ರಯತ್ನ ಬಹುಪಾಲು ನಿಷ್ಫಲವಾದಂತೆ ತೋರುತ್ತಿದೆ. ಅವರ ಬಲಿಷ್ಠ ರಾಷ್ಟ್ರದ ಕಲ್ಪನೆಯ ಭಾಗವಾಗಿ ಮೂಡಿದ ಈ ವಿದೇಶಾಂಗ ನೀತಿಯಿಂದಾಗಿ ಭೂತಾನದ ಹೊರತಾಗಿ ನಮ್ಮ ನೆರೆಹೊರೆಯ ಎಲ್ಲ ದೇಶಗಳೂ ಚೀನಾದ ಬೃಹತ್ ಬಂಡವಾಳ ಹೂಡಿಕೆಯ ಅತಿಥಿ ರಾಷ್ಟ್ರಗಳಾಗಿ ಮಾರ್ಪಟ್ಟು ನಮ್ಮ ದೇಶದ ವಿಷಯದಲ್ಲಿ ಪ್ರತಿಕೂಲ ನಿಲುವುಗಳನ್ನು ಪ್ರದರ್ಶಿಸತೊಡಗಿವೆ.

ಇದು ಸ್ಥಳೀಯ ಪರಿಸ್ಥಿತಿಯಾದರೆ, ಜಾಗತಿಕವಾಗಿ ಪರಿಸ್ಥಿತಿ ಹೆಚ್ಚು ಆಶಾದಾಯಕವಾಗೇನೂ ತೋರುತ್ತಿಲ್ಲ. ಏಕೆಂದರೆ ಮೋದಿಯವರ ಗೆಣೆಕಾರ ಡೊನಾಲ್ಡ್ ಟ್ರಂಪ್ ಬರುವ ನವೆಂಬರ್‌ನ ಅಧ್ಯಕ್ಷೀಯ ಚುನಾವಣೆಗಳಲ್ಲಿ ಸೋಲುವ ಎಲ್ಲ ಲಕ್ಷಣಗಳೂ ಕಾಣತೊಡಗಿದ್ದು, ಗೆಲ್ಲುವ ಸೂಚನೆ ಇರುವ ಡೆಮಾಕ್ರಾಟಿಕ್ ಪಕ್ಷ ಮತ್ತು ಅದರ ಅಧ್ಯಕ್ಷೀಯ ಅಭ್ಯರ್ಥಿ ಜೋ ಬಿಡೆನ್ ಮೋದಿ ಆಡಳಿತದಲ್ಲಿ ಭಾರತದಲ್ಲಿ ಕಾಣಿಸಿಕೊಂಡಿರುವ ಬೆಳವಣಿಗೆಗಳ ಬಗ್ಗೆ ಅನುಕೂಲಕರ ಅಭಿಪ್ರಾಯವನ್ನೇನೂ ಹೊಂದಿದಂತಿಲ್ಲ. ವಿಶೇಷವಾಗಿ ಮತೀಯ ಸೌಹಾರ್ದತೆ, ಮಾಧ್ಯಮ ಸ್ವಾತಂತ್ರ್ಯ, ಪ್ರಜಾಸತ್ತಾತ್ಮಕ ಸಂಸ್ಥೆಗಳ ದುರ್ಬಲೀಕರಣ, ಜಮ್ಮು ಮತ್ತು ಕಾಶ್ಮೀರ ನೀತಿಯ ವಿಷಯಗಳಲ್ಲಿ.

ಜಮ್ಮು ಮತ್ತು ಕಾಶ್ಮೀರದಲ್ಲಿನ ಪಾಕಿಸ್ತಾನಿ ಕೈವಾಡ ಮತ್ತು ಭಯೋತ್ಪಾದನೆಯ ಹಾವಳಿಯನ್ನು ಸಂಪೂರ್ಣ ನಿವಾರಿಸಿ ಆ ರಾಜ್ಯದ ಹೆಚ್ಚಿನ ಅಭಿವೃದ್ಧಿಗಾಗಿ ಅದು ಸಂವಿಧಾನದ ೩೭೦ನೇ ವಿಧಿಯ ಅಡಿಯಲ್ಲಿ ಹೊಂದಿದ್ದ ವಿಶೇಷ ಸ್ಥಾನಮಾನವನ್ನು ರದ್ದುಗೊಳಿಸುವ ಮೂಲಕ ಅದನ್ನು ರಾಷ್ಟ್ರದೊಳಕ್ಕೆ ಸಂಪೂರ್ಣ ವಿಲೀನಗೊಳಿಸುವ ಪ್ರಯತ್ನವೆಂದು ಹೇಳಿ ಆ ರಾಜ್ಯವನ್ನು ಎರಡಾಗಿ ಒಡೆದು ಕೇಂದ್ರಾಡಳಿತ ಪ್ರದೇಶವಾಗಿ ಕುಬ್ಜಗೊಳಿಸಿ, ಅಲ್ಲಿನ ರಾಜಕೀಯ ನಾಯಕರನ್ನೆಲ್ಲ ಸೆರೆಗೋ, ಗೃಹಬಂಧನಕ್ಕೋ ತಳ್ಳಿ ರಾಜಕೀಯ ನಡಾವಳಿಗಳನ್ನೆಲ್ಲ ಸ್ತಬ್ಧಗೊಳಿಸಲಾಗಿದೆ. ಇದಾಗಿ ಮೊನ್ನೆ ಆಗಸ್ಟ್ ೫ಕ್ಕೆ ಒಂದು ವರ್ಷವಾಯಿತಾದರೂ ಅಲ್ಲಿನ ಪರಿಸ್ಥಿತಿಯಲ್ಲಿ ಯಾವುದೇ ಗಮನಾರ್ಹ ಬದಲಾವಣೆಗಳು ಕಾಣುತ್ತಿಲ್ಲ. ಕೇಂದ್ರದ ಪಡೆಗಳ ಜಮಾವಣೆ ಮತ್ತು ಜನರ ನಾಗರೀಕ ಹಕ್ಕುಗಳ ಮೇಲಿನ ನಿರ್ಬಂಧಗಳು ಬಹುಮಟ್ಟಿಗೆ ಮುಂದುವರೆದೇ ಇವೆ. ಈಗ ಕೆಲ ರಾಜಕೀಯ ನಾಯಕರ ಬಿಡುಗಡೆಯಾಗುತ್ತಿದೆಯಾದರೂ, ಅವರಲ್ಲಿ ಕೇಂದ್ರದ ನಿರ್ಧಾರಗಳ ಬಗ್ಗೆ ಕಹಿ ಇನ್ನಷ್ಟು ಹೆಚ್ಚಾಗಿದೆಯೇ ಹೊರತು ಕಡಿಮೆಯಾಗಿಲ್ಲ.

ಇದೆಲ್ಲದರ ಪರಿಹಾರಾರ್ಥ ನಮ್ಮ ಸರ್ವೋಚ್ಚ ನ್ಯಾಯಾಲಯದಲ್ಲಿ ೩೭೦ನೇ ವಿಧಿಯ ರದ್ದತಿಯನ್ನು ಪ್ರಶ್ನಿಸಿ, ರಾಜ್ಯದಲ್ಲಿ 'ಕಾಣೆ'ಯಾಗಿರುವ ಜನರಿಗೆ ಸಂಬಂಧಿಸಿದಂತೆ ಸಲ್ಲಿಸಲಾಗಿರುವ ಹೇಬಿಯಸ್ ಕಾರ್ಪಸ್ ಅರ್ಜಿಗಳನ್ನು ಒಂದು ವರ್ಷದ ನಂತರವೂ ವಿಚಾರಣೆಗೆ ಎತ್ತಿಕೊಳ್ಳದಿರುವುದು ನಮ್ಮ ನ್ಯಾಯಾಂಗದ ಆದ್ಯತೆಗಳನ್ನೇ ಹಲವರು ಪ್ರಶ್ನೆ ಮಾಡುವಂತಾಗಿದೆ.. ಇದನ್ನೇ ಪರೋಕ್ಷವಾಗಿ, ವಕೀಲ ಮತ್ತು ಸಾಮಾಜಿಕ ಕಾರ್ಯಕರ್ತ ಪ್ರಶಾಂತ್ ಭೂಷಣ್ ಅವರು, ಕಳೆದ ಆರು ವರ್ಷಗಳಲ್ಲಿ ಭಾರತದ ಪ್ರಜಾಸತ್ತೆಯ ಅವನತಿಗೆ ಸರ್ವೋಚ್ಚ ನ್ಯಾಯಾಲಯದ ಈ ಹಿಂದಿನ ನಾಲ್ವರು ಮುಖ್ಯ ನ್ಯಾಯಾಧೀಶರ ಕೊಡುಗೆ ಇದೆ ಎಂದೂ, ಪ್ರಸಕ್ತ ಮುಖ್ಯ ನ್ಯಾಯಾಧೀಶರ ಒಂದು 'ವಿವಾದಾಸ್ಪದ' ಸಾರ್ವಜನಿಕ ನಡೆಯನ್ನು ಸಚಿತ್ರವಾಗಿ ನಿರೂಪಿಸಿದ್ದ ಅವರ ಎರಡು ಟ್ವೀಟ್‌ಗಳ ಮೂಲಕ ಪ್ರಶ್ನಿಸಿದ್ದು. ಆಶ್ಚರ್ಯವೆಂದರೆ ಸರ್ವೋನ್ನತ ನ್ಯಾಯಾಲಯ ಇದನ್ನು ಸ್ವಪ್ರೇರಿತವಾಗಿ ಆದ್ಯತೆಯ ಮೇಲೆ ವಿಚಾರಣೆಗೆ ಒಳಪಡಿಸಿ ಈ ಟ್ವೀಟ್‌ಗಳು ನ್ಯಾಯಾಂಗದ ಆಧಾರ ಸ್ತಂಭವನ್ನೇ ಅಲುಗಾಡಿಸುವಂಹ ಕ್ರಿಮಿನಲ್ ನ್ಯಾಯಾಂಗ ನಿಂದನೆಯೆಂದು ತೀರ್ಪಿತ್ತಿದೆ. ಆದರೆ ಪ್ರಶಾಂತ್ ಭೂಷಣ್ ಅವರ ಟೀಕೆಗಳ ಸತ್ಯಾಸತ್ಯತೆಯ ವಿಚಾರಣೆಯ ಗೋಜಿಗೆ ಹೋಗದ ನ್ಯಾಯಾಲಯದ ಈ ತೀರ್ಪು ಪ್ರಶ್ನಾರ್ಹವಾದದ್ದು ಎಂದು ರಾಷ್ಟ್ರದ ಮತ್ತು ಜಗತ್ತಿನ ಹಿರಿಯ ನ್ಯಾಯವೇತ್ತರು ಪ್ರಶಾಂತ್‌ಭೂಷಣ್ ಪರ ತಮ್ಮ ಸಹಾನುಭೂತಿಯನ್ನು ದಾಖಲಿಸುತ್ತಿದ್ದಾರೆ. ಈ ಸಾಲುಗಳನ್ನು ಬರೆಯುವಾಗ ನ್ಯಾಯಾಲಯ ಪ್ರಶಾಂತ್‌ರ 'ಅಪರಾಧ'ಕ್ಕಾಗಿ ಅವರಿಂದ ಕ್ಷಮಾಪಣಾ ಹೇಳಿಕೆ ಪಡೆಯುವ ವಿಫಲ ಪ್ರಯತ್ನದ ನಂತರ ಶಿಕ್ಷೆಯ ಪ್ರಕಟಣೆಯನ್ನು ಕಾಯ್ದಿರಿಸಿದೆ. ಪ್ರಶಾಂತ್‌ರಿಗೆ ಏನೇ ಶಿಕ್ಷೆ ಪ್ರಕಟವಾಗಲಿ, ಅದು ರಾಷ್ಟ್ರಜೀವನದಲ್ಲಿ ಮೊಟಕುಗೊಳ್ಳುತ್ತಿರುವ ಪ್ರಜಾಸತ್ತಾತ್ಮಕ ಹಕ್ಕುಗಳ ಹೋರಾಟದಲ್ಲಿ ಒಂದು ಮೈಲಿಗಲ್ಲೆನಿಸಿ ಇಂತಹ ಹೋರಾಟಕ್ಕೆ ಹೊಸ ಸ್ಫೂರ್ತಿ ನೀಡಲಿದೆ.

ಇದೆಲ್ಲದರ ಮಧ್ಯೆ ಮೋದಿ ಸರ್ಕಾರ ಇಂದು ನಿರಂತರ ಕುಸಿಯುತ್ತಿರುವ ಆರ್ಥಿಕತೆ, ಏರುತ್ತಿರುವ ನಿರುದ್ಯೋಗ ಸಮಸ್ಯೆಗಳನ್ನೂ ಎದುರಿಸಬೇಕಿದೆ. ಸಂಸದೀಯ ಪ್ರಜಾಪ್ರಭುತ್ವ ಪದ್ಧತಿಗಳಿಗನುಸಾರ ಉಚಿತ ಸಮಾಲೋಚನೆಗಳಿಲ್ಲದೆ ತೆಗೆದುಕೊಂಡ ವೈಯಕ್ತಿಕ ನಿರ್ಧಾರಗಳ ಫಲವಾಗಿ ಸೃಷ್ಟಿಯಾಗಿರುವ ಈ ಸಮಸ್ಯೆಗಳು ಕೋವಿಡ್‌ನಿಂದಾಗಿ ಇನ್ನಷ್ಟು ಹದಗೆಟ್ಟು ಮೋದಿಯವರು 'ಆತ್ಮನಿರ್ಭರತಾ' ಎಂಬ ಕಾಂಗ್ರೆಸ್‌ನ ಸ್ವಾವಲಂಬನೆಯ ಹಳೆಯ ಘೋಷಣೆಗೆ ಹೊಸ ಬಣ್ಣ ಬಳಿದು ಹೊಸ ಶಬ್ದಾವಳಿಯನ್ನು ತಯಾರಿಸಿ ಅದರ ಅಬ್ಬರದಲ್ಲಿ ತಮ್ಮೆಲ್ಲ ಆಡಳಿತ ವೈಫಲ್ಯಗಳನ್ನು ಮರೆಮಾಚಲು ಯತ್ನಿಸುತ್ತಿದ್ದಾರೆ.

ಆದರೇನು, ಇತ್ತೀಚಿನ ಸಮೀಕ್ಷೆಯೊಂದರ ಪ್ರಕಾರ ಮೋದಿಯವರ ಜನಪ್ರಿಯತೆ ಹಿಂದೆಂದೂ ಇಲ್ಲದಷ್ಟು ಹೆಚ್ಚಾಗಿದೆ! ಇದು ವಿಪರ್ಯಾಸದಂತೆ ಕಂಡರೂ ಇಂದಿನ ರಾಜಕೀಯ ಪರಿಸ್ಥಿತಿಯಲ್ಲಿ ಇದು ಆಶ್ಚರ್ಯವನ್ನೇನೂ ಉಂಟು ಮಾಡಲಾರದು. ಏಕೆಂದರೆ ತಮ್ಮ ಈ ವೈಫಲ್ಯಗಳನ್ನು ಕ್ಷಮಿಸಲು ಸಾಮಾನ್ಯ ಜನರಿಗೆ ಮೋದಿಯವರೇ ತಮ್ಮ ರಾಜಕೀಯ ಮೂಲ ವೈಖರಿಗಳ ಮೂಲಕವೇ ಹಲವು ಆಧಾರಗಳನ್ನು ಒದಗಿಸಿದ್ದಾರೆ. ಒಂದು, ಬಹುಸಂಖ್ಯಾತ ಹಿಂದೂ ಸಮುದಾಯದ ಬಹುಭಾಗದ

(೧೩ನೇ ಪುಟ ನೋಡಿ

## ನಿಮ್ಮ ಪತ್ರ

ಪ್ರಿಯ ಸಂಪಾದಕರೇ,

೨೦೨೦ರ 'ಹೊಸ ಮನುಷ್ಯ' ವಿಶೇಷ ಸಂಚಿಕೆ ಅನ್ವರ್ಥವಾದದ್ದಾಗಿದೆ. ಇದೊಂದು ವೈವಿಧ್ಯ ವಿಷಯಗಳ ಬಗೆಗಿನ ವಿಚಾರಪೂರ್ಣ ಲೇಖನಗಳ ಸಂಗ್ರಹ. ಸಾಮಾಜಿಕ ಸ್ವಾಸ್ಥ್ಯದ ಬಗ್ಗೆ ನಿಮ್ಮ ಯಾವತ್ತೂ ಕಾಳಜಿ, ನಿಮ್ಮ ಟಿಪ್ಪಣಿ ಮತ್ತು ಸಂಚಿಕೆಯ ಇತರ ಬರೆಹಗಳಲ್ಲಿ ಯಥೇಚ್ಛವಾಗಿ ವ್ಯಕ್ತವಾಗಿದೆ. ಸಾಮಾಜಿಕ ಸ್ವಾಸ್ಥ್ಯವನ್ನು ಕಾಯುವುದೇ ಪತ್ರಿಕೋದ್ಯಮದ ಉದ್ದೇಶ ಎಂದು ನಂಬಿದವನು ನಾನು. ಸಂಚಿಕೆಯ ಬಹು ಪಾಲು ಲೇಖನಗಳು ನನ್ನ ಅರಿವಿಗೆ ಪೂರಕವಾಗಿವೆ; ವಂದನಾ ಶಿವ ಅವರನ್ನು ಕುರಿತ ಲೇಖನ ಮತ್ತು ಕಮಲಾದೇವಿ ಚಟ್ಟೋಪಾಧ್ಯಾಯ ಅವರ ನೆನಪುಗಳನ್ನು ಆಧರಿಸಿದ ರೂಪಕಗಳು ಇಷ್ಟವಾದುವು. ವಿವೇಕ ರೈ ಅವರ ಲೇಖನದಲ್ಲಿ 'ತುಳುವ ಅಧ್ಯಯನ' ಆರಂಭದ ಸಂದರ್ಭದಲ್ಲಿ ಹಾ ಮಾ ನಾಯಕರ ಹೆಸರು ಪ್ರಸ್ತಾಪವಾಗಿರುವುದು ನನಗೆ ವೈಯಕ್ತಿಕವಾಗಿ ಆಪ್ಯಾಯಮಾನದ ಸಂಗತಿ. ಚೊಕ್ಕಾಡಿಯವರ ಕವನದ ಸಾಲುಗಳು, "ಕಾಯುತ್ತೇವೆ, ಗಾಜಿನ ಗೋಡೆಯೊಡೆದು ಒಳಹೊರಗು ಒಂದಾಗುವ ದಿವ್ಯಕ್ಷಣಕ್ಕಾಗಿ," ತುಂಬಾ ಅರ್ಥಪೂರ್ಣವಾಗಿವೆ.

**–ಹೆಚ್. ಎಸ್. ಈಶ್ವರ,** ಬೆಂಗಳೂರು

ಆಗಸ್ಟ್ ವಿಶೇಷ ಸಂಚಿಕೆ ವಿಶಿಷ್ಟವೂ, ವಿನೂತನವಾಗಿಯೂ ಆಗಿ ಹೊರಬಂದಿದ್ದು ಓದುಗರಿಗೆ ಸಮಕಾಲೀನ ಸಮಸ್ಯೆಗಳ ಬಗ್ಗೆ ಹೊಸ ಒಳನೋಟಗಳನ್ನು ನೀಡುವಂತಿದೆ. ಮುಖ್ಯವಾಗಿ, ಇಂದಿನ ಮುಕ್ತಮಾರುಕಟ್ಟೆ ಸಮಯದಲ್ಲಿ ಜನಕ್ಕೆ ಬೌದ್ಧಿಕ ಅಥವಾ ಶೈಕ್ಷಣಿಕ ಸಂವಾದಗಳಿಗೆ ಸಮಯವಿಲ್ಲ ಎಂಬ ಮತ್ತು ನಾವಿಂದು ಪ್ರಗತಿಯ ಹೆಸರಿನಲ್ಲಿ ಅನುಸರಿಸುತ್ತಿರುವ ಹೆಚ್ಚು ಸುಖಾಪೇಕ್ಷೆಯಿಂದ ಪ್ರೇರಿತವಾದ ಜೀವನಕ್ರಮವೇ ಕರೋನಾಗೆ ಕಾರಣವಾಗಿದೆ ಎಂಬ ನಿಮ್ಮ ಸಂಪಾದಕೀಯ ಮಾತುಗಳು ನನ್ನ ವಿಶೇಷ ಗಮನ ಸೆಳೆದವು. ಹಾಗೇ ಇಂದಿನ ಸಮಸ್ಯೆಗಳ ಪರಿಹಾರಕ್ಕಾಗಿ ನಾವು ಮತ್ತೆ ಗಾಂಧಿ ವಿಚಾರಗಳತ್ತ ಹೊಸದಾಗಿ ನೋಡಬೇಕಾಗಿದೆ ಎಂಬ ನಿಮ್ಮ ಸಲಹೆ ಹಾಗೂ ಪ್ರಜಾಪ್ರಭುತ್ವದ ಯಶಸ್ಸಿಗೆ ನಿಸ್ವಾರ್ಥ ಮತ್ತು ತತ್ವ ಬದ್ಧತೆಯಿಂದ ಕೆಲಸ ಮಾಡುವ ವಿರೋಧ ಪಕ್ಷದ ಪಾತ್ರ ಕುರಿತ ನಿಮ್ಮ ಮಾತುಗಳೂ ಗಮನಾರ್ಹವಾಗಿವೆ.

ಈ ಸಂಚಿಕೆಯ ಪ್ರತಿ ಬರಹ ಮತ್ತು ಬರಹಗಾರರ ಆಯ್ಕೆಯ ಹಿಂದಿನ ನಿಮ್ಮ ಜನಪರ ಕಳಕಳಿ ಮತ್ತು ಪರಿಶ್ರಮ ಎದ್ದು ಕಾಣುತ್ತದೆ. ಇವು, ಸಾಮಾನ್ಯವಾಗಿ ನಾನು ಓದದ ಕಥೆ ಮತ್ತು ಕವನಗಳನ್ನೂ ನಾನು ಈ ಬಾರಿ ನಿನ್ನಿಂದ ಓದುವಂತೆ ಮಾಡಿವೆ. ನಿಮ್ಮ 'ಗಾಂಧಿ ಕಥನ'ದ ಬಗ್ಗೆ ಜನ ತೋರುತ್ತಿರುವ ಆಸಕ್ತಿಯ ಬಗೆಗಿನ ನಿಮ್ಮ ಸಾಲುಗಳು ನಾವು ನಿರಾಸೆ ಪಡುವ ಅಗತ್ಯವಿಲ್ಲ ಎಂದು ಸೂಚಿಸುತ್ತಾ ನಮಗೆ ಮುಂದಿನ ದಿನಗಳ ಬಗ್ಗೆ ಭರವಸೆಯನ್ನು ಮೂಡಿಸಿವೆ. ನಿಮ್ಮ ಹೊಸ ಒಳನೋಟಗಳ ಮತ್ತು ನಿರ್ಭಿಡೆಯ ಮಾತುಗಳು ಹೀಗೇ ಸಮಾಜಕ್ಕೆ ಮಾರ್ಗದರ್ಶಕವಾಗಿರಲಿ ಎಂದು ಹಾರೈಸುವೆ.

**–ಜಿ.ಬಿ. ಶಿವರಾಜು,** ಬೆಂಗಳೂರು

ವಿಶೇಷ ಸಂಚಿಕೆಯ ಕೊನೆಯ ಪುಟಗಳಲ್ಲಿರುವ Assasination of Mahatma Gandhi:trial and Verdict ಪುಸ್ತಕದ ನಿಮ್ಮ ಅವಲೋಕನಕ್ಕೆ ನೀವು ನೀಡಿರುವ ;ಇಂದಿನ ರಾಜಕಾರಣದ ಅಂದಿನ ಚರಿತ್ರೆ' ಎಂಬ ಶೀರ್ಷಿಕೆ ನಿಮ್ಮ ಸಂಪಾದಕೀಯದ ಮಾತುಗಳಿಂದ ಹಿಡಿದು ಇಡೀ ಸಂಚಿಕೆಯಲ್ಲಿನ ಎಲ್ಲ ಬರಹಗಳ ಆಶಯಗಳನ್ನು ಪ್ರತಿಬಿಂಬಿಸುವಂತಿದೆ. ಗಾಂಧಿ ಕೊಲೆಯ ಹಿಂದಿನ ತಾತ್ವಿಕತೆಯ ತಾರ್ಕಿಕ ಅಂತ್ಯದ ಆರಂಭವನ್ನು ನಾವಿಂದು ನೋಡುತ್ತಿದ್ದೇವೆ ಎಂಬುದನ್ನು ಈ ಪುಸ್ತಕದಲ್ಲಿನ ದಾಖಲೆಗಳು ಹೇಗೆ ಸೂಚಿಸುತ್ತಿವೆ ಎಂಬ ಸೂಕ್ಷ್ಮವನ್ನು ನೀವು ಹಿಡಿದಿಟ್ಟಿರುವ ಬಗೆ ನಿಮಗೆ ಮಾತ್ರ ಸಾಧ್ಯವಾದದ್ದು. ಜೊತೆಗೆ 'ಗಾಂಧಿ ಸೋತಿದ್ದಾರೆ; ಆದರೆ ಅದನ್ನು ಒಪ್ಪಿಕೊಳ್ಳಲು ಅವರು ನಿರಾಕರಿಸುತ್ತಿದ್ದಾರೆ' ಎಂಬ ಗೋಡ್ಸೆಯ ಮಾತನ್ನು ಸಮರ್ಪಕವಾಗಿ ಉತ್ತರಿಸಲು ಗಾಂಧಿ ವಕ್ತಾರರು ಮತ್ತು ಅಧ್ಯಯನಗಳು ವಿಫಲರಾಗಿರುವ ದುರಂತದ ಬಗ್ಗೆಯೂ ನೀವು ಗಮನ ಸೆಳೆದಿರುವುದು ಸಮಕಾಲೀನ ರಾಜಕೀಯ ವಿಶ್ಲೇಷಣೆಯ ದೃಷ್ಟಿಯಿಂದ ಬಹುಮುಖ್ಯವಾದ ಮಾತಾಗಿದೆ.

**–ಎನ್. ಸುಬ್ರಮಣ್ಯ,** ಮೈಸೂರು

ಹೊಸ ಮನುಷ್ಯ ಹೊಸ ಕವಚ ಧರಿಸಿ ಬಂದಿದ್ದಾನೆ; ಹೊರಗೆ ಹೊದಿಕೆ ಅಂದ, ಒಳಗೆ ಬರೆಹಗಳು ಒಂದಕ್ಕಿಂತ ಒಂದು ಚೆಂದ. ಅಭಿನಂದನೆಗಳು.

**–ಕಮಲಾ ಹಂಪನಾ,** ಬೆಂಗಳೂರು

ಹೊಸಮನುಷ್ಯ ವಿಶೇಷಾಂಕ ಸಮಗ್ರವಾಗಿ ಮೂಡಿಬಂದಿದ್ದು ಅದಕ್ಕಾಗಿ ತಮಗೆ ಅಭಿನಂದನೆಗಳು. ಯುವಾಲ್ ನೋವಾ ಹರಾರಿಯ ಸೇಪಿಯನ್ಸ್ ಪುಸ್ತಕದ ಎರಡು ಪುಟ್ಟ ಅಧ್ಯಾಯಗಳನ್ನು ಎಂ ರಾಜು ಅವರು ಅನುವಾದಿಸಿರುವುದು ಬಹಳ ಸೊಗಸಾಗಿ ಬಂದಿದೆ. ಆತನ ಚಿಂತನೆಗಳು ಕನ್ನಡಕ್ಕೆ ಬರುವ ಅಗತ್ಯವೂ ಇದೆ. ಹೊಸಮನುಷ್ಯ ಸರಣಿ ಬರಹಗಳಾಗಿ ಹರಾರಿಯ ಚಿಂತನೆಗಳನ್ನು ಕನ್ನಡಕ್ಕೆ ತರುವ ಪ್ರಯತ್ನ ಮಾಡಬಾರದೇಕೆ? ಅದನ್ನು ಎಂ. ರಾಜು ಅವರೇ ನಿರ್ವಹಿಸುವಂತಾದರೆ ಇನ್ನೂ ಒಳ್ಳೆಯದು.

ನನ್ನ ಗಮನ ಸೆಳೆದ ಎರಡು ಬರಹಗಳೆಂದರೆ ವಂದನಾಶಿವ ಅವರ ಕುರಿತು ಚೆನ್ನಿಯವರು ಬರೆದ ಲೇಖನ ಮತ್ತು ಕಮಲಾದೇವಿಯವರ ನೆನಪುಗಳನ್ನು ವೈದೇಹಿಯವರು ಕಥಿಸಿದ ರೀತಿ. ವಂದನಾಶಿವ ಅವರ ಬಗ್ಗೆ ರಾಜೇಂದ್ರ ಚೆನ್ನಿಯವರು ಬರೆದ ಬರವಣಿಗೆಯನ್ನು ಓದಿ ನಾನು ನಿಜಕ್ಕೂ ನಡುಗಿಬಿಟ್ಟೆ.

ಕವನಗಳಲ್ಲಿ ಜಿ ಪಿ ಬಸವರಾಜು, ಜ ನಾ ತೇಜಶ್ರೀ ಮತ್ತು ಸವಿತಾ ನಾಗಭೂಷಣ ಅವರ ಕವನಗಳು ದಾರ್ಶನಿಕ ನೋಟಗಳಿಂದ ತುಂಬಿ ತುಳುಕುತ್ತಿದ್ದವು. ಹಾಗೆಯೇ ನುಗಡೋಣಿಯವರ ಕಥೆ, ಹನೂರು ಅವರ ಮುಂಬರುವ ಕಾದಂಬರಿಯ ಆಯ್ದ ಭಾಗ, ಗೀತಾ ವಸಂತ ಅವರ ಲಲಿತ ಪ್ರಬಂಧ ಹೃದ್ಯವಾಗಿದ್ದವು.

ನಿಮ್ಮ ಸಂಪಾದಕೀಯದ ಮಾತುಗಳನ್ನು ಕನಿಷ್ಟ ಪಕ್ಷ ನಮ್ಮ ರಾಜ್ಯದ ಎಲ್ಲ ರಾಜಕಾರಣಿಗಳು ಮತ್ತು ಆರ್ಥಿಕ ನೀತಿ–ನಿರೂಪಕರು ಓದುವ ಅಗತ್ಯ ಇದೆ.

ಆದರೆ ಈ ಪುಸ್ತಕಾವಲೋಕನದಲ್ಲಿ ನೀವು ಕೃಷ್ಣಮೂರ್ತಿ ಹನೂರು ಅವರ ***'ಅಜ್ಞಾತನೊಬ್ಬನ ಆತ್ಮಚರಿತ್ರೆ'*** ಪುಸ್ತಕದ ಚರಿತ್ರೆಯ ಗ್ರಹಿಕೆಯ ಬಗ್ಗೆ ಬರೆದ ಮಾತುಗಳು ಸರಿ ಇಲ್ಲ. "ಚರಿತ್ರೆಯೊಂದಿಗೆ ಸಲ್ಲದ ಹುಡುಗಾಟಿಕೆ" ಎಂಬ ನಿಮ್ಮ ಶೀರ್ಷಿಕೆಯೇ ನಿಮಗೆ ಚರಿತ್ರೆ ಮತ್ತು ಅದು ರೂಪುಗೊಳ್ಳುವ ರೀತಿ–ನೀತಿಗಳ ಬಗ್ಗೆ ಆಧುನಿಕ ಚಿಂತನೆಗಳು ಏನು ಹೇಳುತ್ತಿವೆ ಎಂಬ ತಿಳಿವಳಿಕೆ ಇದ್ದಂತಿಲ್ಲ.

**–ನಿತ್ಯಾನಂದ ಬಿ ಶೆಟ್ಟಿ,** ತುಮಕೂರು

*(ಭಿನ್ನಾಭಿಪ್ರಾಯಗಳಿಗೆ ಸ್ವಾಗತವಿದೆ. ಆದರೆ ನಿಮಗೆ ಅದು ಗೊತ್ತಿಲ್ಲ, ಇದರ ತಿಳುವಳಿಕೆ ಇದ್ದಂತಿಲ್ಲ ಎಂಬ ಮಾತುಗಳು ಇಲ್ಲಿ ಬೇಡ. ನಿಮಗೆ ವಿವರಣೆ ಕೊಡಲು ಇದು ಉಚಿತ ಜಾಗವಲ್ಲ. –ಸಂ.)*

ಲಕ್ಷ್ಮೀಶ ತೋಳ್ಪಾಡಿ ಅವರ ಲೌಕಿಕ–ಅಲೌಕಿಕ, ಪ್ರೊ. ವಿವೇಕ ರೈಗಳ ಭಾಷಾ ಬಾಂಧವ್ಯ ಪ್ರಯೋಗಶಾಲೆ ಉತ್ತಮ ಪರಿಶೀಲನಾತ್ಮಕ ಲೇಖನಗಳು. ಅಲೌಕಿಕದ ಕುರಿತು ಸಾಕ್ಷೀಭಾವದ ಬಗೆಗೆ ಹೇಳಿರುವುದು ಬಹ್ವರ್ಥಸೂಚಕ. . .

ಕೊರೊನಾ ಅಪತ್ತಿಗೆ ನಮ್ಮ ಆರ್ಥಿಕತೆ, ಜೀವನವಿಧಾನ ಕಾರಣವೆನ್ನುವುದು–ದೂರಾನ್ವಯ. ಹಿಂದಣ ಜೀವನವಿಧಾನಕ್ಕೇ ಹೋಗೋಣವೇ? ಮಾರಕ ರೋಗಗಳ ಧಾಳಿಗಳು ಎಲ್ಲಾ ಕಾಲಗಳಲ್ಲೂ ಇತ್ತಲ್ಲವೆ? ಪುಟ ೩೧ರಲ್ಲಿ ಡಾ.ರಾಜೇಂದ್ರ ಚೆನ್ನಿಯವರ ಒಂದು ಮಾತು. ಜಿ.ಎಸ್.ಟಿ.–ಬಿಲ್ ಗೇಟ್ಸ್–ಇತ್ಯಾದಿ. ಅಷ್ಟು ಸರಳವಿಲ್ಲ. ಸಿಂಹ–ಹಾಲು– ಬೆಕ್ಕು–ಮಿಯಾಂ ಎಂದೆಲ್ಲ ಬರೆಯುವುದು ದ್ವೇಷದ ಮಾತು. ಅಂತಾರಾಷ್ಟ್ರೀಯ ಸಹಕಾರ, ತಾಂತ್ರಿಕತೆ ಅಷ್ಟು ಸುಲಭವಲ್ಲ. ಚಳವಳಿಗಾರರ ಆಕ್ರೋಶ

### ಚಂದಾದಾರರಿಗೆ ಸೂಚನೆ

**ಕಳೆದ ವರ್ಷ ಎರಡು ವರ್ಷಗಳ ಚಂದಾ ನೀಡಿದವರು ಮತ್ತು ಕಳೆದ ಜನವರಿಯಿಂದೀಚೆಗೆ ಒಂದೂವರೆ ವರ್ಷದ ಚಂದಾ ರೂ.350.– ಅಥವಾ ರೂ. 300/– ನೀಡಿರುವವರ ಹೊರತಾಗಿ ಮಿಕ್ಕೆಲ್ಲರ ಚಂದಾ ಈ ಸಂಚಿಕೆಯೊಂದಿಗೆ ಮುಗಿದಿದೆ. ದಯವಿಟ್ಟು ರೂ200/– ಕಳಿಸಿ ಚಂದಾ ನವೀಕರಿಸಿಕೊಳ್ಳಿ ಎಂದು ಕೋರುತ್ತೇವೆ. ಸೆಪ್ಟಂಬರ್ 20ರೊಳಗಾಗಿ ಚಂದಾ ನವೀಕರಣ ಮಾಡದವರಿಗೆ ಅಕ್ಟೋಬರ್‌ನಿಂದ ಸಂಚಿಕೆಗಳನ್ನು ಕಳಿಸಲಾಗುವುದಿಲ್ಲ. ಕ್ಷಮೆ ಇರಲಿ**

**ಹೊಸದಾಗಿ ಚಂದಾದಾರಾಗಬಯಸುವವರು ರೂ300/– ಚಂದಾ ಕಳಿಸಿ ನಮ್ಮ ಆಗಸ್ಟ್ ವಿಶೇಷಾಂಕವನ್ನೂ ಪಡೆಯಬಹುದು.**

**ಚಂದಾ ಹಣವನ್ನು ಶಿವಮೊಗ್ಗದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಗೀತಾಕೃಪಾ ಶಾಖೆಯಲ್ಲಿ (ifsc code: sbin 0040444) ಸಂಪಾದಕರು: ಹೊಸ ಮನುಷ್ಯ ಎಂಬ ಹೆಸರಿನ ಚಾಲ್ತಿ ಖಾತೆ ಸಂಖ್ಯೆ: 64110358330 ಇಲ್ಲಿಗೆ ಕಳಿಸಿ 9449242284 ಮೊಬೈಲ್ ಸಂಖ್ಯೆಗೆ ನಿಮ್ಮ ಪೂರ್ಣ ವಿಳಾಸ ಕಳಿಸಿ ಖಚಿತಪಡಿಸಬೇಕು. ಚಂದಾ ಹಣವನ್ನು ಎಂ.ಓ./ಡಿಡಿ./ಚೆಕ್ ಮೂಲಕ ಕೂಡ ಕಳಿಸಬಹುದು.**

**ನಮ್ಮ ಹಳೆಯ ಚಂದಾದಾರರು ತಮ್ಮ ಚಂದಾ ನವೀಕರಣದೊಂದಿಗೆ ತಮಗೆ ಪರಿಚಯವಿರುವ ಇನ್ನೋರ್ವರನ್ನು ಚಂದಾದಾರರನ್ನಾಗಿ ಮಾಡಿಸಿದರೆ ಪತ್ರಿಕೆಯ ಆರ್ಥಿಕ ಸುಭದ್ರತೆಗೆ ನೆರವಾದಂತಾಗುತ್ತದೆ.**–ಸಂ.

ಅದೆಲ್ಲ. ಜಿ.ಎಸ್.ಟಿ. ಮಾಡೆಲ್‌ಗಳ ಕುರಿತು ಚರ್ಚೆ ಮಾಡೋಣ. ಜಿ.ಎಸ್.ಟಿ. ಮಾಡೆಲ್‌ಗಳು ಈಗಾಗಲೇ ಹಲವು ಇವೆ. ಬಿಲ್ ಗೇಟ್ಸ್‌ರಲ್ಲಿ ಕ್ಯಾಲ್ಕ್ಯುಲೇಶನ್ ಕೇಳಿದರೆ ಏನು ತಪ್ಪು, ಅದಕ್ಕೆ ಸಣ್ಣ ಮಾತು ಬೇಕೆ?

ಜಿ.ಎಸ್.ಟಿ.ಯೇ ಅಪರಾಧ, ಕಾರ್ಪೋರೇಟ್‌ಗಳೆಲ್ಲ ದುಷ್ಟರು, ಜಾಗತೀಕರಣವು ಸರ್ವಾಪರಾಧ ಎಂಬಂತೆ ಹೇಳುವುದು ಪ್ರತಿಗಾಮಿಯೇ ಆಗಿದೆ.

**–ಎಂ. ಪ್ರಭಾಕರ ಜೋಶಿ,** ಮಂಗಳೂರು

*(ಹಿಂದೆ ಅಥವಾ, ಮುಂದೆ ಹೋಗುವ ಮಾತೇ ಇಂದು ಅರ್ಥಹೀನ. ಸಕಲ ಜೀವಿಗಳಿಗೆ ಒಳಿತು ಮಾಡುವಂತಹ ದಾರಿಯಲ್ಲಿ ಹೋಗುವ ಮಾತಷ್ಟೇ ಇಂದು ಮುಖ್ಯ ಎಂದು 'ಹೊಸ ಮನುಷ್ಯ' ನಂಬಿದೆ. ಕಣ್ಣಿದ್ದೂ ಕುರುಡರಂತೆ ಮಾತಾಡುವವರಿಗೆ ನಮ್ಮಲ್ಲಿ ಉತ್ತರವಿಲ್ಲ–ಸಂ.)*

ಆಗಸ್ಟ್ ವಾರ್ಷಿಕ ವಿಶೇಷ ಸಂಚಿಕೆ ನಿಮ್ಮ ಸಂಪಾದಕೀಯ ಟಿಪ್ಪಣಿಗಳಿಂದ ಹಿಡಿದು ಪುಸ್ತಕಾವಲೋಕನಗಳವರೆಗೆ ಸಮೃದ್ಧ ಓದಿಗೆ ಸಮಗ್ರ ಆಹಾರ ಸಾಮಗ್ರಿಯಂತಿದೆ. ವಿಶೇಷವಾಗಿ ಯುವಾಲ್ ನೊಹ ಹರಾರಿಯವರ ಪುಸ್ತಕದ ಆಯ್ದ ಭಾಗದ ಸರಳ ಅನುವಾದ, ಮೇಧಾ ಪಾಟ್ಕರ್–ವಂದನಾ ಶಿವ–ಮಮತಾ ಬ್ಯಾನರ್ಜಿ ವ್ಯಕ್ತಿ ಚಿತ್ರಗಳು, ಅಮರೇಶ ನುಗಡೋಣಿಯವ ಕಥೆ ಗಮನ ಸೆಳೆದವು. ಓ.ಎಲ್. ನಾಗಭೂಷಣ ಸ್ವಾಮಿಯವರವರ ಲೇಖನ ಇಂದಿನ ನಮ್ಮ ಕಾಲೇಜು ಮೇಷ್ಟ್ರುಗಳ ಅಧ್ಯಯನಶೀಲತೆ ಮುಟ್ಟಿರುವ ಅಧೋಗತಿಗೆ ಕೈಗನ್ನಡಿಯಂತಿದೆ. ಅಧ್ಯಾಪಕ ವೃಂದದ ಆತ್ಮಾವಲೋಕನಕ್ಕೆ ಇದು ಸಕಾಲ. ನನ್ನನ್ನು ಯೋಚನೆಗೆ ಹಚ್ಚಿದ ಇನ್ನೊಂದು ಬರಹವೆಂದರೆ ಪರ್ಯಾಯ ಬದುಕಿನ ಹೊಳಹುಗಳನ್ನು ನೀಡಿದ ಸಂತೋಷ್ ಕೌಲಗಿಯವರ ಲೇಖನ. ಆದರೆ ಸತ್ಯಜಿತ್ ರಾಯ್ ಕುರಿತ ಪಿ.ಶೇಷಾದ್ರಿ ಅವರ ಲೇಖನ ಅದರ ಸಂಕ್ಷಿಪ್ತತೆಯಿಂದಾಗಿ ನಿರಾಶೆಗೊಳಿಸಿತು.

ನಿಮ್ಮ ಸಂಪಾದಕೀಯದಲ್ಲಿ ಸಿದ್ಧರಾಮಯ್ಯನವರು ನಿಮ್ಮ 'ಗಾಂಧಿ ಕಥನ' ಕೃತಿಯನ್ನು ಪುಟ ಬಿಡದೆ ಓದಿದ್ದರ ಬಗ್ಗೆ ನಿಮ್ಮೊಂದಿಗೆ ಮಾತಾಡಿದ್ದನ್ನೂ, ನೀವು ಅವರಿಗೆ ಬರೀ ಓದಿದರೆ ಸಾಲದು ಅದರ ಪರಿಣಾಮವೂ ನಿಮ್ಮಲ್ಲಿ ಕಾಣಬೇಕೆಂದು ನೀವು ಹೇಳಿದ್ದನ್ನೂ ಬರೆದಿದ್ದೀರಿ. ಆದರೆ ಕಾಂಗ್ರೆಸ್ ಬದಲಾಗುವ ಯಾವ ಸೂಚನೆಗಳೂ ಕಾಣುತ್ತಿಲ್ಲ. ಅಲ್ಲಿ ಓದುವ ಸಂಸ್ಕೃತಿ ಎಂದೋ ಬತ್ತಿ ಹೋಗಿದೆ. ಏಕೆಂದರೆ ಸಾವರ್ಕರ್ ಬಗೆಗೋ ಶ್ಯಾಮಾಪ್ರಸಾದ್ ಮುಖರ್ಜಿಯವರ ಬಗೆಗೋ ಇಂತಹ ಪುಸ್ತಕ ಬಂದಿದ್ದರೆ ಸಂಘ ಪರಿವಾರದ ಕಾರ್ಯಕರ್ತರು ಅದನ್ನು ಮನೆ ಮನೆಗೆ ಮುಟ್ಟಿಸಿ, ಸಿಕ್ಕ ಸಿಕ್ಕ ಗ್ರಂಥಾಲಯಗಳಿಗೆ ತುಂಬಿ ಸಾವಿರ ಸಾವಿರ ಪ್ರತಿಗಳನ್ನು ಖರ್ಚು ಮಾಡುತ್ತಿದ್ದರು.. ಆದರೆ 'ಗಾಂಧಿ ಕಥನ'ವನ್ನು ಬೆರಳೆಣಿಕೆಯ ಕಾಂಗ್ರೆಸ್ಸಿಗರೂ ಓದಿರುವ ಸಾಧ್ಯತೆ ಇಲ್ಲ. ಯಾಕೆಂದರೆಅವರು ಗಾಂಧಿಯನ್ನು ಮರೆತು ಎಷ್ಟೋ ವರ್ಷಗಳಾಗಿವೆ.

**–ಎಂ. ಧನಂಜಯಕುಮಾರ್,** ಮಂಗಳೂರು

ಮುವ್ವರು ಮಹಿಳಾ ಹೋರಾಟಗಾರ್ತಿಯರ ಬಗ್ಗೆ ಲೇಖನ ಮಾಲೆ ಸಕಾಲಿಕವೂ, ಮಾಹಿತಿಪೂರ್ಣವೂ ಆಗಿದೆ. ಆದರೆ ದಿನೇಶ್ ಅಮೀನ್ ಮಟ್ಟು ಅವರು ಮಮತಾ ಬ್ಯಾನರ್ಜಿಯವರ ಬಗ್ಗೆ ವಸ್ತುನಿಷ್ಠವಾಗಿ ಬರೆಯುವ ಭರದಲ್ಲಿ ಅವರಿಗೆ ಅನ್ಯಾಯ ಮಾಡಿದ್ದಾರೆನಿಸುತ್ತದೆ. ಯಾವುದೇ ರಾಜಕೀಯ ಹಿನ್ನೆಲೆ ಇಲ್ಲದ ಕೆಳ ಮಧ್ಯಮ ವರ್ಗದ ಆ ಒಂಟಿ ಹೆಣ್ಣುಮಗಳು ಕಾಂಗ್ರೆಸ್ ಮತ್ತು ಸಿಪಿಎಂನಂತಹ ಬಲಿಷ್ಠ ಪಕ್ಷಗಳನ್ನು ಎದುರು ಹಾಕಿಕೊಂಡು ಅವುಗಳ ಬರ್ಬರ ಪುಂಡಾಟಿಕೆಯನ್ನು ಎದುರಿಸಿ ಈಗ ಈ ಎರಡೂ ಪಕ್ಷಗಳನ್ನು ಮೀರಿಸುವ ರೀತಿಯಲ್ಲಿ ಬಿಜೆಪಿಗೆ ಪ್ರತಿ ಸವಾಲು ಹಾಕುವಲ್ಲಿ ತೋರಿಸುತ್ತಿರುವ ಸ್ಥೈರ್ಯ ಸಾಮಾನ್ಯವಾದುದಲ್ಲ. ಅವರು ಈ ಹಿಂದೆ ಬಿಜೆಪಿ ಸಹವಾಸ ಮಾಡಿದ್ದರೆಂದು ಅವರ ರಾಜಕೀಯ ನೈತಿಕತೆಯನ್ನೂ, ವಿಶ್ವಾಸಾರ್ಹತೆಯನ್ನೂ ಪ್ರಶ್ನಿಸುವುದು ಉಚಿತವಲ್ಲ. ಏಕೆಂದರೆ ದೇಶದ ಬಹುತೇಕ ಪಕ್ಷಗಳು ಒಂದಲ್ಲ ಒಂದು ಸಮಯದಲ್ಲಿ ಬಿಜೆಪಿಯ ಸಹವಾಸ ಮಾಡಿವೆ, ಅಲ್ಲದೆ ಮಮತಾ ಮಾಡಿದ್ದು ವಾಜಪೇಯಿಯವರ ಬಿಜೆಪಿಯ ಸಹವಾಸವನ್ನು. ಈ ಮುಖ್ಯ ಸಂಗತಿಯನ್ನು ಅಮೀನ್ ಮಟ್ಟು ನಿರ್ಲಕ್ಷಿಸಿದ್ದಾರೆ.

**–ಕೆ.ಟಿ.ಶಿವಾನಂದ,** ಮೈಸೂರು

ಕಳೆದ ಶತಮಾನದಲ್ಲಿ ಗಂಡು ದೇಹದಲ್ಲಿ ಹೆಣ್ಣು ಮನಸ್ಸು ಎಂದೇ ಜಗತ್ತಿನಾದ್ಯಂತ ಗುರುತಿಸಲ್ಪಟ್ಟಿದ್ದವರೆಂದರೆ, ಮಹಾತ್ಮಾ ಗಾಂಧಿ. ಆದರೆ ಕಳೆದ ಸಂಚಿಕೆಯಲ್ಲಿ ಪ್ರಕಟವಾಗಿರುವ ಹೆಣ್ನೋಟ ಕುರಿತ ವಿನಯಾ–ಸಬಿತಾ ಬನ್ನಾಡಿಯವರ ಸಂವಾದದಲ್ಲಿ ಅವರ ಹೆಸರು ಬಿಟ್ಟು ಇನ್ನೆಲ್ಲರ ಹೆಸರುಗಳಿವೆ. ಹಾಗಾಗಿ ಹೆಣ್ನೋಟ ಎಂಬುದೂ ಸ್ತ್ರೀವಾದದಂತೆ ಇನ್ನೊಂದು ಪೂರ್ವಾಗ್ರಹ ಪೀಡಿತ ಸೈದ್ಧಾಂತಿಕ ಪರಿಕಲ್ಪನೆ ಎಂದೇ ಹೇಳಬೇಕಾಗುತ್ತದೆ.

**–ಆರ್. ರಾಮಮೂರ್ತಿ,** ದಾವಣಗೆರೆ

**ವಂದನಾ ಶಿವ - ಶ್ರೀಶ್ರೀ ಹಾಗೂ ಅಲೌಕಿಕತೆ - ವಿಶ್ವಪ್ರಜ್ಞೆ ಇತ್ಯಾದಿ**

ಈ ಸಲದ ಹೊಸ ಮನುಷ್ಯ ವಿಶೇಷವಾಗಿದೆ, ನಿಜಕ್ಕೂ ಹೊಸತನದಿಂದ ಕೂಡಿದೆ. ಇದರಲ್ಲಿನ ಒಂದೊಂದು ಅಧ್ಯಾಯವೂ ಮೌಲಿಕವಾಗಿದ್ದು ಲೇಖಕರ ಅಧ್ಯಯನಶೀಲತೆ, ಸಂಪಾದಕರ ಕಾಳಜಿ, ಪರಿಶ್ರಮಗಳು ವ್ಯಕ್ತವಾಗುತ್ತವೆ. ನಿಮಗೆ ಅಭಿನಂದನೆಗಳು ಹಾಗೂ ಕೃತಜ್ಞತೆಗಳು. ಈ ಸಂಚಿಕೆಯ ಎರಡು ಲೇಖನಗಳ ಬಗ್ಗೆ ನನ್ನ ಅಭಿಪ್ರಾಯಗಳು ಹೀಗಿವೆ:

ವಂದನಾ ಶಿವ ಅವರನ್ನು ಕುರಿತ ಲೇಖನದಲ್ಲಿ ರಾಜೇಂದ್ರ ಚೆನ್ನಿಯವರು ಅವರ ಅರಣ್ಯನಾಶ ಮತ್ತು ಸ್ತ್ರೀಶೋಷಣೆಗಳ ನಡುವಿನ ಅವಿನಾ ಸಂಬಂಧ ಪರಿಕಲ್ಪನೆಯನ್ನು ಬಹುಮಾರ್ಮಿಕವಾಗಿ ನಿರೂಪಿಸುತ್ತಾರೆ, ಮಾತ್ರವಲ್ಲ ಅತಿರಮ್ಯವೆನಿಸುವಷ್ಟು ಕೊಂಡಾಡುತ್ತಾರೆ. ಆದರೆ ವಂದನಾ ಶಿವ ಕಾರ್ಪೋರೇಟ್ ಶೋಷಕರಿಗೆ ಬದುಕುವ ಕಲೆ ಕಲಿಸುವ ಶ್ರೀ ಶ್ರೀ ರವಿಶಂಕರ್‌ರಂತಹವರನ್ನು ತನ್ನ ಗುರುವೆಂದು ಭಾವಿಸುತ್ತಾರೆ. ಅವರ ವಿಶ್ವವಿದ್ಯಾಲಯದ ಪರಿಸರ ವಿಜ್ಞಾನ ವಿಭಾಗದಲ್ಲಿ ಬೋಧಕಿಯಾಗಿ, ಸಲಹಾ ಮಂಡಲಿಯ ಸದಸ್ಯರಾಗಿದ್ದಾರೆ. ಕೆಲವು ವರ್ಷಗಳ ಹಿಂದೆ ಶ್ರೀ ಶ್ರೀ ಯಮುನಾ ತೀರದಲ್ಲಿ ಧಾರ್ಮಿಕ ಸಭೆ ನಡೆಸಿ ಹಸಿರು ನ್ಯಾಯಾಲಯದಿಂದ ಛೀಮಾರಿ ಹಾಕಿಸಿಕೊಂಡಿದ್ದರು. ಇದರಲ್ಲಿಯೂ ವಂದನಾ ಶಿವ ಕೂಡ ಸಕ್ರಿಯವಾಗಿ ಪಾಲ್ಗೊಂಡಿದ್ದರು. ಇಂಥವರನ್ನು ಹೊಗಳುವ ರಾಜೇಂದ್ರ ಚೆನ್ನಿಯಂತಹ ಚಿಂತಕರಿಗೆ ಇವೆಲ್ಲ ಕಾಣಿಸುವುದಿಲ್ಲವೇ?

ಇನ್ನು ಲಕ್ಷ್ಮೀಶ ತೋಳ್ಪಾಡಿಯವರ ಲೇಖನದಲ್ಲಿ ತಮ್ಮ ಆಧ್ಯಾತ್ಮಿಕ ಗುರುವಿನ ಮೇಲಿನ ಅವರ ಶ್ರದ್ಧೆ ಅಚಲ ನಂಬಿಕೆಗಳು ವ್ಯಕ್ತವಾಗಿವೆ. ಆದರೆ ಅವರು ತಮ್ಮ ಗುರುವನ್ನು ಗ್ರಹಿಸಿ ಚಿತ್ರಿಸಿರುವ ಕ್ರಮವು ಓದುಗನಲ್ಲಿ ಯಾವುದೋ ಕಾಲ್ಪನಿಕ ವಿಚಾರದಲ್ಲಿ ಅಂಧವಿಶ್ವಾಸ ಮೂಡಿಸುವ ಪ್ರಯತ್ನದಂತೆ ಕಾಣಿಸುತ್ತದೆ. ಜೊತೆಗೆ ತಮ್ಮ ಗುರುವಿನ ಪ್ರಜ್ಞಾಸ್ಥಿತಿ ವಿಶ್ವಪ್ರಜ್ಞೆಯ ತುರೀಯಾವಸ್ಥೆ ಎಂದು ಓದುಗನನ್ನು ನಂಬಿಸುವ ಸೂಕ್ಷ್ಮ ಪ್ರಯತ್ನವೂ ಅವರ ಬರಹದಲ್ಲಿ ಕಾಣಿಸುತ್ತದೆ.

ಕುವೆಂಪು ಅವರ ಕವಿಮನಸ್ಸು 'ವಿಶ್ವಮಾನವ', 'ವಿಶ್ವಪ್ರಜ್ಞೆ' ಮುಂತಾದ ಪದಗಳನ್ನು ಸೃಷ್ಟಿಸಿರಬಹುದು. ಆದರೆ ವಿಶ್ವಪ್ರಜ್ಞೆ ಎಂಬ ಪದಕ್ಕೆ ಕುವೆಂಪು ಆಗಲಿ, ಲೇಖಕರಾಗಲಿ ನೀಡಿರುವ ಅರ್ಥಕ್ಕೆ ಯಾವುದೇ ಶ್ರುತಿಪ್ರಮಾಣ ಸಿಗುವುದಿಲ್ಲ. ಬದಲಾಗಿ ವಿಶ್ವಪ್ರಜ್ಞೆ ಎಂಬುದಿಲ್ಲ ಎಂದೇ ಉಪನಿಷತ್ತುಗಳು ಸ್ಪಷ್ಟವಾಗಿ ಸಾರುತ್ತವೆ. (ಮಾಂಡೂಕ್ಯೋಪನಿಷತ್ ೭)

ಅಲೌಕಿಕ ಮತ್ತು ವಿಶ್ವಪ್ರಜ್ಞೆ ಎಂಬೆರಡು ಪದಗಳ ನಡುವೆ ಭೂಮ್ಯಾಕಾಶಗಳಷ್ಟು ಅಂತರವಿದೆ. 'ವಿಶ್ವಪ್ರಜ್ಞೆ' ಎಂಬುದು ವರ್ಣನಾತ್ಮಕ, ನಿರ್ವಚನಾತ್ಮಕ ಪದವಾದರೆ 'ಅಲೌಕಿಕ' ಎಂಬುದಾದರೂ ಯಾವುದೇ ವರ್ಣನೆ, ನಿರ್ವಚನೆಗಳಿಗೆ ಆಸ್ಪದ ನೀಡದ ನಿಷೇಧಾತ್ಮಕ ಪ್ರಯೋಗವಾಗಿದೆ. ಲೇಖಕರು ಎರಡನ್ನೂ ಒಂದೇ ಎಂಬಂತೆ ಗ್ರಹಿಸಿ ನಿರೂಪಿಸಿರುವುದು ಇಷ್ಟೆಲ್ಲ ಗೊಂದಲಕ್ಕೆ ಕಾರಣವಾಗಿದೆಯೇನೋ.

ಲೇಖಕರಿಗಾದ ಪೂಜ್ಯರಾದ ಆ ಅನಾಮಧೇಯ ಗುರುವಿನ ಅನುಭವವನ್ನಾಗಲಿ ಅಥವಾ ಶ್ರೀರಾಮಕೃಷ್ಣರ ಭಾವಸಮಾಧಿಯನ್ನಾಗಲಿ ಯಾರೂ ಅನುಮಾನಿಸುವುದಿಲ್ಲ. ಆದರೆ ಒಂದು ಅನುಭವ ಅಲೌಕಿಕವಾದೊಡನೆ ಅದು ವಿಶ್ವಾತ್ಮಕ ಪರಮಾನುಭವವೇ ಆಗಬೇಕಿಲ್ಲ. ಅದೊಂದು ಮನೋವಿಕಲ್ಪವೂ ಆಗಿರಬಹುದು. ತನ್ನ ಭಾವಸಮಾಧಿಯೂ ಒಂದು ಮನೋವಿಕಲ್ಪವಾಗಿದೆ ಎಂಬ ಶ್ರೀರಾಮಕೃಷ್ಣರ ಕಾಣ್ಕೆ ಅವರನ್ನು ಎಲ್ಲ ಕಾಲದಲ್ಲೂ ಪೂಜನೀಯರನ್ನಾಗಿಸಿದೆ.

**–ಟಿ.ಎನ್. ವಾಸುದೇವಮೂರ್ತಿ,** ಬೆಂಗಳೂರು

ರಾಜೇಂದ್ರ ಚೆನ್ನಿ-ಲಕ್ಷ್ಮೀಶ ತೋಳ್ಪಾಡಿಯವರ ಉತ್ತರ:

ವಂದನಾ ಶಿವಾ ಅವರ ಕುರಿತು ನನ್ನ ಲೇಖನದ ಬಗ್ಗೆ ಬಂದಿರುವ ಒಂದೆರಡು ಪ್ರತಿಕ್ರಿಯೆಗಳ ಬಗ್ಗೆ ಸಂಕ್ಷಿಪ್ತವಾದ ಪ್ರತಿಕ್ರಿಯೆಯನ್ನು ನನ್ನಿಂದ ಸಂಪಾದಕರು ಕೇಳಿದ್ದಾರೆ. ವಂದನಾ ಶಿವ ಶ್ರೀ ಶ್ರೀ ಎಂದು ಕರೆಯಿಸಿಕೊಳ್ಳುವ ನಕಲಿ ದೇವಮಾನವನ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದು ಅದರಲ್ಲೂ ಯಮುನಾ ತಟದಲ್ಲಿ ಪರಿಸರನಾಶ ಮಾಡಿ ನಡೆಸಿದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು ವ್ಯಾಪಕವಾಗಿ ಟೀಕೆಗೆ ಒಳಗಾಗಿದೆ. ಅವರ ಈ ನಡೆಗೆ ಯಾವ ಸಮರ್ಥನೆಯೂ ಇಲ್ಲ. "ಆಧ್ಯಾತ್ಮಿಕ ಪರಿಸರವಾದ"ವೆಂದು ಕರೆಯಲಾಗುವ ಚಿಂತನೆಯ ದೌರ್ಬಲ್ಯವೆಂದರೆ ಅದು ಧರ್ಮ ಹಾಗೂ ಆಧ್ಯಾತ್ಮದ ಹೆಸರಿನಲ್ಲಿ ಪರಿಸರವಾದವನ್ನು ಬಳಸಿಕೊಳ್ಳುವ ಬಂಡವಾಳಶಾಹಿ ಪರವಾಗಿರುವ ಗುರುಗಳ ರಾಜಕೀಯದ ಬಗ್ಗೆ ಎಚ್ಚರವಾಗಿರುವುದಿಲ್ಲ. ಹಾಗಾದಾಗ ಅದನ್ನು ವಿಮರ್ಶಿಸಲೇಬೇಕು. ವಂದನಾ ಶಿವ ಶ್ರೀ ಶ್ರೀ ಬಗ್ಗೆ ತಮ್ಮ ನಿಲುವನ್ನು ಸ್ಪಷ್ಟಪಡಿಸಿದ್ದ ದಾಖಲೆ/ಬರಹ ನನಗೆ ಸಿಕ್ಕಿಲ್ಲ. ಆದರೆ ಈ ವಿಷಯದಲ್ಲಿ ತಪ್ಪು ಹೆಜ್ಜೆಯನ್ನು

೧೧ನೇ ಪುಟಕ್ಕೆ)

ಪ್ರಚಲಿತ–೧

# ಭೂ ಸುಧಾರಣಾ ಕಾಯಿದೆ ತಿದ್ದುಪಡಿಯ ಸುತ್ತಮುತ್ತ...

–ಡಿ.ಎಸ್, ನಾಗಭೂಷಣ

**ರಾಜ್ಯದಲ್ಲಿ ೧೯೭೪ರಲ್ಲಿ ಭೂಸುಧಾರಣಾ ಕಾಯಿದೆ ಜಾರಿಗೆ ಬಂದಾಗಿನಿಂದಲೂ ಭೂ ಸುಧಾರಣೆಯ ಉದ್ದೇಶ ಮತ್ತು ಆ ಕಾಯಿದೆ ಕುರಿತ ನಿಲುವುಗಳು ಬದಲಾಗುತ್ತಾ ಬಂದಿದ್ದು ಈಗ ಅದು ಬುಡಮೇಲುಗೊಳ್ಳುವ ಹಂತ ತಲುಪಿದೆ. ಈ ಹಂತ ತಲುಪಿದ್ದು ಏಕೆ ಮತ್ತು ಹೇಗೆ ಎಂಬುದನ್ನು ಈ ಲೇಖನ ಚರ್ಚಿಸುತ್ತದೆ.–ಸಂ.**

**ಕ**ರ್ನಾಟಕ ಸರ್ಕಾರದ ಸಚಿವ ಸಂಪುಟವು ದೇಶದಲ್ಲೇ ಬಹು ಪ್ರಗತಿಪರವೆಂದು ಶ್ಲಾಘನೆಗೆ ಒಳಗಾಗಿದ್ದ ಭೂ ಸುಧಾರಣಾ ಕಾನೂನಿನ ಹಲವು ನಿರ್ಣಾಯಕ ವಿಧಿಗಳನ್ನು ತಿದ್ದುಪಡಿ ಮಾಡಲು ಅಧಿಕೃತವಾಗಿ ನಿರ್ಧರಿಸಿದೆ. ೧೯೭೪ರಲ್ಲಿ ದೇವರಾಜ ಅರಸು ಅವರು ಮುಖ್ಯಮಂತ್ರಿಯಾಗಿದ್ದಾಗ, ೧೯೫೧ರಲ್ಲಿ' ಶಾಂತವೇರಿ ಗೋಪಾಲಗೌಡರ ನೇತೃತ್ವದಲ್ಲಿ ನಡೆದಿದ್ದ 'ಕಾಗೋಡು ಭೂ ಸತ್ಯಾಗ್ರಹ' ರಾಜ್ಯದಲ್ಲಿ ಮೊಳಗಿಸಿದ್ದ ;ಉಳುವವನೇ ನೆಲದೊಡೆಯ' ಎಂಬಸುಪ್ರಸಿದ್ಧ ಸಮಾಜವಾದಿ ಘೋಷಣೆಯ ಆಶೋತ್ತರಗಳಿಗೆ ಪ್ರತಿಸ್ಪಂದನವಾಗಿ ಈ ಕಾನೂನು ಜಾರಿಗೆ ಬಂದು ಸಾವಿರಾರು ಗೇಣಿದಾರರು ಭೂ ಒಡೆತನ ಪಡೆದು ತಮ್ಮ ಬದುಕಿನ ಸಾರ್ಥಕ ಕ್ಷಣಗಳನ್ನು ಕಂಡರು. ಆನಂತರ ರೈತ ಹಿನ್ನೆಲೆಯಿಂದಲೇ ಬಂದ ಮುಖ್ಯಮಂತ್ರಿಗಳೂ ಸೇರಿದಂತೆ ಹಲವು ರಾಜಕೀಯ ನಾಯಕರ ಹಿತಾಸಕ್ತಿಗಳಿಗನುಗುಣವಾಗಿ ಈ ಕಾನೂನಿನ ನಿರ್ಣಾಯಕ ಲಕ್ಷಣಗಳು ಒಂದೊಂದಾಗಿ ಕಾಣೆಯಾಗುತ್ತಾ, ಕಾನೂನು ಸಡಿಲಗೊಳ್ಳುತ್ತಾ ಕ್ರಮೇಣ ತನ್ನ ಉದ್ದೇಶವನ್ನೇ ಕಳೆದುಕೊಳ್ಳುತ್ತಾ ಹೋಯಿತು. ಈಗ ಯಡಿಯೂರಪ್ಪನವರ ನೇತೃತ್ವದ ಸರ್ಕಾರ ಈ ಕಾನೂನಿನ ಮುಖ್ಯ ಪ್ರಾಣವನ್ನೇ ತೆಗೆಯಹೊರಟಂತಿದೆ. ಭೂ ಒಡೆತನದ ಪರಿಮಿತಿಯನ್ನು ಹೆಚ್ಚಿಸುವುದು, ಕೃಷಿ ಹಿನ್ನೆಲೆ ಇಲ್ಲದವರೂ, ಹಾಗೆ ನೋಡಿದರೆ ಯಾರು ಬೇಕಾದರೂ ಕೃಷಿಭೂಮಿಯನ್ನು ಕೊಳ್ಳಲು, ಅದನ್ನು ಹೇಗೆ ಬೇಕಾದರೂ ಪರಿವರ್ತಿಸಿಕೊಂಡು ಬಳಸಿಕೊಳ್ಳಲು ಈ ತಿದ್ದುಪಡಿ ಅನುವು ಮಾಡಿಕೊಡುತ್ತದೆ. ಇದನ್ನು ಬದಲಾದ ಕಾಲದ ಅಗತ್ಯವೆಂದು ಸರ್ಕಾರ ಸಮರ್ಥಿಸಿಕೊಳ್ಳುತ್ತಿದೆ.

ಬದಲಾದ ಕಾಲ ಎಂದರೆ ಹಲವು ಅರ್ಥಗಳಿವೆ. ಮೊದಲನೆಯದಾಗಿ ನಮ್ಮ ಆರ್ಥಿಕತೆ ಕೃಷಿ ಕೇಂದ್ರಿತವಾಗಿ ಈಗ ಉಳಿದಿಲ್ಲ ಎನ್ನುವುದು. ಇನ್ನೊಂದು ದೇಶ ಆಹಾರ ಭದ್ರತೆಯನ್ನು ಸಾಧಿಸಿರುವುದರಿಂದ ಭೂಮಿಯನ್ನು ಕೃಷಿಗಾಗಿಯೇ ಬಳಸುವ ಅನಿವಾರ್ಯತೆ ಇಲ್ಲ ಎನ್ನುವುದು. ಹಾಗೆ ಬಳಸಿದರೆ ಕೃಷಿ ಲಾಭದಾಯಕವಾಗಿ ಉಳಿಯುವುದಿಲ್ಲ ಎಂದೂ ಹೇಳಲಾಗುತ್ತಿದೆ. ಜೊತೆಗೆ ಜಾಗತೀಕರಣದಿಂದಾಗಿ ಕೃಷಿ ಎನ್ನುವುದು ಒಂದು ಅಂತಾರಾಷ್ಟ್ರೀಯ–ಅಂದರೆ ಕಾರ್ಪೋರೇಟೀಕೃತ–ವ್ಯವಹಾರವಾಗಿರುವುದರಿಂದ ಇದು ಹುಟ್ಟಿಸುವ ಪೈಪೋಟಿಗೆ ಪ್ರಚಲಿತ ಭೂ ಕಾನೂನುಗಳು ತೊಡಕುಗಳಾಗಿ ಪರಿಣಮಿಸಿವೆ ಎಂಬುದು. ಹಾಗಾಗಿ ಭೂಮಿಯನ್ನು ಕಡಿಮೆ ಆದಾಯದ ಕಚ್ಚಾ ವಸ್ತುವನ್ನಾಗಿ ಬಿಡದೆ ಅದನ್ನು ಹೆಚ್ಚು ಲಾಭದಾಯಕವಾದ ಉದ್ಯೋಗ ನಿರ್ಮಾಣಗಳಿಗೆ, ಅಂದರೆ ಹೊಸ ಹೊಸ ಉದ್ಯಮಗಳಿಗೆ ಬಳಸಿಕೊಳ್ಳುವುದು ಹೊಸ ಕಾಲದ ವಿವೇಕದ ಕ್ರಮ ಎಂದೂ ವಾದಿಸಲಾಗುತ್ತಿದೆ. ಈ ವಾದದ ಹಿನ್ನೆಲೆಯಲ್ಲೇ ಎಪಿಎಂಸಿ ಕಾಯಿದೆಗೂ ತಿದ್ದುಪಡಿಗಳನ್ನು ಸೂಚಿಸಲಾಗಿದೆ.

ಆದರೆ ಈ ವಾದಕ್ಕೆ ಎದುರಾಗಿ ಈ ತಿದ್ದುಪಡಿಯಿಂದಾಗಿ ದೊಡ್ಡ ರೈತರು ಮತ್ತು ಉದ್ಯಮಪತಿಗಳು ಸಣ್ಣ ಮತ್ತು ಮಧ್ಯಮ ಪ್ರಮಾಣದ ರೈತರನ್ನು ಹಲವು ಒತ್ತಡ–ಆಮಿಷಗಳಿಗೆ ಸಿಲುಕಿಸಿ ಅವರು ಕ್ರಮೇಣ ಬೀದಿಗೆ ಬೀಳುವಂತೆ ಮಾಡುತ್ತಾರೆ ಎಂದು ಆರೋಪಿಸಲಾಗುತ್ತಿದೆ. ಈ ತಿದ್ದುಪಡಿಯ ಮೂಲಕ ಸೂಚಿತವಾಗಿರುವಂತೆ ಪ್ರಭುತ್ವವೇ ಹಣಬಲವಿರುವವರ ಪರವಾಗಿರುವುದರಿಂದ ಅದರ ಕೃಪಾಶ್ರಯದ ಬಂಡವಾಳಶಾಹಿ ಏನೆಲ್ಲ ಮಾಡಬಹುದು ಎಂಬುದನ್ನು ಅದರ ಚರಿತ್ರೆಯಿಂದ ಬಲ್ಲವರು ಈ ಆರೋಪದಲ್ಲಿ ಹುರುಳಿಲ್ಲ ಎಂದು ಹೇಳಲಾರರು. ಏಕೆಂದರೆ ಬಂಡವಾಳದ ರಾಜಕಾರಣ, ಜನ ರಾಜಕಾರಣವನ್ನೂ ಆಪೋಶನ ತೆಗೆದುಕೊಳ್ಳಬಲ್ಲದ್ದು.

ಆದರೆ ಇಷ್ಟೆಲ್ಲದರ ಮಧ್ಯೆ, ಕಳೆದ ಅರ್ಧ ಶತಮಾನದಲ್ಲಿ ಕಂಡ ಹಲವು ರೈತ ಚಳುವಳಿಗಳ ನಂತರವೂ ಒಂದೆರಡು ಪ್ರಶ್ನೆಗಳಿಗೆ ಸ್ಪಷ್ಟ ಉತ್ತರವಿಲ್ಲದೆ ಹಾಗೇ ಉಳಿದುಹೋಗಿವೆ. ಅವೆಂದರೆ ಇಂದು ರೈತ ಎಂದರೆ ಯಾರು? ರೈತ ಸಮುದಾಯ ಎಂದರೆ ಯಾವುದು? ರೈತ ಹಿತಾಸಕ್ತಿ ಎಂದರೆ ಏನು? ಏಕೆಂದರೆ ಕಳೆದ ಇಪ್ಪತ್ತೈದು ವರ್ಷಗಳ ಜಾಗತೀಕರಣದ ಪರಿಣಾಮಗಳ ನಂತರ ಯಾರ ಹಿತಾಸಕ್ತಿ ಒಂದು ಕಸುಬಿನ ಹಿತಾಸಕ್ತಿಗೇ ಸೀಮಿತವಾಗಿದೆ? ರೈತ ರಾಜಕಾರಣಿಯಾಗಿ ಹಲವು ತೆರನ ಹೂಡಿಕೆಗಳಲ್ಲಿ ತೊಡಗಿದ್ದಾನೆ. ಕುಟುಂಬದ ಇತರರ ಹೆಸರಲ್ಲಿ ಭೂಮಿ ಹೊಂದಿರುವ ಇತರ ವೃತ್ತಿಪರರ ಕಾಳಜಿಗಳು ರೈತ ಕಾಳಜಿಗಳಷ್ಟೇ ಆಗಿರುತ್ತವೆಂದು ಹೇಳಲಾಗದು. ರೈತನ ಮಕ್ಕಳು ವಿದೇಶಗಳೂ ಸೇರಿದಂತೆ ಹಲವೆಡೆ ಹಲವು ಹಿತಾಸಕ್ತಿಗಳ ವಾರಸುದಾರರಾಗಿದ್ದಾರೆ. ಇನ್ನು ಬಡ ರೈತನೆಂಬುವವನು ರೈತಾಪಿ ಅಸ್ಮಿತೆಯನ್ನೇ



ನಂಬಿ ಕೆಟ್ಟೆನೆಂದು ತನ್ನ ಅಸ್ಮಿತೆಯ ಬಗ್ಗೆ ನಂಬಿಕೆಯನ್ನೇ ಕಳೆದುಕೊಂಡಿದ್ದಾನೆ. ಕೆಲವು ವರ್ಷಗಳ ಹಿಂದೆ ಬಹುಶಃ ನಿಕಟ ಭವಿಷ್ಯದಲ್ಲಿ ಎಂದೂ ಆರಂಭವಾಗದ ಕಂಟ್ರಾಕ್ಟುದಾರರ ಹಿತಾಸಕ್ತಿಗಳಿಗೆಂದೇ ಅಡಿಗಲ್ಲು ಬಿದ್ದ ಶಿವಮೊಗ್ಗ ವಿಮಾನ ನಿಲ್ದಾಣಕ್ಕಾಗಿ ಬಗೈರ್ ಹುಕುಂ ರೈತರ ಭೂಮಿಯನ್ನೂ ನಾನು ಬಲ್ಲ ರೈತ ನಾಯಕರೊಬ್ಬರು ಹೆಚ್ಚಿನ ಪರಿಹಾರ ಧನಕ್ಕಾಗಿ ಸರ್ಕಾರದೊಂದಿಗೆ ಮಾತುಕತೆ ನಡೆಸಿ ಮಾರಾಟ ಮಾಡಿಸಿ ಧನ್ಯತೆಯ ಭಾವ ಅನುಭವಿಸಿದ್ದನ್ನು ಕಂಡ ಮೇಲೆ ನನಗೆ ರೈತಾಪಿ ಎಂಬುದು ಕೈ ಬದಲಾಗುತ್ತಿರುವ ಒಂದು ಕಸುಬೇ ಹೊರತು ಒಂದು ಅಸ್ಮಿತೆ, ಒಂದು ಸಮುದಾಯ ಅಥವಾ ಒಂದು ಸಂಸ್ಕೃತಿಯಾಗಿ ಉಳಿದಿಲ್ಲ ಅನ್ನಿಸತೊಡಗಿದೆ.

ಇಷ್ಟೆಲ್ಲ ಆದರೂ, ರೈತ ಅಸ್ಮಿತೆ ಅಥವಾ ಸಂಸ್ಕೃತಿಯ ವಿಚಲತೆಯ ಬಗೆಗಿನ ನಮ್ಮ ಅಸಮಧಾನ ಆ ಅಸ್ಮಿತೆ ಅಥವಾ ಸಂಸ್ಕೃತಿಯ ಅವನತಿಯ ಬಗ್ಗೆ ನಾವು ನಿರ್ಲಕ್ಷ್ಯ ತೋರುವತ್ತ ನಮ್ಮನ್ನು ದೂಡಬಾರದು. ಏಕೆಂದರೆ ಈ ಅಸ್ಮಿತೆ–ಸಂಸ್ಕೃತಿಗಳ ವಾರಸುದಾರರು ಈಗ ಆ ಕಸುಬಿನಲ್ಲಿ ನಿರತರಾಗಿರುವವರಷ್ಟೇ ಆಗಿಲ್ಲ. ಹಾಗೆ ನೋಡಿದರೆ, ಬಂಡವಾಳಶಾಹಿ ರಾಜಕಾರಣದ ವಿರುದ್ಧ ಇರುವವರೆಲ್ಲರೂ–ಅವರು ಯಾವುದೇ ವೃತ್ತಿಯಲ್ಲಿರಲಿ–ರೈತ ಸಂಸ್ಕೃತಿಯ ಪ್ರತಿಪಾದಕರೇ. ಕಾರಣ, ರೈತ ಸಂಸ್ಕೃತಿ ಎಂಬುದು ಕೇವಲ ಕಸುಬಿಗೆ ಸೀಮಿತವಾದ ವಿದ್ಯಮಾನವಲ್ಲ. ಅದೊಂದು ಜೀವನ ದೃಷ್ಟಿಕೋನ ಮತ್ತು ಕ್ರಮ. ಮೂಲ ಭಾರತೀಯ ಜೀವನ ದರ್ಶನವೇ ನೆಲ–ಜಲ ಸಂಸ್ಕೃತಿಯಿಂದ ಹುಟ್ಟಿದ್ದು. ಅದರ ಲಯ–ಗತಿಗಳು ನಮ್ಮ–ಆತ ಭೂ ಒಡೆಯನೇ ಇರಲಿ, ಭೂಹೀನನೇ ಇರಲಿ–ಬದುಕಿನಲ್ಲಿ ಹಾಸುಹೊಕ್ಕಾಗಿವೆ. ಬಂಡವಾಳಶಾಹಿ ಬದುಕಿನ ಕ್ರಮ ಬಂದುದೇ ಈ ಬದುಕಿನ ದೃಷ್ಟಿ ಮತ್ತು ಮೌಲ್ಯಗಳನ್ನು ಹೀಗಳೆಯುತ್ತಾ ಮತ್ತು ನಾಶ ಮಾಡುತ್ತಾ. ಹಾಗಾಗಿ ಇಂದಿನ ಭೂ ಸುಧಾರಣೆ ಕಾನೂನುಗಳ ತಿದ್ದುಪಡಿಗಳ ಬಗ್ಗೆ ಕಸುಬುದಾರ ರೈತರಷ್ಟೇ ಮಾತಾಡಬೇಕಿಲ್ಲ. ಹಾಗೆ ನೋಡಿದರೆ ಈಗಾಗಲೇ ಕಾಣುತ್ತಿರುವಂತೆ ಅವರೆಲ್ಲ ಹಾಗೆ ಮಾತಾಡುತ್ತಲೂ ಇಲ್ಲ. ಏಕೆಂದರೆ ಅವರಲ್ಲಿ ಸಾಕಷ್ಟು ಜನ ಭೂ ವ್ಯಾಪಾರಿಗಳೂ ಇತರೆ ವ್ಯವಹಾರಸ್ಥರೂ ಆಗಿ ಪರಿವರ್ತಿತರಾಗಿದ್ದಾರೆ. ಹಾಗೆಂದೇ ಇವರಲ್ಲಿ ಬಹಳಷ್ಟು ಜನ ಎಪಿಎಂಸಿ ಕಾಯಿದೆ ತಿದ್ದುಪಡಿಯನ್ನು ಸಾರಾ ಸಗಟಾಗಿ ಸ್ವಾಗತಿಸಿದ್ದಾರೆ.

ಹಾಗಾಗಿ ಇಂದು ರೈತ ವಲಯದ ವಾದ ಮತ್ತು ಆತಂಕ ರೈತ ಸಂಸ್ಕೃತಿಯ ಲಯ ಮತ್ತು ಗತಿಗಳನ್ನು ಉಳಿಸಿಕೊಂಡಿರುವ ಎಲ್ಲ ಕಸುಬುದಾರರ ವಾದ ಮತ್ತು ಆತಂಕಗಳೂ ಹೌದು. ಇದರ ಹಿಂದೆ ಸುಪ್ತವಾಗಿರುವ ನಮ್ಮ ಬದುಕು ಕೊನೆಗೂ ಕೃಷಿ ಸಂಸ್ಕೃತಿ ಪ್ರಾಧಾನ್ಯತೆಯಿಂದ ಉದ್ಯಮ ಅರ್ಥಾತ್ ಕೈಗಾರಿಕೆ ಅರ್ಥಾತ್ ವ್ಯಾಪಾರ ಕೇಂದ್ರೀಯತೆಗೆ ಸ್ಥಿತ್ಯಂತರ ಹೊಂದುವ ಭಯ ರೈತ ವಲಯವನ್ನೇ ಅಲ್ಲ, ನಮ್ಮೆಲ್ಲರನ್ನೂ ಇಂದು ಕಾಡಬೇಕು. ಇದು ಇಂದಿನ ಕೋರೋನಾ ಮಹಾಮಾರಿಯ ಹಿನ್ನೆಲೆಯಲ್ಲಿ ಹಲವು ಕುತೂಹಲಕರ ಪ್ರಶೆಗಳನ್ನು ಎತ್ತುತ್ತದೆ ಎಂಬುದನ್ನೂ ನಾವು ಅರಿಯಬೇಕು. ಮುಖ್ಯವಾಗಿ, ಈ ಕಾನೂನು ತಿದ್ದುಪಡಿ ರಾಜಕಾರಣದ ಕೇಂದ್ರದಲ್ಲಿರುವ ಆಲೋಚನಾ ಕ್ರಮದ ಬಗ್ಗೆ. ಇದನ್ನು ಹಲವು ಆರ್ಥಿಕ, ಸಮಾಜಿಕ ಮತ್ತು ಸಾಂಸ್ಕೃತಿಕ ಚಿಂತಕರು ಭೂಮಿಯನ್ನು ಒಂದು ಆರ್ಥಿಕ ಸರಕಾಗಿ ನೋಡುವ ಪ್ರಮೇಯವಾಗಿ ಪರಿಗಣಿಸಿ, ಇದರ ಪರಿಣಾಮಗಳನ್ನು ಚರ್ಚಿಸಿದ್ದಾರೆ. ಆದರೆ ಈ ಪ್ರಮೇಯ ಸ್ವಯಂಭೂ ಆದದ್ದವೇನಲ್ಲ. ಇದು ಭೂಮಿಯ ಮೇಲಿನ ಬದುಕೇ ಒಂದು ಆರ್ಥಿಕ ಕಾರ್ಯಾಚರಣೆಯನ್ನಾಗಿ ಈಗ ನಾವು ಮಾಡಿಕೊಂಡಿರುವ ಮುಖ್ಯ ಪ್ರಮೇಯದ

(೬ನೇ ಪುಟಕ್ಕೆ

ಪ್ರಚಲಿತ-೨

# ಸಾಮಾಜಿಕ ವಿಷಮತೆಗಳನ್ನು ನಿವಾರಿಸಲಾಗದ ಶಿಕ್ಷಣ ನೀತಿ

-ಮಹಾಬಲೇಶ್ವರ ರಾವ್




**ಕೇಂದ್ರದ ಮಾನವ ಸಂಪನ್ಮೂಲ ಅಭಿವೃದ್ಧಿ** ಸಚಿವಾಲಯವು ರಾಷ್ಟ್ರೀಯ ಶಿಕ್ಷಣ ನೀತಿ-೨೦೨೦ನ್ನು ಬಿಡುಗಡೆ ಮಾಡಿದೆ. ನಮ್ಮ ಶಿಕ್ಷಣ ವ್ಯವಸ್ಥೆಯನ್ನು ವ್ಯಕ್ತಿ ಮತ್ತು ಸಮುದಾಯದ ಸರ್ವತೋಮುಖ ಅಭಿವೃದ್ಧಿಗೆಂದು ಸಿದ್ಧಗೊಳಿಸಲಾದ ಅನೇಕ ವರದಿಗಳು ರಾಜ್ಯ ಮತ್ತ ಕೇಂದ್ರ ಮಟ್ಟದಲ್ಲಿ ಸಲ್ಲಿಕೆಯಾಗಿ ಹೋಗಿದ್ದರೂ, ಅವು ಮಾಡಲಾಗದ ಸಾಧನೆಗಳನ್ನು ಬಾಹ್ಯಾಕಾಶ ವಿಜ್ಞಾನಿ ಡಾ. ಕಸ್ತೂರಿರಂಗನ್ ನೇತೃತ್ವದ ಆಯೋಗ ಸಿದ್ಧಪಡಿಸಿರುವ ಈ ಹೊಸ ಶಿಕ್ಷಣ ನೀತಿ ಮಾಡಬಲ್ಲುದೆಂಬ ಮಹತ್ವಾಕಾಂಕ್ಷೆಯೊಂದಿಗೆ ರಾಷ್ಟ್ರದ ಮುಂದೆ ಪ್ರಸ್ತುತಗೊಂಡಿದೆ. ಈ ನೀತಿಯ ಬಗ್ಗೆ ಒಂದು ಚಿಕಿತ್ಸಕ ನೋಟ ಇಲ್ಲಿದೆ-ಸಂ.

**ನಾ**ಕವೇ ನೆಲದಲ್ಲಿ ಅವತರಿಸಿತೋ ಎಂಬ ಹಾಗೆ ರಾಷ್ಟ್ರೀಯ ಶಿಕ್ಷಣ ನೀತಿ ೨೦೨೦ರ ಬಗ್ಗೆ ದೇಶದಲ್ಲಿ ಸಂಭ್ರಮದ ಅಲೆ ಎದ್ದಿದೆ. ಜಡ್ಡುಗಟ್ಟಿದ ನಮ್ಮ ಶಿಕ್ಷಣ ವ್ಯವಸ್ಥೆ ಆಮೂಲಾಗ್ರ ಬದಲಾವಣೆಯಾಗಿ ದೇಶವು ಮುಂದಿನ ಇಪ್ಪತ್ತು ವರ್ಷಗಳಲ್ಲಿ ಜಗತ್ತಿನ ಪ್ರಬಲ ಶಕ್ತಿಯಾಗಿ ರೂಪುಗೊಳ್ಳುವುದು ನಿಸ್ಸಂಶಯ ಎಂಬ ಭ್ರಮೆ ಆವರಿಸಿದೆ. ೧೯೪೮ರಿಂದ ಮೊದಲ್ಗೊಂಡು ೨೦೧೯ರ ವರೆಗೆ ಜಾರಿಗೊಂಡ ಶೈಕ್ಷಣಿಕ ಆಯೋಗಗಳ ಸೋಲಿನ ಕಥೆ ನಮ್ಮ ಮುಂದಿದೆ. ಆದರ್ಶದ ದೊಡ್ಡ ದೊಡ್ಡ ಬೊಗಳೆ ಮಾತುಗಳು ಒಂದೆಡೆಯಾದರೆ, ಮುಖ್ಯವಾದ ಶಿಫಾರಸುಗಳು ಜಾರಿಯಾಗದೆ ಶಿಕ್ಷಣ ಯಥಾಸ್ಥಿತಿವಾದಿಯಾಗಿ ಉಳಿದಿರುವ ದುರಂತ ಕತೆ ನಮ್ಮ ಕಣ್ಣೆದುರಿಗೆ ಇದೆ. ಈಗ ಜಾರಿಗೆ ಬರುತ್ತಿರುವ ಈ ನೀತಿಗೂ ಅದೇ ಗತಿ ಒದಗಲಿದೆ ಎಂದು ನನ್ನ ಅನುಭವ ನನಗೆ ಹೇಳುತ್ತಿದೆ. ಈ ವಾಸ್ತವವನ್ನು ಮರೆತು ಈ ಹೊಸ ನೀತಿಯ ಬಗ್ಗೆ ಉಮೇದಿನಿಂದ ಮಾತನಾಡಲಾರೆ.

೨೦೨೦ರ ರಾಷ್ಟ್ರೀಯ ಶಿಕ್ಷಣ ನೀತಿ ಒಕ್ಕೂಟ ವಿರೋಧಿ ಹಾಗೂ ಅಪ್ರಜಾಸತ್ತಾತ್ಮಕ ದಾಖಲೆ ಎಂದು ಮೊದಲಿಗೇ ಹೇಳಿಬಿಡಬೇಕು. ಯಾವುದೇ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ರಾಷ್ಟ್ರಾದ್ಯಂತ ಜಾರಿಗೊಳಿಸುವುದಕ್ಕೆ ಮೊದಲು ರಾಜ್ಯ ಶಿಕ್ಷಣ ಸಚಿವರನ್ನು ಒಳಗೊಂಡ ಕೇಂದ್ರೀಯ ಶಿಕ್ಷಣ ಸಲಹಾ ಸಮಿತಿ(CABE)ಯಲ್ಲಿ ಮತ್ತು ಪಾರ್ಲಿಮೆಂಟಿನ ಉಭಯ ಸದನಗಳಲ್ಲಿ ವ್ಯಾಪಕ ಚರ್ಚೆ ನಡೆಸಿ, ವಿವಿಧ ಹಿನ್ನೆಲೆಗಳ ಜನಪ್ರತಿನಿಧಿಗಳು ನೀಡುವ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ಪರಿಷ್ಕರಣೆಗೊಂಡು ಆ ಬಳಿಕ ಅದು ಜಾರಿಗೆ ಬರಬೇಕು. ಶಿಕ್ಷಣ ಕ್ಷೇತ್ರದಲ್ಲಿ ಸ್ಥಿರತೆ, ಸಾತತ್ಯ ಹಾಗೂ ಚಲನಶೀಲತೆ ದೃಷ್ಟಿಯಿಂದ ೧೯೮೬ರ ಶಿಕ್ಷಣ ನೀತಿ ಜಾರಿಯಾದದ್ದು ಈ ಕ್ರಮದಲ್ಲೇ. ಆದರೆ ಈ ಸರಕಾರ ಪೂರ್ವ ನಿದರ್ಶನವನ್ನು ಗಾಳಿಗೆ ತೂರಿ, ಪಾರ್ಲಿಮೆಂಟಿಗೆ ಒಕ್ಕೂಟ ವ್ಯವಸ್ಥೆಗೆ ಕಿಂಚಿತ್ತೂ ಗೌರವ ತೋರದೆ ಶಿಕ್ಷಣ ನೀತಿಯನ್ನು ಜಾರಿಗೆ ಕೊಟ್ಟಿದೆ. ಆದುದರಿಂದಲೆ ಇದು ಒಕ್ಕೂಟ ವ್ಯವಸ್ಥೆ ವಿರೋಧಿ ಹಾಗೂ ಪ್ರಜಾಪ್ರಭುತ್ವ ವಿರೋಧಿ ದಸ್ತಾವೇಜು.

ಸದ್ಯ ಕರೋನಾ ಹಾವಳಿಯಿಂದಾಗಿ ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯ ಡೋಲಾಯಮಾನವಾಗಿರುವಾಗ ಈ ನೀತಿಯನ್ನು ತರಾತುರಿಯಿಂದ ಜಾರಿಗೆ ತರುವ ಅಗತ್ಯವಾದರೂ ಏನಿತ್ತು?

"ನಮ್ಮ ರಾಷ್ಟ್ರೀಯ ಶಿಕ್ಷಣ ನೀತಿಯ ಬಗ್ಗೆ ಎರಡು ಲಕ್ಷಕ್ಕೂ ಮಿಗಿಲು ಸಲಹೆಗಳು ಬಂದಿವೆ. ಯಾರೊಬ್ಬರೂ ಇದನ್ನು ವಿರೋಧಿಸಿಲ್ಲ. ಈ ದಸ್ತಾವೇಜು ಪೂರ್ವಾಗ್ರಹ ಮುಕ್ತವಾಗಿದೆ. ಮೂವತ್ತನಾಲ್ಕು ವರ್ಷಗಳ ಬಳಿಕ ನಾವು ಹೊಸ ನೀತಿಯನ್ನು ಜಾರಿಗೆ ತಂದಿದ್ದೇವೆ" ಎಂದು ದೇಶದ ಪ್ರಧಾನಿ 'ಗರ್ವ'ದಿಂದ ನುಡಿದಿದ್ದಾರೆ. ಭಾರತದ ೧೩೮ ಕೋಟಿ ಜನಸಂಖ್ಯೆಯಲ್ಲಿ ಕೇವಲ ಎರಡು ಲಕ್ಷ ಮಂದಿ ನೀಡಿದ ಸಲಹೆ ಸೂಚನೆಗಳು ಯಾವ ಲೆಕ್ಕ? ವಿವಿಧ ಪತ್ರಿಕೆಗಳಲ್ಲಿ, ಸಾಮಾಜಿಕ ಜಾಲತಾಣಗಳಲ್ಲಿ ಈ ನೀತಿಯ ಕೆಲವು ದೌರ್ಬಲ್ಯಗಳ ಬಗ್ಗೆ ಗಂಭೀರವಾದ ಚರ್ಚೆ ನಡೆದಿದೆ. 'ಸಂವಿಧಾನ ವಿರೋಧಿ', 'ಮನುವಾದಿ', 'ಒಕ್ಕೂಟ ವಿರೋಧಿ', 'ಅಪ್ರಜಾಸತ್ತಾತ್ಮಕ', 'ಕೇಂದ್ರೀಕರಣ ನೀತಿ', 'ದೊಡ್ಡ ಆಶಯಗಳ ಸಂಶಯಾಸ್ಪದ ಅನುಷ್ಠಾನಗಳ ದಾಖಲೆ' ಎಂಬಂಥ ಟೀಕೆಗಳತ್ತ ಬಂದಿರುವುದರ ಬಗ್ಗೆ ಪ್ರಧಾನಿಯವರ ಗಮನವೇ ಹರಿದಂತಿಲ್ಲ..

'ಪೂರ್ವಾಗ್ರಹ ಮುಕ್ತ' ಎಂದು ಮೇಲ್ನೋಟಕ್ಕೆ ಅನ್ನಿಸಿದರೂ ಈ ನೀತಿ ಭಾರತದ ಪ್ರಾಚೀನ ಪರಂಪರೆಯನ್ನು 'ವಿಶ್ವದ ಶ್ರೇಷ್ಠ ಶಿಕ್ಷಣದ ಮಾದರಿ' ಎಂದು ಬಿಂಬಿಸುತ್ತದೆ. ಮೇಲಾಗಿ, ಪೂರ್ವಾಗ್ರಹ (Bias)ವನ್ನು ದಸ್ತಾವೇಜಿನಲ್ಲಿ ಜಾಣತನದಿಂದ ಮರೆಮಾಡಲಾಗಿದೆ. ಇದು ನಿಜಕ್ಕೂ ಅಪಾಯಕಾರಿಯಾಗಿ ಎದ್ದು ಕಾಣುತ್ತಿರುವುದು ಪಠ್ಯಕ್ರಮ ನಿರ್ಮಾಣ ಹಾಗೂ ಪಠ್ಯಪುಸ್ತಕಗಳ ರಚನೆಯ ಸಂದರ್ಭದಲ್ಲಿ. ಮೂವತ್ತನಾಲ್ಕು ವರ್ಷಗಳ ಬಳಿಕ ಹೊಸ ಶಿಕ್ಷಣ ನೀತಿಯನ್ನು ಜಾರಿಗೆ ಕೊಡುತ್ತಿರುವುದು ದಾಖಲೆಗಳ ಪ್ರಕಾರ ಸರಿ. ಆದರೆ ೧೯೮೬ರ ರಾಷ್ಟ್ರೀಯ ಶಿಕ್ಷಣ ನೀತಿ, ೧೯೯೨ರ ಪರಿಷ್ಕೃತ ನೀತಿ, ಜನಾರ್ದನ ರೆಡ್ಡಿ ಸಮಿತಿ, ವೀರಪ್ಪ ಮೊಯಿಲಿ ಸಮಿತಿ, ಆಚಾರ್ಯ ರಾಮಮೂರ್ತಿ ಆಯೋಗ, 'ಹೊರೆರಹಿತ ಕಲಿಕೆ' ವರದಿ ೧೯೯೩, 'ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ೨೦೦೫' ಹಾಗೂ ಶಿಕ್ಷಣ ಹಕ್ಕು ಕಾಯ್ದೆ ೨೦೦೯-ಇವೆಲ್ಲವೂ ಈ ದೇಶದ ಶಿಕ್ಷಣ ವ್ಯವಸ್ಥೆಯಲ್ಲಿ ಸಾಕಷ್ಟು ಸುಧಾರಣೆಗಳನ್ನು ತಂದಿವೆ. ಆದರೆ ಇವು ಬೀರಿದ ಪರಿಣಾಮಗಳ ಬಗ್ಗೆ ಮಾತು ಮರೆಸುವುದು ಇತಿಹಾಸಕ್ಕೆ ಬಗೆದ ಅಪಚಾರ.

೨೦೨೦ರ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ವ್ಯಕ್ತವಾದ ಈ ಕೆಲವು ಸುಧಾರಣೆಗಳನ್ನು ನಾನು ವಿರೋಧಿಸುತ್ತೇನೆ.

೧. ಶಾಲಾ ಶಿಕ್ಷಣವನ್ನು ೩ರ ಪ್ರಾಯದಿಂದ ಆರಂಭಿಸಿ ಪೂರ್ವಪ್ರಾಥಮಿಕ ಶಿಕ್ಷಣವನ್ನು ಸಾಂಸ್ಥೀಕರಿಸುವುದು ಈಗಾಗಲೆ ದೊಡ್ಡ ಪ್ರಮಾಣದಲ್ಲಿ ಕಂಡುಬರುತ್ತಿರುವ ಶೈಕ್ಷಣಿಕ ಅಸಮಾನತೆಯನ್ನು ಇನ್ನಷ್ಟು ವ್ಯಾಪಕಗೊಳಿಸಲಿದೆ. ಇದು ಅಂಗನವಾಡಿ ಶಿಕ್ಷಣ ಹಾಗೂ ಮೊಂಟೆಸಾರಿ ಶಿಕ್ಷಣ ಎಂಬ ಎರಡು ಅಲೆಗಳು ಭೀಕರವಾಗಿ ತಲೆ ಎತ್ತಿ ಮಕ್ಕಳ ಸಹಜ ಬಾಲ್ಯವನ್ನು ಕಸಿದುಕೊಳ್ಳುವ ಹುನ್ನಾರ.

೨. ೧೦+೨+೩ ಲೆಕ್ಕಚಾರದ ವ್ಯವಸ್ಥೆಯನ್ನು ೫+೩+೩+೪ ಎಂದು ವಿಂಗಡಿಸಿ ಇನ್ನಷ್ಟು ಗೋಜಲು ಮಾಡಿರುವುದು ಪ್ರತ್ಯೇಕವಾದ ಪ್ರೌಢಶಾಲೆ ಹಾಗೂ ಪದವಿ ಪೂರ್ವ ಹಂತ ಉಳ್ಳ ಕರ್ನಾಟಕದಂಥ ರಾಜ್ಯಗಳಲ್ಲಿ ಭಾರಿ ಗೊಂದಲ ಹಾಗೂ ಅವ್ಯವಸ್ಥೆಗೆ ಕಾರಣವಾಗಲಿದೆ. ಘೋಷಣೆಗಳೇನೇ ಇರಲಿ ಇದು ವ್ಯರ್ಥ ಗೊಟ್ಟಿಗುಣಿತ.

೩. ಮನೆ ಭಾಷೆ, ಮಾತೃ ಭಾಷೆ, ಪ್ರಾದೇಶಿಕ ಭಾಷೆ, ಬಹು ಭಾಷೆ ಎಂದೆಲ್ಲ ಒಂದಷ್ಟು ಗೊಂದಲ ಸೃಷ್ಟಿಮಾಡಿ ಕೊನೆಗೂ ಪ್ರೌಢ ಶಿಕ್ಷಣದವರೆಗಾದರೂ ಶಿಕ್ಷಣವನ್ನು ಪ್ರಾದೇಶಿಕ ಭಾಷಾ ಮಾಧ್ಯಮದಲ್ಲಿ ಒದಗಿಸುವುದಕ್ಕೆ ಅಗತ್ಯವಾದ ಬದ್ಧತೆ ತೋರದೇ ಇರುವುದು. ಭಾಷಾ ಮಾಧ್ಯಮಕ್ಕೆ ಸಂಬಂಧಿಸಿ ನೀತಿಯಲ್ಲಿ "ಎಲ್ಲೆಲ್ಲಿ ಸಾಧ್ಯವೋ" ಎಂದು ಪ್ರಾರಂಭವಾಗುವ ಒಕ್ಕಣೆಯನ್ನು ಅತಿಜಾಣತನದಿಂದ ಬರೆಯಲಾಗಿದೆ. ೨೦೧೪ರಲ್ಲಿ ಸುಪ್ರೀಂ ಕೋರ್ಟ್ ನೀಡಿದ ತೀರ್ಪನ್ನು ಸರಿಯಾಗಿ ಲಕ್ಷಿಸಿ ಸೂಕ್ತ ಶಿಫಾರಸನ್ನು ಮಾಡಲಾಗದ ಹೇತಲಾಂಡಿತನ ಭಾಷಾ ಮಾಧ್ಯಮ ಹಾಗೂ ಭಾಷೆಗಳ ಕಲಿಕೆಯ ವಿಭಾಗದಲ್ಲಿ ವ್ಯಕ್ತವಾಗಿದೆ. ವಿವಾದಾತ್ಮಕವೂ ಅಪ್ರಾಯೋಗಿಕವೂ ವಿಫಲವೂ ಆದ, ಹಳಸಿದ ತ್ರಿಭಾಷಾ ಸೂತ್ರವನ್ನು ಮತ್ತೆ ಶಿಫಾರಸು ಮಾಡಿರುವುದು ವಿವೇಚನಾಶೂನ್ಯತೆಯ ಪ್ರತೀಕ.

೪. "ಯಾವುದನ್ನೂ ಯಾವ ರಾಜ್ಯದ ಮೇಲೂ ಹೇರುತ್ತಿಲ್ಲ. ಆಯ್ಕೆ ನಿಮ್ಮದು" ಎಂದು ಶಿಕ್ಷಣ ಸಚಿವರು ಬಹುಜಾಣತನದಿಂದ ಹೇಳುತ್ತಿದ್ದಾರೆ. ಹಾಗಿದ್ದರೆ ರಾಷ್ಟ್ರೀಯ ಶಿಕ್ಷಣ ನೀತಿಯ ಉಸಾಬರಿ ನಿಮಗೆ ಏಕೆ? ವೈಚಾರಿಕವಾದ, ವೈಜ್ಞಾನಿಕವಾದ, ಪ್ರಗತಿಪರವಾದ ಶೈಕ್ಷಣಿಕ ಚೌಕಟ್ಟನ್ನು ರಾಜ್ಯಗಳಿಗೆ ಒದಗಿಸಿ ಇದರ ಒಳಗೆ ನೀವು ನಿಮ್ಮ ಸ್ವಂತಿಕೆ ಮೆರೆಯಿರಿ ಎಂದು ಹೇಳಲಾಗದ ಈ ಧೋರಣೆ ಖಂಡನೀಯ.

೫. ಈ ದೇಶದಲ್ಲಿ ಕಳೆದ ನೂರು-ನೂರೈವತ್ತು ವರ್ಷಗಳಿಂದ ರೂಢಿಯಲ್ಲಿರುವ ವೃತ್ತಿಪರವಾದ 'ಶಿಕ್ಷಕರ ಶಿಕ್ಷಣ'ದ ಕಾಲೇಜುಗಳನ್ನು ಅದಕ್ಷ, ಅಸಮರ್ಥ, ಭ್ರಷ್ಟ ಎಂದು ಬಿಂಬಿಸಿ ನಾಲ್ಕು ವರ್ಷದ' ಸಮನ್ವಯ ಶಿಕ್ಷಕರ ಶಿಕ್ಷಣ' ರೂಪಿಸಿ ಪದವಿ ಕಾಲೇಜುಗಳಿಗೆ ವಹಿಸಿದ್ದು ಸರ್ವಥಾ ಸಮರ್ಥನೀಯವಲ್ಲ. ತೀರ ಈಚೆಗಷ್ಟೆ ಜಾರಿಗೆ ಬಂದಿರುವ ಎರಡು ವರ್ಷದ ಶಿಕ್ಷಕರ ಶಿಕ್ಷಣವನ್ನು ಇನ್ನಷ್ಟು ಗಟ್ಟಿಗೊಳಿಸಿ ಶಿಕ್ಷಕರ ಶಿಕ್ಷಣ ಕಾಲೇಜನ್ನು ಸಬಲೀಕರಿಸುವ ಬದಲು

(೬ನೇ ಪುಟಕ್ಕೆ

ಅವುಗಳ ನಾಮಾವಶೇಷಕ್ಕೆ ಹೊರಟಿರುವುದು ಸರ್ವಾಧಿಕಾರಿ ಪ್ರವೃತ್ತಿಯೇ ಸರಿ.

೬. ದಸ್ತಾವೇಜಿನಲ್ಲಿ "ಶಿಕ್ಷಕರೇ ಕಲಿಕೆಯ ಪ್ರಕ್ರಿಯೆಯ ಹೃದಯ" ಎಂದು ಬಾಯ್ತುಂಬ ಹೊಗಳಿ ಸರಕಾರಿ/ಅನುದಾನಿತ ವ್ಯವಸ್ಥೆಯ ಶಿಕ್ಷಕರ ವೃತ್ತಿಪರ ಅಭಿವೃದ್ಧಿ ವಿಷಯಗಳ ಬಗ್ಗೆ ಧಾರಾಳ ಸಲಹೆಯನ್ನು ನೀಡಲಾಗಿದೆ. ಆದರೆ ಸರಕಾರಿ ಹಾಗೂ ಅನುದಾನಿತ ವ್ಯವಸ್ಥೆಗಿಂತ ಹೆಚ್ಚು ದೊಡ್ಡದಾದ ಅಸಂಘಟಿತ ಕಾರ್ಮಿಕ ವಲಯಗಳನ್ನು ಹೋಲುವ ಖಾಸಗಿ ವಲಯದ ಶಿಕ್ಷಕರ ದೊಡ್ಡ ಸಮೂಹ ಈ ದೇಶದಲ್ಲಿದೆ. ಇದು ಅಪಾರ ಶೋಷಣೆಗೊಳಗಾದ 'ಜ್ಞಾನ ಕಾರ್ಯಕರ್ತ'ರ ವಲಯ. ಇವರ ಶ್ರೇಯೋಭಿವೃದ್ಧಿಯ ಬಗ್ಗೆ ಒಂದೇ ಒಂದು ಸೊಲ್ಲೂ ದಸ್ತಾವೇಜಿನಲ್ಲಿಲ್ಲ. ಇಂಥ ಒಂದು ದಸಾಜು ಈ ದೇಶದ ಶಿಕ್ಷಣದ ಸುಧಾರಣೆಗಾಗಿ ಇದೆ ಎಂದು ನಂಬುವುದು ಹೇಗೆ?

೭. ಉನ್ನತ ಶಿಕ್ಷಣ ವ್ಯವಸ್ಥೆಯ ಪ್ರಗತಿಗಾಗಿ ದುಡಿದ ಯುಜಿಸಿಯನ್ನು ನಿರ್ನಾಮ ಮಾಡಿ ಹಲವಾರು ನಿಯಂತ್ರಕ ಸಂಸ್ಥೆಗಳನ್ನು ಸ್ಥಾಪಿಸಲಾಗುತ್ತಿದೆ. ಸಂಲಗ್ನತೆ(affiliation)ಯ ರೂಢಿಯನ್ನು ಕಿತ್ತೆಸೆದು ಪ್ರತಿಯೊಂದು ಸಂಸ್ಥೆ ಸ್ವಾಯತ್ತವಾಗುವ ಹಾಗೆ ಮಾಡಲಾಗುತ್ತಿದೆ. ವಿದೇಶಿ ವಿಶ್ವವಿದ್ಯಾನಿಲಯಗಳಿಗೆ ಮಣೆ ಹಾಕಲಾಗುತ್ತಿದೆ. ಒಟ್ಟಾರೆ ಈಗಾಗಲೆ ಇರುವ ಜಾತಿ ರಾಜಕಾರಣ, ಭ್ರಷ್ಟಾಚಾರ, ದಾನಶುಲ್ಕ(donation) ವಸೂಲಿ, ಖಾಸಗೀಕರಣ ಹಾಗೂ ಕೇಂದ್ರೀಕರಣ ಎಲ್ಲವನ್ನೂ ಈ ನೀತಿ ನ್ಯಾಯಬದ್ಧಗೊಳಿಸುತ್ತಿದೆ.

೮. 'ಸಮಾನ ಶಿಕ್ಷಣ ನೀತಿ' ಬಗೆಗಿನ ಕೂಗು ಸಾಕಷ್ಟು ಹಳೆಯದು. ಆದರೆ ಈ ಮೊದಲಿನಂತೆ ಶಾಲಾಹಂತದಲ್ಲಿ ಹಲವು ಬಗೆಯ ಪಠ್ಯಕ್ರಮಗಳು ಮುಂದುವರಿಯಲಿವೆ. ಖಾಸಗಿ ದಣಿಗಳಿಗೆ, ಬಂಡವಾಳಶಾಹಿಗಳಿಗೆ, ಕಾರ್ಪೋರೇಟ್ ವಲಯದವರಿಗೆ ಮಣೆ ಹಾಕುವ ಈ ಶಿಕ್ಷಣ ನೀತಿ ಅಸಮಾನ ಸಾಮಾಜಿಕ ವ್ಯವಸ್ಥೆಯನ್ನು ಮುಂದುವರಿಸುವ ಯಥಾಸ್ಥಿತಿವಾದಿ ಶಿಕ್ಷಣ ನೀತಿ.

೯. ೬-೧೪ ಪ್ರಾಯದ ಮಕ್ಕಳಿಗೆ ಸಂಬಂಧಿಸಿದ ಶಿಕ್ಷಣ ಹಕ್ಕು ಕಾಯದೆ ೨೦೦೯ರ ವ್ಯಾಪ್ತಿಯನ್ನು ೩-೧೮ ಪ್ರಾಯದ ವರೆಗೆ ಹಿಗ್ಗಿಸಲಾಗುವುದು ಎಂದು ಶಿಕ್ಷಣ ನೀತಿಯ ಘೋಷಣೆಯ ಸಂದರ್ಭದಲ್ಲಿ ಪ್ರಕಟಿಸಿದಾಗ ಮಕ್ಕಳ ಹಕ್ಕುಗಳ ಕಾರ್ಯಕರ್ತರು ಸಂಭ್ರಮಿಸಿದ್ದೇ ಸಂಭ್ರಮಿಸಿದ್ದು. ಆದರೆ 'ಶಿಕ್ಷಣ ಇಲಾಖೆ' ಆಮೇಲೆ ಪ್ರಕಟಿಸಿರುವ ೬೬ ಪುಟಗಳ ದಸ್ತಾವೇಜಿನಲ್ಲಿ (ಶಿಕ್ಷಣ ನೀತಿಯ ಪೂರ್ಣ ಪಾಠ ಇನ್ನೂ ಪ್ರಕಟವಾಗಿಲ್ಲ. ಅದು ಪ್ರಾದೇಶಿಕ ಭಾಷೆಗಳಲ್ಲಿ ಪ್ರಕಟವಾಗಲು ಕನಿಷ್ಠ ಒಂದು ವರ್ಷ ಬೇಕು!) ಶಿಕ್ಷಣ ಹಕ್ಕು ಕಾಯ್ದೆಗೆ ಸಂಬಂಧಿಸಿದ ಈ ಪ್ರಸ್ತಾಪವೇ ನಾಪತ್ತೆಯಾಗಿದೆ?

ವೈಚಾರಿಕ ಚಿಂತನ, ಸೃಜನಾತ್ಮಕ ಚಿಂತನ, ಸಮಸ್ಯಾಪರಿಹಾರ, ಜೀವನ ಕಲೆ, ಅಂತಾರಾಷ್ಟ್ರೀಯ ತಿಳಿವಳಿಕೆ, ಜಾಗತಿಕ ಮನುಷ್ಯ ಎಂಬ ಘೋಷಣೆಗಳಲ್ಲಿ ಮುಳುಗಿರುವ ಈ ಶಿಕ್ಷಣ ನೀತಿ 'ಕಾಸ್ಮೆಟಿಕ್ ಬದಲಾವಣೆ'ಯನ್ನು ಮಾಡಬಹುದಾದ ಮತ್ತು ಈ ಸಮಾಜಕ್ಕೆ ಅಂಟಿದ ಜಾತೀಯತೆ, ಮತೀಯತೆ ಹಾಗೂ ಉಪಭೋಗವಾದದ ಅರ್ಬುದಕ್ಕೆ ಶಸ್ತ್ರಚಿಕಿತ್ಸೆ ಮಾಡಲಾಗದ ಒಂದು ವಿಫಲ 'ಸರ್ಕಸ್' ಅಷ್ಟೇ.



**(ಉಡುಪಿಯ ನಿವಾಸಿಯಾದ ಲೇಖಕರು ಅಲ್ಲಿನ ಡಾ.ಟಿ.ಎಂ.ಎ. ಪೈ ಶಿಕ್ಷಣ ಸಂಸ್ಥೆಯ ಸಮನ್ವಯಾಧಿಕಾರಿ ಮತ್ತು ನಮ್ಮ ಹಿರಿಯ ಲೇಖಕರು)**

---

೪ನೇ ಪುಟದಿಂದ)

ಒಂದು ಉಪ ಪ್ರಮೇಯ ಮಾತ್ರವಾಗಿದೆ. ಇದನ್ನರಿಯದಿದ್ದರೆ, ರೈತ ವಲಯದ ವಕ್ತಾರರಾಗಲೀ, ಭೂಮಿಯನ್ನು ಒಂದು ಆರ್ಥಿಕ ಸರಕನ್ನಾಗಿ ಬಳಸಿ ತಮಗೋ. ದೇಶಕ್ಕೋ ಸಂಪತ್ತನ್ನು ಉತ್ಪಾದಿಸಬಯಸುವ ಹೊಸ ಉದ್ದಿಮೆದಾರರಾಗಲೀ, (ಈಗ ಈ ಇಬ್ಬರೂ-ಜಾಗತೀಕರಣ ಎಬ್ಬಿಸಿರುವ ಧೂಳಿನಲ್ಲಿ ಕಣ್ಣು ಮಂಜು ಮಾಡಿಕಾಡಿಕೊಂಡು-ಪೂರ್ಣ ಬೇರೇಯಾಗೇನೂ ಉಳಿದಿಲ್ಲವೆಂಬುದು ಬೇರೆ ವಿಷಯ) ಈ ಒಟ್ಟು ವಿದ್ಯಮಾನದ ಪರಿಣಾಮಗಳ ಆಳ ಅಗಲಗಳನ್ನು ಅರಿಯಲಾರರು. ಹಾಗೆ ನೋಡಿದರೆ, ಕೊರೋನಾದಿಂದ ನಾವು ಏನು ಕಲಿತಿದ್ದೇವೆ? ಇದು ಒಮ್ಮೆ ಮುಗಿದರೆ ಸಾಕು, ಮಾರುಕಟ್ಟೆ ಮಧ್ಯಕ್ಕೆ ಹಾರಲು ಕಾತುರರಾಗಿದ್ದೇವೆ! ಹಾಗಾಗಿ ನಾವು ನಮ್ಮ ಎಲ್ಲ ಹಿತಾಸಕ್ತಿಗಳನ್ನು ಮೀರಿ, ಈ ವಿದ್ಯಮಾನದ ಮೂಲಕ್ಕೆ ಹೋಗಿ ಅದರಲ್ಲಿ ನಮ್ಮ ಪಾತ್ರವೆಷ್ಟು ಮತ್ತು ಇದರಿಂದ ನಾವು ಪಡೆಯುವುದೇನು, ಎಷ್ಟು ಮತ್ತು ಕಳೆದುಕೊಳ್ಳುವುದೇನು ,ತ್ತು ಎಷ್ಟು ಎಂದು ಲೆಕ್ಕ ಹಾಕಿ ನಮ್ಮನಮ್ಮ ವಾದಗಳನ್ನು ಮಂಡಿಸಬೇಕಾಗಿದೆ. ಹಾಗೇ ಈ ತಿದ್ದುಪಡಿ ಇದ್ದಕ್ಕಿದ್ದಂತೆ ಬಂದಿಲ್ಲ; ಇದರಲ್ಲಿ ನಮ್ಮದೆಷ್ಟು ಪಾಲಿದೆ ಎಂದು ಯೋಚಿಸಬೇಕಿದೆ. ೭-

ನಮ್ಮದು ಪ್ರಜಾಪ್ರಭುತ್ವ, ಸಂವಿಧಾನದಲ್ಲಿ ಸಮಾಜವಾದ ಎಂಬುದು ಹೆಸರಿಗಷ್ಟೇ, ಅವಶೇಷದಂತೆ ಉಳಿದಿದ್ದು, ನಮ್ಮ ಸಂಸತ್ತು ಜಾಗತೀಕರಣವನ್ನು ಗ್ಯಾಟ್ ಒಪ್ಪಂದದ ಮೂಲಕ ಒಪ್ಪಿಕೊಂಡ ನಂತರ ಜಾರಿಗೆ ತರಲೇಬೇಕಾದ ಆರ್ಥಿಕ ಉದಾರೀಕರಣದ ಕ್ರಮಗಳು ಜನಜೀವನದಲ್ಲಿ ಹಲವು ಹೊಸ ಆರ್ಥಿಕ ಹಿತಾಸಕ್ತಿಗಳನ್ನು ಹುಟ್ಟುಹಾಕಿವೆ. ದುಡಿಮೆಯ ಹೊಸ ಮಾರ್ಗಗಳು ತೆರೆದುಕೊಂಡು ದುಡಿಮೆ ಎಂದರೆ ಆದಾಯ ಗಳಿಕೆ ಮಾತ್ರ ಎಂಬಂತಾಗಿ ದುಡಿಮೆಯ ಅರ್ಥವೇ ಬದಲಾಗಿದೆ. ಇದರಿಂದಾಗಿ ಹಲವು ವಿಪರೀತ ಆದಾಯಗಳ ದ್ವೀಪಗಳು ಸೃಷ್ಟಿಯಾಗಿವೆ. ನೈತಿಕವಾಗಿ ಈ ಬೆಳವಣಿಗೆ ಸರಿಯೋ ತಪ್ಪೋ, ಅವಂತೂ ಸಾಂವಿಧಾನಿಕ ಮಾನ್ಯತೆ ಪಡೆದು ಎಲ್ಲ ಪ್ರಜಾಸತ್ತಾತ್ಮಕ ಹಕ್ಕುಗಳಿಗೂ ಬಾಧ್ಯವಾಗಿವೆ. ಹಾಗಾಗಿ ಈ ವಿಪರೀತ ಆದಾಯಗಳ ದ್ವೀಪಗಳನ್ನು ಪ್ರತಿನಿಧಿಸುವ ಶಕ್ತಿಗಳು ಸಹಜವಾಗಿಯೇ ಈ ಹಕ್ಕನ್ನು ಚಲಾಯಿಸಿ ಆಳುವವರ ಮೇಲೆ ತಮ್ಮ ಈ ಆದಾಯಗಳ ಹೂಡಿಕೆಗೆ ಅವಕಾಶಗಳನ್ನು ಆಗ್ರಹಿಸುತ್ತಿವೆ. ಇದರ ಪರಿಣಾಮಗಳೇ ನಮ್ಮ ಹಳೆಯ ಒಂದೊಂದೇ ಕಾನೂನು ಈಗ ಈ ಆದಾಯ ದ್ವೀಪಗಳ ಬೇಡಿಕೆಗಳಿಗನುಸಾರವಾಗಿ, ಅವುಗಳ ಪ್ರಜಾಸತ್ತಾತ್ಮಕ ಹಕ್ಕುಗಳ ರಕ್ಷಣೆಗಾಗಿ ತಿದ್ದುಪಡಿಗಳಿಗೆ ಒಳಗಾಗುತ್ತಿರುವುದು. ನೀವು ಎಲ್ಲೆ ಇಲ್ಲದಷ್ಟು ಆದಾಯ ಪಡೆಯುವ ಅವಕಾಶಗಳನ್ನು ಕಲ್ಪಿಸಿ ಅವನ್ನು ಬಂಡವಾಳವಾಗಿ ಹೂಡಿ ಬೆಳೆಸಲು ಬೇಕಾದ ಅವಕಾಶಗಳನ್ನು ಸೃಷ್ಟಿಸದೇ ಹೋದರೆ ಅದು ಕರ್ತವ್ಯಲೋಪವಾಗುವುದಿಲ್ಲವೆ? ವಿಶೇಷವಾಗಿ, ಸ್ವತಃ ಸರ್ಕಾರವೇ ತನ್ನ ನೌಕರರಿಗೆ ಅವರು ಕನಸು ನನಸುಗಳಲ್ಲೂ ಕಲ್ಪಿಸಿಕೊಳ್ಳಲಾಗದಷ್ಟು ಸಂಬಳ ಭತ್ಯೆಗಳನ್ನು ನೀಡಲು ತೊಡಗಿದಾಗ? ಅವರು ತಿಂದು ತೇಗಿದ ಮೇಲೂ ಮಿಕ್ಕ ಹಣವನ್ನು ಏನು ಮಾಡಬೇಕು? ಎಷ್ಟು 'ಮಜಾ' ಮಾಡಲಾದೀತು?

ಆದುದರಿಂದ ಇಂದು ಭೂ ಸುಧಾರಣೆ ಕಾಯಿದೆ ಇತ್ಯಾದಿ ಇತ್ತೀಚೆಗೆ ತಿದ್ದುಪಡಿಯಾಗುತ್ತಿರುವ ಕಾಯಿದೆಗಳ ಪರಿಣಾಮಗಳನ್ನು ಅವುಗಳ ಬಿಡಿ ವ್ಯಾಪ್ತಿಯಲ್ಲೇ ನೋಡದೆ ಒಟ್ಟಾರೆ ಈ ಭೂಮಿಯ ಮೇಲಿನ ಬದುಕನ್ನು ಕೇವಲ ಒಂದು ಆರ್ಥಿಕ ವಿದ್ಯಮಾನವಾಗಿ ನೋಡುವ ನಮ್ಮ ಬದಲಾದ ಜೀವನ ದೃಷ್ಟಿಕೋನದ ಹಿನ್ನೆಲೆಯಲ್ಲಿ ನೋಡಿ ಅವುಗಳಿಂದಾಗಿ ನಿರ್ಮಾಣವಾಗುತ್ತಿರುವ ಸಮಸ್ಯೆಗಳಿಗೆ ಪರಿಹಾರಗಳನ್ನು ಹುಡುಕಬೇಕಾಗಿದೆ. ಹಾಗೆ ಹುಡುಕತೊಡಗಿದಾಗ ಈ ಎಲ್ಲ ಸಮಸ್ಯೆಗಳೂ ಸೃಷ್ಟಿಯಾಗಿರುವುದು ಇಂದು ನಾವು ಭಾರತದಲ್ಲಿ ಮಾತ್ರವಲ್ಲ, ಜಗತ್ತಿನಾದ್ಯಂತ ಸೃಷ್ಟಿಯಾಗಿರುವ ಭೌತಿಕ ಆಸ್ತಿ, ಅದು ನಿರ್ಮಾಣವಾದ ರೀತಿಯೂ, ಅದಕ್ಕನುಗುಣವಾಗಿಯೇ ಅದು ಶೇಖರಗೊಂಡಿರುವ ವಿನ್ಯಾಸವೂ ಅನೈತಿಕವಾದದ್ದೆಂದು ಗೊತ್ತಾಗುತ್ತದೆ.

ಈ ಆಸ್ತಿ ನಿರ್ಮಾಣ ಪ್ರಕ್ರಿಯೆ ಮನುಷ್ಯ ಎಂಬ ಜೀವಿಯು ಜೀವ ವಿಕಾಸ ಮಾರ್ಗದುದ್ದಕ್ಕೂ ಬೆಳೆಸಿಕೊಂಡು ಬಂದ ಅನೇಕ ಜೈವಿಕ, ಸಾಮಾಜಿಕ, ಸಾಂಸ್ಕೃತಿಕ ಮೌಲ್ಯಗಳನ್ನು ಧಿಕ್ಕರಿಸಿ ನಡೆದಿರುವುದನ್ನು ನಾವು ಗಮನಿಸಬೇಕು. ಇಂದು ಮನುಷ್ಯನ ಬದುಕು ಮನುಷ್ಯ ಬದುಕೆನ್ನಿಸಿಕೊಂಡು ಇತರೆಲ್ಲ ಜೀವಿಗಳ ಬದುಕುಗಳಿಗಿಂತ ಶ್ರೇಷ್ಠ ಎನ್ನಿಸಿಕೊಂಡಿರುವುದು ಈ ಮೌಲ್ಯಗಳಿಂದಲೇ. ಆದರೆ ಪಶ್ಚಿಮದ ದೇಶಗಳಿಗೆ ಹೋಲಿಸಿದರೆ ನಮ್ಮ ಬದುಕು ಹೀನಾಯವಾಗಿದೆ ಎಂಬ, ಆರ್ಥಿಕ ನೆಲೆಯಿಂದ ಸರಿಯಾದದ್ದೇ ಆದ, ಆದರೆ ಇದಕ್ಕೆ ನಾವು ನಂಬಿಕೊಂಡು ಬಂದಿದ್ದ ಜೀವನ ದೃಷ್ಟಿಯೇ ಸಂಪೂರ್ಣ ಹೊಣೆ ಎಂಬ ಬೌದ್ಧಿಕ ವಿವಶತೆಗೆ ಒಳಗಾಗಿ ಪಶ್ಚಿಮದ ಜೀವನ ದೃಷ್ಟಿಕೋನಕ್ಕೆ ಪ್ರಧಾನ ಆಧಾರವಾಗಿದ್ದ ನವ (ಅವರಿಗೂ ಅದು ಹೊಸದೇ ಆಗಿದ್ದ) ಅರ್ಥಶಾಸ್ತ್ರೀಯ ತತ್ವಗಳನ್ನು ಅಳವಡಿಸಿಕೊಂಡ ಪರಿಣಾಮವಾಗಿ ನಮ್ಮ ಬದುಕಿನ ಮಾದರಿಗಳು ಕ್ರಮೇಣ ಅವರದ್ದೇ ಆಗಿಬಿಟ್ಟಿವೆ. ಇದರ ಮುಂದಿನ ಪರಿಣಾಮವೆಂದರೆ ನಾವು ಅವರನ್ನು ಮುಟ್ಟಲು, ಸಾಧ್ಯವಾದರೆ ಅವರನ್ನು ಮೀರಿಸುವ ಧಾವಂತ ಮತ್ತು ಆ ಧಾವಂತದಲ್ಲಿ ಸೃಷ್ಟಿಯಾದ ಬೌದ್ಧಿಕ ಗುಲಾಮಗಿರಿ. ಹಾಗಾಗಿಯೇ ನಾವಿಂದು ಅವರಂತೆಯೇ ಮನುಷ್ಯ ಬದುಕೆಂದರೆ ಸದಾ ಆರ್ಥಿಕ ಚಕ್ರ ತಿರುಗುತ್ತಿರುವಂತೆ ನೋಡಿಕೊಳ್ಳುವ ಚಾಕರಿ ಎಂಬಂತಾಗಿ ಅದಕ್ಕೆ ನಾವು ಪಾರಂಪರಿಕವಾಗಿ ನಮ್ಮ ಬದುಕಿನ ಸಂಪನ್ನತೆಗೆ ಏನೆಲ್ಲ ಮೌಲ್ಯಗಳನ್ನು ಬೆಳೆಸಿಕೊಂಡು ಬಂದಿದ್ದೆವೋ ಅವನ್ನೆಲ್ಲ ಆ ಚಕ್ರದ ಚಲನೆಗೆ ಆಜ್ಯವಾಗಿ ಅರ್ಪಿಸುತ್ತಿದ್ದೇವೆ, ಇದರಲ್ಲಿ ನಮ್ಮ ನೆಲ-ಜಲ-ಆಕಾಶ-ಪ್ರಾಣಿ-ಪಕ್ಷಿ-ಕ್ರಿಮಿ-ಕೀಟಗಳೂ ಸೇರಿವೆ. ನಮ್ಮ ಭೂಮಿಯ ಕಲ್ಪನೆ ತನ್ನೆಲ್ಲ ಶೀಲ ಕಳೆದುಕೊಂಡು ಆತ್ಯಂತಿಕವಾಗಿ ಅದು ಒಂದು ಆರ್ಥಿಕ ಸರಕಾಗಿರುವುದು, ಜಡವಾಗಿರುವುದು, ನಮ್ಮನ್ನೂ ಜಡ ಮಾಡಿರುವುದೂ ಹೀಗೆ.

ಆದ್ದರಿಂದ ಭೂಮಿಯ ಪರಿಕಲ್ಪನೆ ಹೀಗೆ ಶೀಲ ಕಳೆದುಕೊಂಡ ಪ್ರಕ್ರಿಯೆಯನ್ನು ನಾವು ಈ ಪ್ರಕ್ರಿಯೆಯ ಪರಿಣಾಮವೇ ಎಂದು ಹೇಳಲಾಗುತ್ತಿರುವ ಕೊರಾನಾ ಮಹಾಮಾರಿ ತಂದೊಡ್ಡಿರುವ ಬಿಕ್ಕಟ್ಟಿನ ಕಾಲದಲ್ಲಾದರೂ ಅರಿತು ಮರುಪರಿಶೀಲನೆಗೆ ಒಡ್ಡಬೇಕಾಗಿದೆ. ಬಿಡಿ ವಿಶ್ಲೇಷಣೆ-ಬಿಡಿ ಪರಿಹಾರಗಳು ಈಗ ಪರಿಹಾರಗಳೇ ಅಲ್ಲ. *

**ಪ್ರಚಲಿತ-೩**

# ಭಾರತದಲ್ಲಿ ಕ್ಷೀಣಿಸುತ್ತಿರುವ ಮಾಧ್ಯಮ ಸ್ವಾತಂತ್ರ್ಯ

**-ಡಿ.ಎಸ್. ಪೂರ್ಣಾನಂದ**

**ಮಾಧ್ಯಮ ರಂಗವನ್ನು ಪ್ರಜಾಪ್ರಭುತ್ವದ ನಾಲ್ಕನೆಯ ಆಧಾರಸ್ತಂಭ ಎಂದು ಹೇಳಲಾಗುತ್ತಿದೆ. ಇಂದು ಇತರ ಮೂರು ಸ್ತಂಭಗಳಾದ ಕಾರ್ಯಾಂಗ, ಶಾಸಕಾಂಗ ಮತ್ತು ನ್ಯಾಯಾಂಗಗಳ ಜೊತೆಗೆ ಮಾಧ್ಯಮರಂಗದ ಕತ್ತು ಹಿಸುಕುವ ಪ್ರಯತ್ನಗಳು ನಡೆದಿವೆ ಎಂಬ ಕೂಗು ದೇಶದ ಹಲವು ವಲಯಗಳಿಂದ ಕೇಳಿಬರುತ್ತಿರುವ ಸಂದರ್ಭದಲ್ಲಿ ಈ ಲೇಖನ ನಮ್ಮ ಓದುಗರ ಕುತೂಹಲ ಹುಟ್ಟಿಸಬಹುದು.**-ಸಂ.



'ರಿಪೋರ್ಟರ್ಸ್ ವಿತೌಟ್ ಬಾರ್ಡರ್ಸ್' ಎಂಬ ಅಂತರರಾಷ್ಟ್ರೀಯ ಸರ್ಕಾರೇತರ ಸಂಘಟನೆ ಹೊರತಂದಿರುವ ೨೦೨೦ರ ಜಾಗತಿಕ ಪತ್ರಿಕಾ ಸ್ವಾತಂತ್ರ್ಯ ಸೂಚಿಯಲ್ಲಿ ಭಾರತ ೧೪೨ನೇ ಸ್ಥಾನಕ್ಕೆ ಕುಸಿದಿರುವುದು ಇತ್ತೀಚಿನ ವರ್ಷಗಳಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲಾಗತ್ತಿರುವ ನಿರಂತರ ಆಕ್ರಮಣಕ್ಕೆ ಹಿಡಿದ ಕನ್ನಡಿಯಾಗಿದೆ. ಪ್ರತೀ ಫ಼ರ್ಷ ಮಾಧ್ಯಮ ಸ್ವಾತಂತ್ರ್ಯದ ಆಧಾರದ ಮೇಲೆ ೧೮೦ ದೇಶಗಳನ್ನು ರ್‍ಯಾಂಕ್ ಮಾಡುವ ಈ ಸೂಚಿ ಆ ದೇಶಗಳಲ್ಲಿರುವ ಮಾಧ್ಯಮ ವೈವಿದ್ಯತೆ, ಪಾರದರ್ಶಕತೆ, ಶಾಸನಾತ್ಮಕ ಚೌಕಟ್ಟಿನ ಗುಣಮಟ್ಟ , ಪತ್ರಕರ್ತರಿಗಿರುವ ರಕ್ಷಣೆ, ಸುದ್ದಿ ಸಂಗ್ರಹ ಮತ್ತು ಪ್ರಸಾರಕ್ಕಾಗಿ ಲಭ್ಯವಿರುವ ಮೂಲಭೂತ ಸೌಕರ್ಯಗಳು, ಮಾಧ್ಯಮ ಪರಿಸರ ಮತ್ತು ಸ್ವನಿಯಂತ್ರಣ ಇವೆಲ್ಲವನ್ನು ಪರಿಗಣಿಸುತ್ತದೆ.

ಹದಿನೆಂಟು ವರ್ಷಗಳ ಹಿಂದೆ ಮೊದಲ ಜಾಗತಿಕ ಪತ್ರಿಕಾ ಸ್ರಾತಂತ್ರ್ಯ ಸೂಚಿ ಪ್ರಕಟವಾದಾಗ ೮೦ ನೇ ಸ್ಥಾನದಲ್ಲಿದ್ದ ಭಾರತದ ರ್‍ಯಾಂಕಿಂಗ್ ಕೆಲವೇ ವರ್ಷಗಳನ್ನು ಹೊರತು ಪಡಿಸಿ ಕೆಳಗಿಳಿಯುತ್ತಲೇ ಇರುವುದು ಪ್ರಜಾಪ್ರಭುತ್ವ ದುರ್ಬಲಗೊಳ್ಳುತ್ತಿರುವುದರ ಸಂಕೇತವಾಗಿದೆ. ನೆರೆಯ ರಾಷ್ಟ್ರಗಳಾದ ಭೂತಾನ್, ನೇಪಾಳ, ಮ್ಯೆಯನ್ಮಾರ್, ಅಫ್ಘಾನಿಸ್ಥಾನ್ ಮತ್ತು ಶ್ರೀಲಂಕಾ 'ವಿಶ್ವಗುರು' ಭಾರತಕ್ಕಿಂತಲೂ ಉನ್ನತ ಸ್ಥಾನ ಪಡೆದಿರುವುದು ಗಮನಾರ್ಹ. ಮೊದಲ ಸ್ಥಾನದಲ್ಲಿರುವ ನಾರ್ವೆಯಂತಹ ದೇಶಗಳನ್ನು ಮಾದರಿಯಾಗಿ ನೋಡದೆ ಚೈನಾ, ಪಾಕಿಸ್ಥಾನ ಮತ್ತು ಬಾಂಗ್ಲಾದೇಶ ಭಾರತಕ್ಕಿಂತ ಕೆಳಗಿನ ಸ್ಥಾನ ಪಡೆದಿರುವುದನ್ನು ಕಂಡು ಸಮಾಧಾನಪಟ್ಟುಕೊಳ್ಳುತ್ತೇವೆ. ಕಾಶ್ಮೀರದಲ್ಲಿ ಕಳೆದ ಒಂದು ವರ್ಷದಿಂದ ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ಹೇರಲಾಗಿರುವ ನಿರ್ಬಂಧ, ಇಂಟರ್‌ನೆಟ್ ನಿಷೇಧ ಮತ್ತು ಪತ್ರಕರ್ತರ ಮೇಲೆ ನಡೆದ ಪೊಲೀಸ್ ದೌರ್ಜನ್ಯ ಭಾರತವು ಹಿಂದಿನ ವರ್ಷಕ್ಕಿಂತ ಎರಡು ಸ್ಥಾನ ಕೆಳಗಿಳಿಯಲು ಕಾರಣವೆಂದು ವರದಿ ತಿಳಿಸುತ್ತದೆ.

೨೦೧೪ ಮತ್ತು ೨೦೧೯ರ ನಡುವೆ ಭಾರತದಲ್ಲಿ ೨೦೦ ಪತ್ರಕರ್ತರ ಮೇಲೆ ಗಂಭೀರ ಸ್ವರೂಪದ ಹಲ್ಲೆಗಳಾಗಿದ್ದು ೪೦ ಪತ್ರಕರ್ತರ ಹತ್ಯೆಯಾಗಿದೆ ಎಂದು ಥಾಕೂರ್ ಫೌಂಡೇಶನ್‌ನ ವರದಿ ಹೇಳುತ್ತದೆ. ಭ್ರಷ್ಟಾಚಾರವನ್ನು ಬಯಲಿಗೆಳೆದ, ದಲಿತರು, ಅಲ್ಪಸಂಖ್ಯಾತರು ಮತ್ತು ಬಡವರ ಮೇಲಿನ ದೌರ್ಜನ್ಯವನ್ನು ವರದಿಮಾಡಿದ ಹಲವು ಪತ್ರಕರ್ತರ ಮೇಲೆ ದೇಶದ್ರೋಹದ, ಭಯೋತ್ಪಾದನೆಯ ಪ್ರಕರಣಗಳನ್ನು ದಾಖಲಿಸಲಾಗಿದೆ. ವಿಪರ್ಯಾಸವೆಂದರೆ ಅಸಮಾನತೆ, ಅನ್ಯಾಯ, ಶೋಷಣೆಯನ್ನು ಪ್ರಶ್ನಿಸುವ ವಿದ್ಯಾರ್ಥಿಗಳು, ಅಧ್ಯಾಪಕರು, ಸಾಮಾಜಿಕ ಕಾರ್ಯಕರ್ತರು, ಲೇಖಕರು ಮತ್ತು ಕಲಾವಿದರ ಮೇಲಾಗುವ ದಾಳಿಗಳ ವಿರುದ್ಧ ದನಿಯೆತ್ತಬೇಕಾದ ಟಿವಿ ವಾಹಿನಿಗಳು ಅವರನ್ನು ದೇಶದ್ರೋಹಿಗಳೆಂದು ಬಿಂಬಿಸುತ್ತಿವೆ. ಧರ್ಮ ಮತ್ತು ರಾಷ್ಟ್ರೀಯತೆಯ ಹೆಸರಿನಲ್ಲಿ ನಡೆಯುವಂತಹ ಹಿಂಸೆಗೆ ಪ್ರಚೋದನೆ ನೀಡುತ್ತಿವೆ. ಆ ಕಾರಣಕ್ಕಾಗಿ ಎನ್‌ಡಿಟಿವಿ ಇಂಡಿಯಾ ಸುದ್ದಿ ವಾಹಿನಿಯ ಜನಪ್ರಿಯ ಸಂಪಾದಕ ಮತ್ತು ನಿರೂಪಕ ರವೀಶ್ ಕುಮಾರ್ ರವರು ಪ್ರಜಾಪ್ರಭುತ್ವಕ್ಕೆ ಬಹುದೊಡ್ಡ ಅಪಾಯವಿರುವುದು ಮಾಧ್ಯಮಗಳಿಂದ ಎಂದು ಹೇಳುತ್ತಾರೆ.

ಪತ್ರಿಕಾ ಸ್ವಾತಂತ್ರ್ಯವಿಲ್ಲದಿದ್ದರೆ ಎಂತಹ ದುರಂತಗಳಾಗಬಹುದೆಂಬುದಕ್ಕೆ ಅರ್ಥಶಾಸ್ತ್ರಜ್ಞ ಅಮಾರ್ತ್ಯ ಸೇನ್‌ರವರು ೩೦ ಮಿಲಿಯನ್ ಜನರ ಬಲಿ ತೆಗೆದುಕೊಂಡ ೧೯೫೮-೧೯೬೧ರ ಚೈನಾ ಕ್ಷಾಮದ ಉದಾಹರಣೆಯನ್ನು ಕೊಡುತ್ತಾರೆ. ಆ ದೇಶದಲ್ಲಿ ಪತ್ರಿಕಾ ಸ್ವಾತಂತ್ರ್ಯವೇ ಇಲ್ಲದ್ದರಿಂದ ಅಷ್ಟೊಂದು ಸಾವುಗಳಾದವು ಎಂದು ಅವರು ಹೇಳುತ್ತಾರೆ. ಅನೇಕ ಪ್ರದೇಶಗಳಲ್ಲಿ ಹಸಿವಿನಿಂದ ನರುಳುತ್ತಿದ್ದವರ, ಸಾಯುತ್ತಿದ್ದವರ ಸಂಖ್ಯೆ ಹೆಚ್ಚುತ್ತಲೇ ಇದ್ದರೂ ಅಲ್ಲಿಯ ಮಾಧ್ಯಮಗಳು ಎಲ್ಲವೂ ಸಹಜ ಸ್ಥಿತಿಯಲ್ಲಿಯೇ ಇದೆ ಎಂಬಂತೆ ವರದಿ ಮಾಡುತ್ತಿದ್ದವು ಏಕೆಂದರೆ ಅವುಗಳಿಗೆ ಕಠೋರ ವಾಸ್ತವವನ್ನು ವರದಿ ಮಾಡುವ, ಸರ್ಕಾರವನ್ನು ಟೀಕಿಸುವ ಅಥವಾ ಕಮ್ಯುನಿಸ್ಟ್ ಪಕ್ಷದ ನಾಯಕರಿಗೆ ಹಿತಕರವಲ್ಲದ ಯಾವುದೇ ಸುದ್ದಿಯನ್ನು ಬರೆಯುವ ಸ್ವಾತಂತ್ರ್ಯವಿರಲಿಲ್ಲ. ಹಾಗಾಗಿ ರಾಜಧಾನಿ ಬೀಜಿಂಗ್‌ನಲ್ಲಿದ್ದ ನಾಯಕರಿಗೆ ತಮ್ಮದೇ ದೇಶದಲ್ಲಿ ಲಕ್ಷಾಂತರ ಜನರು ಸಾಯುತ್ತಿರುವುದರ ಬಗ್ಗೆ ಸರಿಯಾದ ತಿಳುವಳಿಕೆ ಇರಲಿಲ್ಲ. ಪತ್ರಿಕೆಗಳು ವಾಸ್ತವ ಚಿತ್ರಣ ನೀಡಿದ್ದರೆ ಪರಿಹಾರ ಕಾರ್ಯಗಳನ್ನು ಕೈಗೊಂಡು ಲಕ್ಷಾಂತರ ಜನರ ಪ್ರಾಣ ಉಳಿಸಬಹುದಾಗಿತ್ತು. ಸೇನ್‌ರವರ ಪ್ರಕಾರ ಪತ್ರಿಕಾ ಸ್ವಾತಂತ್ರ್ಯವಿರುವ ದೇಶಗಳಲ್ಲಿ ಅಂತಹ ಭೀಕರ ಕ್ಷಾಮಗಳು ಸಂಭವಿಸಿಲ್ಲ. ಇಂದಿಗೂ ಕೂಡ ಚೈನಾದಲ್ಲಿ ಪತ್ರಿಕಾ ಸ್ವಾತಂತ್ರ್ಯ ಎಂಬುದಿಲ್ಲ. ಆ ಕಾರಣಕ್ಕಾಗಿಯೇ ಪತ್ರಿಕಾ ಸ್ವಾತಂತ್ರ್ಯ ಸೂಚಿಯಲ್ಲಿ ೧೮೦ ದೇಶಗಳ ಪೈಕಿ ಅದಕ್ಕೆ ೧೭೭ನೇ ಸ್ಥಾನ. ಸ್ವಾತಂತ್ರೋತ್ತರ ಭಾರತದಲ್ಲಿ ಪತ್ರಿಕಾ ಸ್ವಾತಂತ್ರ್ಯವಿದ್ದದ್ದರಿಂದಲೇ ೧೯೪೩ರಲ್ಲಿ ಬಂಗಾಳ ಕಂಡಂತಹ ಭೀಕರ ಕ್ಷಾಮಗಳು ಮರುಕಳಿಸಲಿಲ್ಲ ಎಂದು ಹೇಳಿದ್ದ ಸೇನ್ ರವರು ಇತ್ತೀಚಿನ ದಿನಗಳಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲಾಗುತ್ತಿರುವ ದಾಳಿ ಪ್ರಜಾತಂತ್ರವ್ಯವಸ್ಥೆಯನ್ನು ನಾಶಪಡಿಸುತ್ತಿದೆ ಎಂಬ ಆತಂಕ ವ್ಯಕ್ತಪಡಿಸಿದ್ದಾರೆ.

ಸರ್ಕಾರದ ವೈಫಲ್ಯಗಳನ್ನು ಬಯಲು ಮಾಡುವ ಮತ್ತು ಪ್ರಮುಖ ಸಾರ್ವಜನಿಕ ನೀತಿಗಳನ್ನು ಸಾಮಾನ್ಯ ನಾಗರೀಕರ ದೃಷ್ಟಿಯಿಂದ ಪ್ರಶ್ನಿಸುವ, ಚರ್ಚಿಸುವ ಸಂಪಾದಕರುಗಳ ಸೊಲ್ಲಡಗಿಸುವ ಪ್ರಯತ್ನಗಳು ನಡಯುತ್ತಲೇ ಇವೆ. ಉತ್ತರ ಪ್ರದೇಶದ ಮುಖ್ಯಮಂತ್ರಿ ಆದಿತ್ಯನಾಥ್‌ರವರು ಕೋವಿಡ್-೧೯ರ ನಿಯಮಗಳನ್ನು ಉಲ್ಲಂಘಿಸಿ ಆಯೋಧ್ಯಯ ಪೂಜಾ ಕಾರ್ಯವೊಂದರಲ್ಲಿ ಪಾಲ್ಗೊಂಡಿದ್ದನ್ನು ಟೀಕಿಸಿದ್ದಕ್ಕಾಗಿ 'ದಿ ವೈರ್' ಅಂತರ್ಜಾಲ ಪತ್ರಿಕೆಯ ಸಂಪಾದಕ ಸಿದ್ಧಾರ್ಥ ವರದರಾಜನ್‌ರವರ ಮೇಲೆ ಪ್ರಕರಣ ದಾಖಲಿಸಿ ಪೋಲೀಸ್ ಠಾಣೆ ಮುಂದೆ ಹಾಜರಾಗುವಂತೆ ನೋಟೀಸ್ ನೀಡಲಾಯಿತು. ಈ ಕ್ರಮವು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕುವ ಪ್ರಯತ್ನವೆಂದು ಭಾರತೀಯ ಸಂಪಾದಕರ ಒಕ್ಕೂಟ ಹೇಳಿದ್ದರೂ ಅದನ್ನು ಗಂಭೀರವಾಗಿ ಪರಿಗಣಿಸದಿರುವುದು ಇಂದಿನ ರಾಜಕೀಯ ವಾತಾವರಣದಲ್ಲಿ ಅಚ್ಚರಿಯೇನೂ ಅಲ್ಲ.

ಕಳೆದ ತಿಂಗಳು ಪರಿಸರ ಪರಿಣಾಮ ಮೌಲ್ಯಮಾಪನ (EIA) ನಿಯಮಗಳಿಗೆ ತರಲು ಉದ್ದೇಶಿಸಿರುವ ತಿದ್ದುಪಡಿಯು ಪರಿಸರ ನಾಶಕ್ಕೆ ದಾರಿಮಾಡಿಕೊಡುತ್ತದೆ ಎಂಬ ಕಾರಣಕ್ಕಾಗಿ ವಿರೋಧ ವ್ಯಕ್ತಪಡಿಸಿದ ಮೂರು ಪರಿಸರ ಸಂಘಟನೆಗಳ ವೆಬ್‌ಸೈಟ್‌ಗಳನ್ನು ಪ್ರತಿಬಂಧಿಸಲಾಯಿತು. ಅವುಗಳಲ್ಲಿ ಅಂತರರಾಷ್ಟ್ರೀಯ ಯುವ ಪರಿಸರ ಹೋರಾಟಗಾರ್ತಿ ಗ್ರೇಟಾ ಥನ್‌ಬರ್ಗ್ ಸ್ಥಾಪಿಸುರುವ 'ಜಾಗತಿಕ ಯುವ ವಾತಾವರಣ ಆಂದೋಲ'ನದ ಭಾರತೀಯ ಘಟಕವಾಗಿರುವ 'ಫ್ರೆಂಡ್ಸ್ ಆಫ್ ಫ್ಯೂಚರ್ ಇಂಡಿಯಾ'ದ ವೆಬ್‌ಸೈಟ್ ಕೂಟ ಒಂದು. ಈ ಸಂಘಟನೆಯ ವಿರುದ್ಧ ಭಯೋತ್ಪಾದನೆಯ ಆರೋಪ ಹೊರಿಸಿ ನೋಟೀಸ್ ಜಾರಿಮಾಡಲಾಯಿತು. ಮುಖ್ಯವಾಹಿನಿಯ ಮಾಧ್ಯಮಗಳು ಪತ್ರಿಕಾ ತತ್ವಗಳೊಂದಿಗೆ ರಾಜಿ ಮಾಡಿಕೊಂಡಿರುವ ಕಾಲದಲ್ಲಿ ಅಂತರ್ಜಾಲ ಆಧಾರಿತ ಮಾಧ್ಯಮಗಳು ಭಿನ್ನಮತದ ಅಭಿವ್ಯಕ್ತಿಗೆ ಅವಕಾಶ ಮಾಡಿಕೊಡುತ್ತವಾದ್ದರಿಂದ ಈ ಕ್ರಮ ಅವುಗಳಿಗೆ ನೀಡಿದ ಎಚ್ಚರಿಕೆಯಾಗಿತ್ತು. ಸರ್ಕಾರದ ನಿಯಂತ್ರಣದಿಂದ ಮುಕ್ತವಾದ 'ಸೈಬರ್ ಡೆಮಾಕ್ರಸಿ'ಯನ್ನು ಅಂತರ್ಜಾಲ ಸೃಷ್ಟಿಸುತ್ತದೆ ಎಂಬ ಆರಂಭದ ನಂಬಿಕೆ ಈಗ ಹುಸಿಯಾಗಿದೆ. ಇಂದು ಹೆಚ್ಚು ನಿರ್ಬಂಧಕ್ಕೆ, ಸೆನ್ಸಾರ್‌ಷಿಪ್‌ಗೆ ಒಳಗಾಗುತ್ತಿರುವ ಮಾಧ್ಯಮವೆಂದರೆ ಅಂತರ್ಜಾಲ. ಯಾವ ಸಂದೇಶ ಎಲ್ಲಿ ಹರಿದಾಡುತ್ತಿದೆ ಎಂದು ಕಣ್ಗಾವಲಿಡಲು ಮತ್ತು ಒಂದು ವೆಬ್‌ಸೈಟನ್ನು ತಕ್ಷಣವೇ ನಿಷ್ಕ್ರಿಯಗೊಳಿಸಲು ಒಂದು ಕಮ್ಯಾಂಡ್ ಸಾಕು. ಸತ್ಯವನ್ನು ಮರೆಮಾಚುತ್ತಾ, ಸುಳ್ಳುಗಳು ಮತ್ತು ಅರೆಸತ್ಯಗಳನ್ನು ಪ್ರಸಾರ ಮಾಡುತ್ತಾ ಪ್ರಜೆಗಳನ್ನು ನಿಯಂತ್ರಿಸುವ ಆರ್ವೆಲಿಯನ್ ರಾಜ್ಯ ನಮ್ಮನ್ನು ಆವರಿಸಿಕೊಳ್ಳುತ್ತಿರುವಂತೆ ಕಾಣಿಸುತ್ತಿದೆ.



**(ಶಂಕರಘಟ್ಟದ ನಿವಾಸಿಯಾದ ಲೇಖಕರು ಕುವೆಂಪು ವಿಶ್ವವಿದ್ಯಾನಿಲಯದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದಲ್ಲಿ ಪ್ರಾಧ್ಯಾಪಕರಾಗಿದ್ದಾರೆ)**

ಪ್ರಚಲಿತ-೪

# ಹೊಸ ಭಾರತದ ರಾಷ್ಟ್ರಪಿತ ಸಾವರ್ಕರ್ ; ಗಾಂಧಿ ಏನಿದ್ದರೂ ಮಲತಂದೆ!

## ವಿಸ್ತೃತ ಸಂದರ್ಶನವೊಂದರಲ್ಲಿ ಆಶೀಶ್ ನಂದಿ ವಿಶ್ಲೇಷಣೆ



ಹಿರಿಯ ಚಿಂತಕ, ಲೇಖಕ ಮತ್ತು ರಾಜಕೀಯ ಮನಶ್ಶಾಸ್ತ್ರಜ್ಞ, ಅಶೀಶ್ ನಂದಿಯವರು ಭಾರತದ ಹಿಂದಿನ ಮತ್ತು ಇಂದಿನ ಪರಿಸ್ಥಿತಿಯನ್ನು ಅವಲೋಕಿಸಿ ಆಡಿದ ಮಾತುಗಳು:

೧೯೧೬ರಲ್ಲಿ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್‌ಗಳು ಲಕ್ನೋ ಒಪ್ಪಂದಕ್ಕೆ ಸಹಿಮಾಡಿದಾಗ, ಎರಡೂ ಪಕ್ಷಗಳು, ತಮ್ಮ ನಡುವೆ ಉಂಟಾಗಿದ್ದ ಕಂದಕಕ್ಕೆ ಒಂದು ಸೇತುವೆ ನಿರ್ಮಿಸಿ, ಬ್ರಿಟಿಷ್ ವಸಾಹತು ಆಳ್ವಿಕೆಯ ವಿರುದ್ಧ ಮತ್ತಷ್ಟು ಉಗ್ರವಾದ ಚಳುವಳಿ ನಡೆಸಬಹುದೆಂಬ ನಂಬಿಕೆಯನ್ನು ಹೆಚ್ಚಿಸಿದವು. ಈ ನಂಬಿಕೆ ಶೀಘ್ರದಲ್ಲೇ ಹುಸಿಯಾಗಿಹೋಯಿತು. ಈ ಎರಡು ಪಕ್ಷಗಳ ನಡುವಿನ ಕಂದರ ಮುಸ್ಲಿಂ ಮತ್ತು ಹಿಂದುಗಳ ನಡುವಿನ ಕಂದರವೂ ಆಗಿದ್ದು ಅದು ಮತ್ತಷ್ಟು ಹಿಗ್ಗಿ, ಕೊನೆಗೆ ದೇಶ ವಿಭಜನೆಯಲ್ಲಿ ಪರ್ಯವಸಾನವಾಯಿತು. ವಾಸ್ತವದಲ್ಲಿ ಇಂದು ನಾವು ಯಾವುದರ ಬಗೆಗೆ ಸಂಭ್ರಮ ಪಡುತ್ತೇವೋ ಅದು ನಾಳೆ ದುಃಖ ಮತ್ತು ದುರಂತಕ್ಕೆ ಕಾರಣವಾಗಬಹುದು. ಸದ್ಯದ ಚಿಂತೆ ಮತ್ತು ಸಮಸ್ಯೆಗಳು ಶತಮಾನದ ನಂತರ ಹೊಸ ಭಾರತವನ್ನು ನಿರ್ಮಿಸಲು ನಮ್ಮನ್ನು ಉದ್ದೀಪಿಸಬಹುದು.

೨೦೧೬ರಲ್ಲಿ ಆರ್ಥಿಕ ಸಮೃದ್ಧಿ ಮತ್ತು ರಾಜಕೀಯ ಶಕ್ತಿಯ ಹೊಸ ಉದಯ ಎಂದು ಗುರುತಿಸಲಾಗುವ ಹೊಸ ದಿಕ್ಕಿಗೆ ಭಾರತವು ಮುನ್ನಡೆಯಿತು. ಖ್ಯಾತ ರಾಜಕೀಯ ಮನಶ್ಶಾಸ್ತ್ರಜ್ಞ ಅಶೀಶ್ ನಂದಿಯವರು, ಏಜಾಜ್ ಅಶ್ರಫ್ ಅವರಿಗೆ ನೀಡಿದ ಸಂದರ್ಶನದಲ್ಲಿ ಹಿಂದಿನ ಮತ್ತು ಇಂದಿನ ಗ್ರಹಿಕೆಗಳನ್ನು ಆಧರಿಸಿ ಭವಿಷ್ಯದ ಭಾರತವನ್ನು ಕುರಿತು ಮಾತನಾಡಿದ್ದಾರೆ. ಅದರ ಆಯ್ದ ಭಾಗ:

**Regimes of Narcissism, Regimes of Despair (ಆತ್ಮರತಿಯ ಆಳ್ವಿಕೆಗಳು, ಹತಾಶೆಯ ಆಳ್ವಿಕೆಗಳು') ಎಂಬ ನಿಮ್ಮ ಪುಸ್ತಕದ ಪ್ರಾರಂಭದ ಸಾಲುಗಳು, "ನಾನು ಯಾವ ಭಾರತವನ್ನು ಕುರಿತು ಸುಮಾರು ನಾಲ್ಕು ದಶಕಗಳ ಕಾಲ ಬರೆದೆನೋ ಆ ದೇಶವಾಗಿ ಉಳಿದಿರದ ಭಾರತವನ್ನು ಕುರಿತ ಪ್ರಬಂಧಗಳು ಇವು, . ಇತ್ತೀಚಿನ ವರ್ಷಗಳಲ್ಲಿ ಹಲವು ವಿಚಾರಗಳು ತೀವ್ರವಾಗಿ ಬದಲಾಗಿವೆ..." ಎನ್ನುತ್ತವೆ. ಈ ಬದಲಾವಣೆಗಳು ಭಾರತದ ಭವಿಷ್ಯಕ್ಕೆ ಯಾವ ಮುನ್ಸೂಚನೆಯನ್ನು ನೀಡುತ್ತವೆ ?**

ನಾನು ವಿಚಾರಗಳ ಒಂದು ವಿಶಾಲವಾದ ವ್ಯಾಪ್ತಿಯನ್ನು ತೆಗೆದುಕೊಳ್ಳುತ್ತೇನೆ. ಮೊದಲನೆಯದಾಗಿ ಈಗ ಭಾರತಕ್ಕೆ ತನ್ನದೇ ಆದ ದೃಷ್ಟಿ ಇಲ್ಲ. ಸುತ್ತ ಮುತ್ತಲಿನ ಹಲವಾರು ಅಭಿವೃದ್ಧಿಶೀಲ ದೇಶಗಳ ದೃಷ್ಟಿಯೇ ಭಾರತದ ದೃಷ್ಟಿಯೂ ಆಗಿದೆ. ಅದೊಂದು ಏಕರೂಪಗೊಂಡ, ಮುಂಗಾಣಬಹುದಾದ ಭವಿಷ್ಯ. ಬಡತನ, ಅಗೌರವಗಳೆಲ್ಲ ಈ ಭವಿಷ್ಯವೇ ಒಂದು ಏಕರೂಪಿ ಪರಿಹಾರ ಎಂಬುದಾಗಿ ನಮ್ಮನ್ನು ನಂಬಿಸಲಾಗಿದೆ. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ ನಮ್ಮ ಭವಿಷ್ಯವನ್ನು ಕದಿಯಲಾಗಿದೆ.

ಚೀನಾ ಒಳಗೊಂಡಂತೆ ಎಲ್ಲ ಅಭಿವೃದ್ಧಿಶೀಲದೇಶಗಳೂ ತಾವು ಹಿಂದುಳಿದಿದ್ದೇವೆ ಎಂಬುದನ್ನು ಒಪ್ಪಿಕೊಂಡು ಬಿಟ್ಟಿವೆ. ನಮ್ಮ ಭವಿಷ್ಯವು ಎಲ್ಲಾ ಪ್ರಮಾಣೀಕೃತ (ಸ್ಟ್ಯಾಂಡರ್ಡೈಸ್ಡ್) ರಾಷ್ಟ್ರ-ರಾಜ್ಯವ್ಯವಸ್ಥೆಗಳ ಭವಿಷ್ಯದಂತೆಯೇ ಇರುವುದು. ಅದು ೩೦೦ ವರ್ಷಗಳಷ್ಟು ಹಳೆಯದು ಎಂಬುದನ್ನು ಹೊರತುಪಡಿಸಿದರೆ, ಅವರಿಗೂ ಕೂಡ ಅದು ಒಂದು ಹೊಸ ದೃಷ್ಟಿಯೇ. ಈಗ ನಾವು ಗೆದ್ದವರ ಹಿಂಬಾಲಕರು, ಆದ್ದರಿಂದ ಭಾರತಕ್ಕೆ ವಿಶಿಷ್ಟವಾದ ಒಂದು ಭವಿಷ್ಯವೆಂಬುದು ಇಲ್ಲ.

**ಭಾರತವು ಸಾರ್ವತ್ರಿಕವಾದ ದೃಷ್ಟಿಯನ್ನು ಒಪ್ಪಿಕೊಂಡಿರುವುದರ ಬಗ್ಗೆ ಮಾತನಾಡುವಾಗ, ನೀವು "ನಗರ-ಕೈಗಾರಿಕಾ ದೃಷ್ಟಿ"ಯ ಬಗ್ಗೆ ಸೂಚಿಸುತ್ತಿದ್ದೀರಾ ?**ಹೌದು ಅದೊಂದು ಸಮ್ಮತಿ, ಅದು ವಿಮರ್ಶೆಯಿಲ್ಲದೆ ಸ್ವೀಕರಿಸಿದ ಸಮ್ಮತಿ, ವಾಸ್ತವದಲ್ಲಿ ಅದೊಂದು ಅನರ್ಹ ಸಮ್ಮತಿ. ನಿಮಗೆ ತಿಳಿದಿರಲಿ, ಇದು ಭಾರತೀಯ ಜನತಾ ಪಕ್ಷದ ಸೃಷ್ಟಿಯಲ್ಲ, ಆ ಪಕ್ಷ ಅಧಿಕಾರಕ್ಕೆ ಬರುವ ಮೊದಲೇ ಭಾರತವು ಬದಲಾಗಿತ್ತು.

**ಬಹುಶಃ ಬಿ ಜೆ ಪಿ ಪಕ್ಷ ಬೆಳೆದದ್ದೇ ಭಾರತವು ಬದಲಾದದ್ದರ ಪರಿಣಾಮವಾಗಿ.**

ಅದು ಸರಿ, ಅವರು ನಗರ-ಕೈಗಾರಿಕಾ ದೃಷ್ಟಿಯನ್ನು ಹೆಚ್ಚು ನಿರ್ದಯವಾಗಿ ಜಾರಿಮಾಡಬಲ್ಲರು ಅಥವಾ ಹಾಗೆ ಕಾಣುವಂತೆ ಮಾಡಬಲ್ಲರು. ಮತ್ತೆ ಪುನರಾವರ್ತಿಸುವುದಾದರೆ, ದಕ್ಷಿಣ ದೇಶಗಳೆಂದು ಕರೆಯಲ್ಪಡುವ-ಬ್ರೆಜಿಲ್, ಭಾರತ ಚೀನಾ ಮುಂತಾದುವು-ದೇಶಗಳ ದೃಷ್ಟಿಯೂ ನಿರ್ದಿಷ್ಟವಾಗಿ ಇದೇನೇ.

ಲೀ ಕ್ವಾನ್ ಯ್ಯೂ (ಸಿಂಗಪುರದ ಪ್ರಥಮ ಪ್ರಧಾನಮಂತ್ರಿ) ನಮ್ಮ ಹೀರೋ. ಆತ ಎಷ್ಟೊಂದು ಜನಪ್ರಿಯನೆಂದರೆ, ಆತ ಕೊನೆಯ ನಿರಂಕುಶಾಧಿಕಾರಿ, "ಅಭಿವೃದ್ಧಿಶೀಲ ನಿರಂಕುಶಾಧಿಕಾರದ" ಕಟ್ಟಾ ಸಮರ್ಥಕ ಎಂದು ಹೇಳಲು ಯಾರಾದರೂ ಹೆದರಬೇಕು. ಪೂರ್ವ ಏಷ್ಯಾ ಹುಲಿಗಳನ್ನೇ (ದಕ್ಷಿಣಕೊರಿಯಾ, ತೈವಾನ್, ಸಿಂಗಪೂರ್ ಮತ್ತು ಹಾಂಗ್‌ಕಾಂಗ್) ತೆಗೆದುಕೊಳ್ಳಿ, ಅವು ಹುಲಿಗಳು ಮಾತ್ರವಲ್ಲ, ನರಭಕ್ಷಕಗಳು ಎಂದು ನಾನು ವಾದಿಸಿದ್ದೇನೆ. ಅವೆಲ್ಲವೂ ಕ್ರೂರ ಪ್ರಜಾಪೀಡಕ ಅಧಿಕಾರ ನಡೆಸಿದ ದೇಶಗಳೇ. ಅದ್ಭುತ ಅಭಿವೃದ್ಧಿಯನ್ನು ಬಯಸಿದರೆ ನೀವು ಅತಿ ಹೆಚ್ಚಿನ ಮಟ್ಟದ ನಿರಂಕುಶಾಧಿಕಾರಕ್ಕೆ ಸಿದ್ಧರಾಗಿರಬೇಕಾಗುತ್ತದೆ.

**ಭಾರತವೂ ಆ ದಿಕ್ಕಿನಲ್ಲಿ ಹೊರಟಿದೆಯೇ?**

ಭಾರತದಲ್ಲಿ, ೧೯೭೦ರ ಮಧ್ಯಭಾಗದಲ್ಲಿ ಇಂದಿರಾ ಗಾಂಧಿಯವರಿಂದ ಈ ಬಗೆಯ ಚಲನೆ ಪ್ರಾರಂಭವಾಯಿತು. ಅದರೆ ನಾವು ಯಾವ ಬುದ್ಧಿಪೂರ್ವಕ ಪ್ರಯತ್ನವೂ ಇಲ್ಲದೆ ಏನು ಮಾಡಿದೆವೋ - ನಾವು ಅದರ ಬಗ್ಗೆ ಆಗ ಆಮೂಲಾಗ್ರ ಚಿಂತಿಸದೇ ಇದ್ದುದರಿಂದ - ಅದನ್ನು ಈಗ ಉದ್ದೇಶಪೂರ್ವಕ ಮಾಡುತ್ತಿದ್ದೇವೆ. ಸಿ ಎನ್ ಅಣ್ಣಾದೊರೈ (ದ್ರಾವಿಡ ಚಳುವಳಿಯ ಅಧ್ವರ್ಯುಗಳಲ್ಲೊಬ್ಬರು ಮತ್ತು ತಮಿಳು ನಾಡಿನ ಹಿಂದಿನ ಮುಖ್ಯ ಮಂತ್ರಿಗಳು) ತಮಿಳುನಾಡು ಸ್ವತಂತ್ರ ದೇಶವಾಗಬಯಸುವುದೆಂದು ಘೋಷಿಸಿದಾಗ ಅವರನ್ನು ಯಾರೂ ದೇಶದ್ರೋಹಿ ಎಂದು ಕರೆಯಲಿಲ್ಲ, ಸಂಸತ್ತಿನಲ್ಲಿ ಅವರ ವಿರುದ್ಧ ದಾಳಿ ನಡೆಸಲಿಲ್ಲ, ಅಥವಾ ದೇಶವ್ಯಾಪಿ ಪ್ರತಿಭಟನೆ ನಡೆಸಲಿಲ್ಲ. ಜನಸಂಘ ( ಬಿ ಜೆ ಪಿ ಯ ಹಿಂದಿನ ಅವತಾರ) ಕೂಡ ಹಾಗೆ ಮಾಡಲಿಲ್ಲ. ಜನ ಆಕ್ರೋಶಗೊಂಡಾಗ, ಸಂಕಷ್ಟದಲ್ಲಿದ್ದಾಗ ಹೇಳುವ ಮಾತುಗಳನ್ನು ನಿರ್ಲಕ್ಷಿಸಬೇಕೆಂದು ಅವರಿಗೆ ತಿಳಿದಿತ್ತು.

ಶ್ರೀಮತಿ ಇಂದಿರಾ ಗಾಂಧಿಯವರ ವಿಚಾರದಲ್ಲೂ ಹಾಗೇ ಆಯಿತು, ಅಂತಿಮವಾಗಿ ಅವರು ಲಾಲ್‌ಡೆಂಗಾ ಅವರೊಂದಿಗೆ ಒಪ್ಪಂದಕ್ಕೆ ಸಹಿ ಮಾಡಬೇಕಾಯಿತು. ಅವರು(ಲಾಲ್ಡೆಂಗಾ) ಮಿಜೋರಾಮ್‌ನ ಮುಖ್ಯ ಮಂತ್ರಿಯಾಗಿರುವಾಗ ಮೃತರಾದರು. ಅವರಿಗೆ ಸರ್ಕಾರೀ ಮರ್ಯಾದೆಯೊಂದಿಗೆ ಅಂತ್ಯಸಂಸ್ಕಾರ ನಡೆಸಲಾಯಿತು. ತನ್ನನ್ನು ತಾನು ಜನರಲ್ ಲಾಲ್‌ಡೆಂಗಾ ಎಂದು ಕರೆದುಕೊಳ್ಳುತ್ತಿದ್ದ, ಭಾರತದ ವಿರುದ್ಧ ಬಂಡಾಯ ಸೇನೆಯನ್ನು ಮುನ್ನಡೆಸಿದ ವ್ಯಕ್ತಿ ದೇಶಭಕ್ತ ಲಾಲ್‌ಡೆಂಗಾ ಆದರು ರೂಢಿ ಸಹಜ ನಡೆಗಳು ಇನ್ನು ನಮಗೆ ದೊರೆಯುವುದಿಲ್ಲ, ಏಕೆಂದರೆ ಒಬ್ಬರಲ್ಲದಿದ್ದರೆ ಮತ್ತೊಬ್ಬರು ಇದರ ರಾಜಕೀಯ ಲಾಭ ಪಡೆಯಲು ಬಯಸುತ್ತಿರುತ್ತಾರೆ. ನಾನು ಸೂಚಿಸುವ ಎರಡನೆ ಅಂಶವೆಂದರೆ ನಮ್ಮ ದೃಷ್ಟಿಗಳನ್ನು ಮಾತ್ರ ಕದಿಯಲಾಗಿಲ್ಲ, ಭಾರತದಲ್ಲಿ ರಾಜಕಾರಣದ ವ್ಯಾಪ್ತಿಯೂ ಬಹಳ ತೀವ್ರವಾಗಿ ಸಂಕುಚಿತಗೊಂಡಿದೆ ಎಂಬುದು.

**ಅದು ೨೦೩೦ ಅಥವಾ ೨೧೦೦ರ ಹೊತ್ತಿಗೆ ಇನ್ನೂ ಹೆಚ್ಚು ಸಂಕುಚಿತಗೊಳ್ಳಬಹುದೇ?**

ಅದು ಈಗಿರುವುದಕ್ಕಿಂತಲೂ ಹೆಚ್ಚು ಸಂಕುಚಿತಗೊಳ್ಳಲಾರದು.

**ನಮಗೊಂದು ಪರ್ಯಾಯ ದೃಷ್ಟಿ ಲಭ್ಯವಿಲ್ಲದಿರುವುದು ಇದಕ್ಕೆ ಕಾರಣವೇ?**

ಅದು ಸರಿ, ಯಾವೆಲ್ಲಾ ಪರ್ಯಾಯ ದೃಷ್ಟಿಗಳಿವೆಯೋ ಅವೆಲ್ಲವೂ ಅಂಚಿಗೆ

ಯಾವೆಲ್ಲಾ ಪರ್ಯಾಯ ದೃಷ್ಟಿಗಳಿವೆಯೋ ಅವೆಲ್ಲವೂ ಅಂಚಿಗೆ ತಳ್ಳಲ್ಪಟ್ಟಿವೆ. ಒಂದರ್ಥದಲ್ಲಿ ಮೇಧಾ ಪಾಟ್ಕರ್, ಕ್ಲಾಡ್ ಆಳ್ವಾರಿಸ್, ಅಥವಾ ವಂದನಾ ಶಿವ ಅವರಂತಹವರು ಸೋಲು ಕಂಡಿದ್ದೇವೆ ಎಂದುಕೊಳ್ಳುವುದಿಲ್ಲ, ಏಕೆಂದರೆ ಅವರು ತಮ್ಮ ದೃಷ್ಟಿಗಳಿಗೆ ಬದ್ಧರಾಗಿರುವ ಶಕ್ತಿವಂತ ಪುರುಷರು ಅಥವಾ ಮಹಿಳೆಯರು. ಆದರೆ ಒಂದು ಅಂಚಿನಲ್ಲಿರುವ ವರ್ಗವನ್ನು ಹೊರತುಪಡಿಸಿ ಮಿಕ್ಕವರು ಇವರುಗಳನ್ನು ದೃಷ್ಟಾರರೆಂದು ಪರಿಗಣಿಸುವುದಿಲ್ಲ. ಅಥವಾ ಯಾರೂ ಅವರುಗಳನ್ನು ರಾಜಕೀಯವಾಗಿ ಪ್ರಸ್ತುತರೆಂದೂ ಯೋಚಿಸುವುದಿಲ್ಲ.

**ಇಂದು ನಮ್ಮ ಸುತ್ತ ನಾವು ಕಾಣುತ್ತಿರುವ ಹಿಂದುತ್ವವು ೨೦೦೦ ಅಥವಾ ೪೦೦೦ ವರ್ಷಗಳಷ್ಟು ಪುರಾತನವಾದುದಲ್ಲ. ಅದು ಬರೀ ೧೫೦ ವರ್ಷಗಳಷ್ಟು ಹಳೆಯದು. ಬ್ರಿಟಿಷ್ ಆಳ್ವಿಕೆ ಪರಿಚಯಿಸಿದ ಹೊಸ ರಾಜಕೀಯ – ಆರ್ಥಿಕತೆಯ ಅಡಿಯಲ್ಲಿ ನಗರ ಭಾರತದಲ್ಲಿ ಅದು ಹುಟ್ಟಿತು. ಅದು ನಮಗೆ ಎದ್ದು ಕಾಣುವುದು ಹೆಚ್ಚು ಉದಾರವಾಗಿದ್ದ ಕ್ಯಾಥೋಲಿಕ್ ಧರ್ಮವನ್ನು ಪ್ರೊಟೆಸ್ಟಂಟ್ ಧರ್ಮಕ್ಕೆ ಹೋಲಿಸಿದಾಗ,. ನಾನೊಂದು ಪ್ರಾಟೆಸ್ಟೆಂಟ್ ಕುಟುಂಬದಿಂದ ಬಂದಿದ್ದೇನೆ. ಇಂದಿನ ಹಿಂದುಧರ್ಮವು ಅದರಂತಹದೇ ಎಂಬುದು ನನಗೆ ತಿಳಿದಿದೆ.**

ತಳ್ಳಲ್ಪಟ್ಟಿವೆ. ಒಂದರ್ಥದಲ್ಲಿ ಮೇಧಾ ಪಾಟ್ಕರ್, ಕ್ಲಾಡ್ ಆಳ್ವಾರಿಸ್, ಅಥವಾ ವಂದನಾ ಶಿವ ಅವರಂತಹವರು ಸೋಲು ಕಂಡಿದ್ದೇವೆ ಎಂದುಕೊಳ್ಳುವುದಿಲ್ಲ, ಏಕೆಂದರೆ ಅವರು ತಮ್ಮ ದೃಷ್ಟಿಗಳಿಗೆ ಬದ್ಧರಾಗಿರುವ ಶಕ್ತಿವಂತ ಪುರುಷರು ಅಥವಾ ಮಹಿಳೆಯರು. ಆದರೆ ಒಂದು ಅಂಚಿನಲ್ಲಿರುವ ವರ್ಗವನ್ನು ಹೊರತುಪಡಿಸಿ ಮಿಕ್ಕವರು ಇವರುಗಳನ್ನು ದೃಷ್ಟಾರರೆಂದು ಪರಿಗಣಿಸುವುದಿಲ್ಲ. ಅಥವಾ ಯಾರೂ ಅವರುಗಳನ್ನು ರಾಜಕೀಯವಾಗಿ ಪ್ರಸ್ತುತರೆಂದೂ ಯೋಚಿಸುವುದಿಲ್ಲ.

**ಹಾಗಾದರೆ ನಮಗೆ ಆಯ್ಕೆಗಳೇ ಇಲ್ಲದಿರುವಂತಹ, ಆದರೆ ಒಂದು ಏಕರೂಪಗೊಳಿಸಲ್ಪಟ್ಟ ದೃಷ್ಟಿಯ ಪರಿಣಾಮಗಳನ್ನು ಕಾಣಬೇಕಾದ ವಿಚಿತ್ರ ಪರಿಸ್ಥಿತಿಯಲ್ಲಿ ಸಿಕ್ಕಿಹಾಕಿಕೊಂಡಿದ್ದೇವೆಯೇ?**

ಆಯ್ಕೆಗಳೇ? ಹೌದು, ಭಾರತ ಅಥವಾ ಚೀನಾದಲ್ಲಿ ಒಂದು ಉತ್ತಮ ಜೀವನವನ್ನು ನಡೆಸಿದ ನಂತರ ವ್ಯಕ್ತಿಯೊಬ್ಬ ಮರಣಹೊಂದಿದರೆ ಅವನ ಆತ್ಮವು ಸ್ವರ್ಗಕ್ಕೆ ಹೋಗುವುದಿಲ್ಲ – ಅದು ನ್ಯೂಯಾರ್ಕ್‌ಗೆ ಹೋಗುತ್ತದೆ.

ನಮಗೆ ಎದುರಾಗುತ್ತಿದ್ದ ಹಲವಾರು ಪರಿಸರ ಸಮಸ್ಯೆಗಳ ಬಗ್ಗೆ ಹಿಂದೆ ಮಾತನಾಡುತ್ತಿದ್ದಂತೆ ಈಗ ಮಾತನಾಡಲೂ ಸಾಧ್ಯವಿಲ್ಲ. ನಮ್ಮ ಹಲವಾರು ಬೃಹತ್ ಅಣೆಕಟ್ಟುಗಳು ನಿರೀಕ್ಷಿತ ಲಾಭಗಳನ್ನು ತಂದು ಕೊಟ್ಟಿಲ್ಲ ಎಂಬುದನ್ನು ಒಪ್ಪಿಕೊಳ್ಳುವ ಧೈರ್ಯವೂ ನಮಗಿಲ್ಲ. ಭಾರತದ ಪ್ರಥಮ ವಿವಿಧೋದ್ದೇಶ ಅಣೆಕಟ್ಟುಗಳ ಯೋಜನೆಯಾದ ದಾಮೋದರ್ ಕಣಿವೆ ಯೋಜನೆ ನಿಗಮವು ಯೋಜಿಸಿದ ಎಂಟು ಅಣೆಕಟ್ಟುಗಳ ಪೈಕಿ ನಾಲ್ಕನ್ನು ಮಾತ್ರ ನಿರ್ಮಿಸಲಾಗಿದೆ. ದಾಮೋದರ್ ಕಣಿವೆ ಯೋಜನೆಯಿಂದ ನಮಗೆ ದೊರೆಯುತ್ತಿರುವುದಕ್ಕಿಂತ ಹೆಚ್ಚು ನಾವು ಅದರ ನಿರ್ವಹಣೆಗಾಗಿ ಖರ್ಚು ಮಾಡುತ್ತಿದ್ದೇವೆ. ಉದಾಹರಣೆಗೆ ಬಿಹಾರವನ್ನು ನೋಡಬಹುದು, ಅಣೆಕಟ್ಟೆ ಇಲ್ಲದಿದ್ದಾಗ ಅಲ್ಲಿ ಬರೀ ೧೫% ಪ್ರದೇಶ ಪ್ರವಾಹಕ್ಕೆ ತುತ್ತಾಗುತ್ತಿದ್ದರೆ ಅಣೆಕಟ್ಟೆ ನಿರ್ಮಾಣದ ನಂತರ ೩೦% ಗಿಂತಲೂ ಹೆಚ್ಚು ಪ್ರದೇಶ ಪ್ರವಾಹಕ್ಕೆ ಒಳಗಾಗುತ್ತಿದೆ.

ಜೀವಪರಿಸರ ಸೂಕ್ಷ್ಮತೆಯು ಶತಮಾನಗಳಿಂದಲೂ ನಮ್ಮ ಜೀವನದಲ್ಲಿ ಹಾಸುಹೊಕ್ಕಾಗಿದೆ. ಯಾರೂ ಜೀವಪರಿಸರ ಅಥವಾ ಪರಿಸರದ ಬಗ್ಗೆ ಮಾತನಾಡುತ್ತಿರಲಿಲ್ಲ, ಆದರೆ ಅದರ ಬಗೆಗಿನ ಸಾಂಪ್ರದಾಯಿಕವಾಗಿ ಬಂದ ಹೆದರಿಕೆ, ಪ್ರಕೃತಿಯಲ್ಲಿ ಅಂತರ್ಗತವಾಗಿರುವ ಒಂದು ಮಾಂತ್ರಿಕತೆ ನಮ್ಮನ್ನು ರಕ್ಷಿಸುತ್ತಿತ್ತು (ಪ್ರಕೃತಿಗೆ ತೊಂದರೆ ಉಂಟು ಮಾಡದಂತೆ ನಮ್ಮನ್ನು ತಡೆಯುವ ಮೂಲಕ) ಮೂಢ ನಂಬಿಕೆ ಎಂದು ಕರೆದು ಅವೆಲ್ಲವನ್ನೂ ನಾವು ಕೈಬಿಟ್ಟಿದ್ದೇವೆ.

ಮುಂದಿನ ಪೀಳಿಗೆಯ ಪರಿಕಲ್ಪನೆಯೇ ನಮಗೀಗ ಇಲ್ಲ. "ಭವಿಷ್ಯದ ಬಗೆಗೆ ನಾನೇಕೆ ಚಿಂತಿಸಬೇಕು, ಭವಿಷ್ಯವು ನನಗೇನು ಮಾಡಿದೆ?" ಎಂದ ಆ ಅಮೆರಿಕನ್ ಜಾಣನ ರೀತಿ ನಾವಿಂದು ಇದ್ದೇವೆ. ಪ್ರತಿಯೊಬ್ಬ ಭಾರತೀಯನೂ, ಭಾರತೀಯಳೂ, ತನ್ನ ಬದುಕನ್ನು ಮಾತ್ರ ನಡೆಸ ಬಯಸುತ್ತಾನೆ/ಳೆ. ನಿಮ್ಮ ಕಾರು ಎಷ್ಟು ಪೆಟ್ರೋಲ್ ಕಬಳಿಸುತ್ತದೋ, ಎಂತೆಂತಹ ಪ್ರದೂಷಕ ವಸ್ತುವನ್ನು ಹೊರಸೂಸುತ್ತದೋ, ಅದಾವುದೂ ಲೆಕ್ಕಕ್ಕಿಲ್ಲ. ಶ್ರೇಷ್ಠ ನ್ಯಾಯಾಲಯಗಳು ಒಂದು ನಿಲುವನ್ನು ತೆಗೆದುಕೊಳ್ಳುತ್ತಿವೆ. ಅವಕ್ಕೆ ಒಂದು ಕಲ್ಪನೆ ಇದೆ, ಆದರೆ ಪ್ರತಿಯೊಬ್ಬರೂ ಕಾನೂನಿನಲ್ಲಿನ ಬಿರುಕುಗಳನ್ನು ಹುಡುಕಿ ತಪ್ಪಿಸಿಕೊಳ್ಳುವ ಬಗ್ಗೆ ಚಿಂತಿಸುತ್ತಾರೆ.

**ಆದಿವಾಸಿಗಳ ಒಕ್ಕಲೆಬ್ಬಿಸುವಿಕೆ ಬೃಹತ್ ಅಣೆಕಟ್ಟೆಗಳು ಉಂಟುಮಾಡಿರುವ ಪರಿಣಾಮಗಳಲ್ಲೊಂದು. ಅಮೆರಿಕದಲ್ಲಿ ಸ್ಥಳೀಯ ಇಂಡಿಯನ್ನರನ್ನೆಲ್ಲಾ ಒಯ್ದು ಮೀಸಲು ಪ್ರದೇಶಗಳಲ್ಲಿ ಕೂಡಿಟ್ಟಂತಹ ಸ್ಥಿತಿ ೨೧೦೦ ರ ಹೊತ್ತಿಗೆ ಭಾರತಕ್ಕೂ ಬರಬಹುದೇ?**

ವಾಸ್ತವದಲ್ಲಿ ನಾಗಾಲ್ಯಾಂಡ್ ಮತ್ತು ಮಿಜೋರಾಮ್‌ಗಳಂತೆ ಅವರು ಎಲ್ಲೆಲ್ಲಿ ಸಂಖ್ಯೆಯ ದೃಷ್ಟಿಯಿಂದ ಹೆಚ್ಚು ಕೇಂದ್ರೀಕೃತಗೊಂಡಿಲ್ಲವೋ ಅಲ್ಲೆಲ್ಲಾ ಅದನ್ನು ಮಾಡುವುದಕ್ಕೆ ನಾವು ಕಾಯುತ್ತಿದ್ದೇವೆ. ಅವರನ್ನು ಮುಗಿಸುವವರಿದ್ದೇವೆ. ಭಾರತದಲ್ಲಿರುವ ಆದಿವಾಸಿಗಳ ಪೈಕಿ ಮೂರನೇ ಒಂದರಷ್ಟು ಜನ ಕೇವಲ ಹೆಸರಿಗಷ್ಟೇ ಆದಿವಾಸಿಗಳು. ಅವರನ್ನು ಚದುರಿಸಲಾಗಿದೆ, ತೃಣೀಕರಿಸಲಾಗಿದೆ, ಬಿಡಿ ವ್ಯಕ್ತಿಗಳನ್ನಾಗಿಸಲಾಗಿದೆ, ಅವರು ದುಡಿಯುವ ವರ್ಗಕ್ಕೆ ಸೇರಿಹೋಗಿದ್ದಾರೆ, ವಾಸ್ತವದಲ್ಲಿ ಆದಿವಾಸಿಗಳನ್ನೆಲ್ಲಾ ದುಡಿಯುವ ವರ್ಗವನ್ನಾಗಿಸುವ ಕಾರ್ಯಕ್ರಮ ಎಡ ಪಕ್ಷಗಳನ್ನೂ ಒಳಗೊಂಡಂತೆ ಪ್ರತಿಯೊಂದು ಪಕ್ಷದ ಪ್ರಣಾಳಿಕೆಯಲ್ಲೂ ಅಂತರ್ಗತವಾಗಿದೆ. ಅವರು ಆದಿವಾಸಿಗಳಿಗೆ ಸಮಾನತೆಯನ್ನು ಬಯಸುತ್ತಾರೆಯೇ ಹೊರತು ಪ್ರತ್ಯೇಕ ಅಸ್ತಿತ್ವವನ್ನಲ್ಲ. ಅವರಿಗೆ ನ್ಯಾಯ ಬೇಕು, ಆದರೆ ಅವರ ನ್ಯಾಯದ ಪರಿಕಲ್ಪನೆ ಆದಿವಾಸಿಗಳ ನ್ಯಾಯದ ಕಲ್ಪನೆಗಿಂತ ಪೂರ್ತಿ ಭಿನ್ನವಾದುದು.

ಇದರ ಒಂದು ಪರಿಣಾಮವೇ ನಕ್ಸಲ್ ಚಳುವಳಿ. ಎರಡನೆಯ ನಕ್ಸಲ್ ಚಳುವಳಿಯು, ಮೊದಲನೆಯದರಂತೆ, ಅದು ನಗರದ ಸಂಗತಿ ಅಲ್ಲ. ಅದು ಆದಿವಾಸಿಗಳ ಬಂಡಾಯ, ಕೆಲವು ನಗರದ ಯುವಕರು ಅವರ ಜೊತೆಗೂಡಿದ್ದಾರೆ ಅಷ್ಟೇ.

**೨೧೦೦ರ ಹೊತ್ತಿಗೆ ಭಾರತವು ಭಾರತವಾಗಿರುವುದಕ್ಕಿಂತ ಹೆಚ್ಚು ಅಮೆರಿಕದಂತಾಗ ಬಹುದೆಂದು ನಿಮಗೆ ಅನಿಸುತ್ತದೆಯೇ?**

೨೧೦೦ರ ಹೊತ್ತಿಗೆ ಭಾರತವು ಅಮೆರಿಕದ ಪಕ್ಕಾ ಕೊಳೆಗೇರಿಗಳಂತೆ, ಬಡವರ ಅಮೆರಿಕದಂತೆ ಆಗಬಹುದು. ಅಷ್ಟಾಗುವುದಕ್ಕೂ ಕೂಡ ನಾವು ನಮ್ಮ ಸ್ವಾತಂತ್ರ್ಯ ಕುಗ್ಗಿಹೋಗುವ ರೂಪದಲ್ಲಿ ಬೆಲೆ ನೀಡಬೇಕಾಗುತ್ತದೆ.

**ಯಾವ ಅರ್ಥದಲ್ಲಿ?**

"ಎಲ್ಲ ಮಹತ್ವಾಕಾಂಕ್ಷೀ ಅಭಿವೃದ್ಧಿಶೀಲ ದೇಶಗಳ ಕಾಣ್ಕೆ ನಗರ–ಕೈಗಾರಿಕಾ ಕಾಣ್ಕೆಯಾಗಿಯೇ ಇರುತ್ತದೆ. ನಮ್ಮ ಹೀರೋ ಲೀ ಕ್ವಾನ್ ಯ್ಯೂ ಕೊನೆಯ ನಿರಂಕುಶಾಧಿಕಾರಿಗಳಲ್ಲೊಬ್ಬರು."

ವಿಶ್ವವಿದ್ಯಾಲಯಗಳಲ್ಲೂ ಕೂಡ ನೀವು ಹೇಳಬೇಕಾದುದನ್ನು ಹೇಳಲು ಕಷ್ಟವನ್ನು ಎದುರಿಸಬೇಕಾದ ಸ್ಥಿತಿ ಇದೆ. ಅಭಿವೃದ್ಧಿ ದೃಷ್ಟಿಯಿಂದ ಪತ್ರಿಕಾ ಅಂಕಣಗಳ ಬರವಣಿಗೆ ಕೂಡ ಭಿನ್ನವಾಗಿರಲು ಸಾಧ್ಯವಾಗುತ್ತಿಲ್ಲ... ಯಾವ ವೈವಿಧ್ಯತೆಗೆ ಭಾರತವು ಹೆಸರುವಾಸಿಯಾಗಿದೆಯೋ ಅಂತಹ ಮೂಲಭೂತ ವೈವಿಧ್ಯತೆಗಳನ್ನು ಅಭಿವ್ಯಕ್ತಿಗೊಳಿಸುವುದು ಕೂಡ ಕಷ್ಟವಾಗುತ್ತಿದೆ. ನಮ್ಮ ಸಂಪ್ರದಾಯಗಳೂ ಕೂಡ ವೈವಿಧ್ಯಮಯವೇ. ಉದಾಹರಣೆಗೆ ತಮಿಳು ನಾಡು ಮತ್ತು ಪಶ್ಚಿಮ ಬಂಗಾಳಗಳಲ್ಲಿ ಲಕ್ಷಾಂತರ ಜನ ರಾವಣನ ಆರಾಧಕರಿದ್ದಾರೆ, ಅವರು ರಾಮನವಮಿಯಂದು ಶೋಕಾಚರಣೆ ಮಾಡುತ್ತಾರೆ. ಅದರಲ್ಲಿ ತಪ್ಪೇನಿದೆ? ಶ್ರೀಲಂಕಾದಲ್ಲಿ ರಾವಣನ ತಮ್ಮ ವಿಭೀಷಣನನ್ನು ಆರಾಧಿಸಲಾಗುತ್ತದೆ. ಹಿಮಾಚಲ ಪ್ರದೇಶದಲ್ಲಿ ಮಹಾಭಾರತದ ಖಳ ದುರ್ಯೋಧನನ ದೇವಾಲಯವಿದೆ. ಅದರಿಂದ ಯಾರಿಗೂ ನೋವಾಗಿಲ್ಲ.

ಈಗ ನಾವು ಪ್ರಾಟಸ್ಟೆಂಟ್ ಕ್ರಿಶ್ಚಿಯನ್ ಧರ್ಮದಂತೆ ಏಕರೂಪ ಪಡೆಯುತ್ತಿದ್ದೇವೆ – ( ನಾವು ಒಂದು ಧರ್ಮವನ್ನು ಹೊಂದೋಣ ಎಂಬುದಕ್ಕೆ ಅದು ಸಮಾನವಾದುದು) ಆದರೆ ನಾವು ಈ ಥರದ ಧರ್ಮವನ್ನು ಹೊಂದಿರಲಿಲ್ಲ. ನಮ್ಮಲ್ಲಿ ಇದ್ದುದು ಧಾರ್ಮಿಕ ಸಂಪ್ರದಾಯಗಳು.

**ನೀವು ಒಮ್ಮೆ "ಹಿಂದುತ್ವ ಎಂಬುದು ಹಿಂದು ಧರ್ಮದ ಮೇಲಿನ ಧಾಳಿ, ಹಿಂದುತ್ವ ಎಂಬುದು ಯಾರ ಹಿಂದು ಧರ್ಮವು ಸವೆದು ಹೋಗಿದೆಯೋ ಅವರ ತತ್ವ, ಹಿಂದುತ್ವದ ವಿಜಯವು ಹಿಂದು ಧರ್ಮದ ಅಂತ್ಯದ ಸೂಚನೆ" ಎಂದು ಬರೆದುದನ್ನು ಇದು ನೆನಪಿಸುತ್ತದೆ. ನಾವು ಆ ದಿಕ್ಕಿನಲ್ಲಿ ನಡೆದಿದ್ದೇವೆಯೇ?**

ಹೌದು ಇಂದು ನಮ್ಮ ಸುತ್ತ ನಾವು ಕಾಣುತ್ತಿರುವ ಹಿಂದುತ್ವವು ೨೦೦೦ ಅಥವಾ ೪೦೦೦ ವರ್ಷಗಳಷ್ಟು ಪುರಾತನವಾದುದಲ್ಲ. ಅದು ಬರೀ ೧೫೦ ವರ್ಷಗಳಷ್ಟು ಹಳೆಯದು. ಬ್ರಿಟಿಷ್ ಆಳ್ವಿಕೆ ಪರಿಚಯಿಸಿದ ಹೊಸ ರಾಜಕೀಯ – ಆರ್ಥಿಕತೆಯ ಅಡಿಯಲ್ಲಿ ನಗರ ಭಾರತದಲ್ಲಿ ಅದು ಹುಟ್ಟಿತು. ಅದು ನಮಗೆ ಎದ್ದು ಕಾಣುವುದು ಹೆಚ್ಚು ಉದಾರವಾಗಿದ್ದ ಕ್ಯಾಥೋಲಿಕ್ ಧರ್ಮವನ್ನು ಪ್ರೊಟೆಸ್ಟಂಟ್ ಧರ್ಮಕ್ಕೆ ಹೋಲಿಸಿದಾಗ,. ನಾನೊಂದು ಪ್ರಾಟೆಸ್ಟೆಂಟ್ ಕುಟುಂಬದಿಂದ ಬಂದಿದ್ದೇನೆ. ಇಂದಿನ ಹಿಂದುಧರ್ಮವು ಅದರಂತಹದೇ ಎಂಬುದು ನನಗೆ ತಿಳಿದಿದೆ.

ಪ್ರಥಮ ತಲೆಮಾರಿನ ಆರ್ ಎಸ್ ಎಸ್ ಪ್ರಚಾರಕರು – ಬಿ.ಎಸ್. ಮೂಂಜೆ, (ಹಿಂದು ಮಹಾಸಭಾ ನಾಯಕರು) ಹೆಡೆಗೇವಾರ್, (ಆರ್ ಎಸ್ ಎಸ್ ಸಂಸ್ಥಾಪಕರು



ಒಮ್ಮೆ ನೀವು ರಾಷ್ಟ್ರೀಯುತೆಯುನ್ನು ಅನುಮೋದಿಸಿದರೆ (ಒಂದು ದೇಶ, ಒಂದು ಧರ್ಮ, ಒಂದು ಭಾಷೆಯ ಮಾದರಿ) ನೀವು ಅದರ ಬಗ್ಗೆ ( ಧರ್ಮದ ಬಗ್ಗೆ ) ಚರ್ಚಿಸಬೇಕಾಗಿಯೂ ಇಲ್ಲ. ನೀವು ರಾಷ್ಟ್ರೀಯತೆಯ ಬಗ್ಗೆ ಏನನ್ನೂ ಓದಬೇಕಾಗಿಲ್ಲ ಏಕೆಂದರೆ ಎಲ್ಲ ರಾಷ್ಟ್ರೀಯತೆಗಳೂ ಒಂದೇ ರೀತಿ ಇರುತ್ತವೆ, ಎಂದು ಹೇಳಿದ್ದು (ಅರ್ನೆಸ್ಟ್ ) ಗೆಲ್ನರ್ ಎಂದು ಭಾವಿಸುತ್ತೇನೆ. ಸಾವರ್ಕರ್ ಅದನ್ನು ಗುರುತಿಸಿದರು. ಅವರಿಗೆ ಯಾವುದರಲ್ಲೂ (ಧರ್ಮದಲ್ಲೂ ) ನಂಬಿಕೆ ಇರಲಿಲ್ಲ. ಅವರು ತಮ್ಮ ಹೆಂಡತಿ ಮೃತಪಟ್ಟಾಗ ಅವರಿಗೆ ಹಿಂದೂ ಸಂಸ್ಕಾರ ನೀಡಲು ಒಪ್ಪಲಿಲ್ಲ, ಅವರು ಹಸುವಿಗೆ ಸಂಬಂಧಿಸಿದಂತೆ ಪವಿತ್ರವಾದುದೇನೂ ಇಲ್ಲ ಎನ್ನುತ್ತಿದ್ದರು. ಗೋಲವಲ್ಕರ್(ಆರ್ ಎಸ್ ಎಸ್ ನ ಎರಡನೇ ಸರಘಚಾಲಕ) ಅವರ ಮತಾಚರಣೆಗಳನ್ನು ಕುರಿತ ಆಸ್ಥೆಯನ್ನು ಹಾಸ್ಯ ಮಾಡುತ್ತಿದ್ದರು



ಮಹತ್ವದ ತಾತ್ವಿಕ ನಿಲುವುಗಳು ಸುಮ್ಮನೆ ಕಣ್ಮರೆಯಾಗುವುದಿಲ್ಲ. ಅವು ತಮ್ಮಷ್ಟಕ್ಕೆ ಕೆಲವು ಪರಿಸ್ಥಿತಿಗಳಲ್ಲಿ ಹೊರಹೊಮ್ಮುತ್ತವೆ. ದ್ವಿತೀಯ ಮಹಾಯುದ್ಧೋತ್ತರ ಪ್ರಪಂಚದ ಹೀರೋಗಳು ಮಾರ್ಟಿನ್ ಲೂಥರ್ ಕಿಂಗ್, ನೆಲ್ಸನ್ ಮಂಡೇಲಾ, ಆಂಗ್ ಸಾನ್ ಸೂಕಿ, ದಲೈಲಾಮಾ, ಎಂಬುದನ್ನು ಮರೆಯಬೇಡಿ– ಇವರೆಲ್ಲರೂ ಗಾಂಧಿಯವರ ಬಿಂಬಕ್ಕೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಬಹಳ ಹತ್ತಿರವಿರುವವರು. ಅವರು ತಮ್ಮ ನಿಲುವನ್ನು ತಳೆಯಲು ಗಾಂಧಿಯವರನ್ನು ಓದಿರಲೇಬೇಕೆಂಬ ಅಗತ್ಯವಿಲ್ಲ.ಪೋಲೆಂಡ್ ಜನ "ನಮ್ಮ ಗಾಂಧಿ" ಎಂದು ಕರೆದ ಲೆಕ್ ವಲೇಸಾ ಅವರಾದರೂ ಅಷ್ಟೆ. ನೀವು ಗಾಂಧಿಯ ಎಳೆಯನ್ನು ತೊಡೆದುಹಾಕಲಾರಿರಿ ಅಥವಾ ನಾಶಮಾಡಲಾರಿರಿ, ಅದೊಂದು ಅಲ್ಪಸಂಖ್ಯಾಕ ಎಳೆಯಾಗಿ ಮುಂದುವರಿಯಬಹುದು.

) ಥರದ ಜನ – ರಾಮಕೃಷ್ಣ ಮಿಷನ್‌ನಿಂದ ಸ್ಫೂರ್ತಿ ಪಡೆದಿದ್ದರು. ( ಅದು ಕ್ರಿಶ್ಚಿಯಾನಿಟಿಯಿಂದ ಪ್ರೇರೇಪಣೆಗೊಂಡದ್ದು)ಸ್ವತಃ ಸ್ವಾಮಿ ವಿವೇಕಾನಂದರು (ರಾಮಕೃಷ್ಣ ಮಿಷನ್‌ನ ಸಂಸ್ಥಾಪಕರು) ಬಹಳ ಭಿನ್ನವಾದ ವ್ಯಕ್ತಿಯಾಗಿದ್ದರು. ಅವರು ಇಸ್ಲಾಂ ಮತ್ತು ಮುಸ್ಲಿಮರನ್ನು ಖಳರಂತೆ ಕಾಣುತ್ತಿರಲಿಲ್ಲ.

**ಈ ಹೊಸ ಏಕರೂಪಿಯಾದ ಹಿಂದುತ್ವದ ಮೂಲ ಲಕ್ಷಣಗಳೇನು?**

ನಾವಿಂದು ಕಾಣುತ್ತಿರುವ ಹಿಂದು ಧರ್ಮವು ಬರೀ ೧೫೦ ವರ್ಷಗಳಷ್ಟು ಹಿಂದಿನದು. ಬ್ರಿಟಿಷ್ ಆಳ್ವಿಕೆಯ ಕಾಲದ ನಗರ ಭಾರತದಲ್ಲಿ ಹುಟ್ಟಿದ್ದು. ಅದರ ಮಾದರಿ ಪ್ರಾಟೆಸ್ಟೆಂಟ್ ಕ್ರಿಶ್ಚಿಯಾನಿಟಿ.ಯಾಗಿತ್ತು..

ಒಮ್ಮೆ ನೀವು ರಾಷ್ಟ್ರೀಯತೆಯನ್ನು ಅನುಮೋದಿಸಿದರೆ (ಒಂದು ದೇಶ, ಒಂದು ಧರ್ಮ, ಒಂದು ಭಾಷೆಯ ಮಾದರಿ) ನೀವು ಅದರ ಬಗ್ಗೆ ( ಧರ್ಮದ ಬಗ್ಗೆ ) ಚರ್ಚಿಸಬೇಕಾಗಿಯೂ ಇಲ್ಲ. ನೀವು ರಾಷ್ಟ್ರೀಯತೆಯ ಬಗ್ಗೆ ಏನನ್ನೂ ಓದಬೇಕಾಗಿಲ್ಲ ಏಕೆಂದರೆ ಎಲ್ಲ ರಾಷ್ಟ್ರೀಯತೆಗಳೂ ಒಂದೇ ರೀತಿ ಇರುತ್ತವೆ, ಎಂದು ಹೇಳಿದ್ದು (ಅರ್ನೆಸ್ಟ್ ) ಗೆಲ್ನರ್ ಎಂದು ಭಾವಿಸುತ್ತೇನೆ. ಸಾವರ್ಕರ್ ಅದನ್ನು ಗುರುತಿಸಿದರು. ಅವರಿಗೆ ಯಾವುದರಲ್ಲೂ (ಧರ್ಮದಲ್ಲೂ ) ನಂಬಿಕೆ ಇರಲಿಲ್ಲ. ಅವರು ತಮ್ಮ ಹೆಂಡತಿ ಮೃತಪಟ್ಟಾಗ ಅವರಿಗೆ ಹಿಂದೂ ಸಂಸ್ಕಾರ ನೀಡಲು ಒಪ್ಪಲಿಲ್ಲ, ಅವರು ಹಸುವಿಗೆ ಸಂಬಂಧಿಸಿದಂತೆ ಪವಿತ್ರವಾದುದೇನೂ ಇಲ್ಲ ಎನ್ನುತ್ತಿದ್ದರು. ಗೋಲವಲ್ಕರ್(ಆರ್ ಎಸ್ ಎಸ್ ನ ಎರಡನೇ ಸರಸಂಘಚಾಲಕ) ಅವರ ಮತಾಚರಣೆಯನ್ನು ಕುರಿತ ಆಸ್ಥೆಯನ್ನು ಹಾಸ್ಯ ಮಾಡುತ್ತಿದ್ದರು. ಈಗ ಉದಯಿಸುತ್ತಿರುವ ಭಾರತದ ನಿಜವಾದ ಪಿತ ಸಾವರ್ಕರ್, ಈಗ ಗಾಂಧಿ ಒಬ್ಬ ಮಲತಂದೆ.

**ನಿಮ್ಮ ಪ್ರಬಂಧಕ್ಕೆ ಹಿಂದಿರುಗುವುದಾದರೆ, ಹಿಂದು ಧರ್ಮವು ಹಿಂದುತ್ವದೊಂದಿಗೆ ಹೋರಾಡುವುದೆಂದು ನಿಮಗನ್ನಿಸುತ್ತದೆಯೇ?**

ಹೌದು, ಹಿಂದು ಧರ್ಮದೊಳಗೆ ಒಂದು ಸುಪ್ತವಾದ ಶಕ್ತಿ ಸದಾ ಈ ಬಗೆಯ ವಿಶಿಷ್ಟ ವಿಭಜಕ ಪ್ರವೃತ್ತಿಯ ವಿರುದ್ಧ ಬಂಡಾಯವೇಳುತ್ತಲೇ ಇರುತ್ತದೆ. ಸಂಸ್ಕೃತಿಯು ಯಾವಾಗಲೂ ಬಗ್ಗುವುದಿಲ್ಲ. ಅದು ತನ್ನ ಮೇಲೆ ಹೇರಲುದ್ದೇಶಿಸಿದ್ದನ್ನೆಲ್ಲ ಒಳಸೆಳೆದುಕೊಂಡು ಅರಗಿಸಿಕೊಳ್ಳುತ್ತದೆ. ಒಂದೇ ಒಂದು ಮಾತನ್ನೂ ಉಚ್ಚರಿಸದೆ ನಾಗರಿಕತೆಯು ಒಂದು ರಾಜ್ಯವ್ಯವಸ್ಥೆಯನ್ನು ನಿರ್ನಾಮ ಮಾಡಿಬಿಡಬಹುದು. ಇಂಡಿಕ್ ನಾಗರಿಕತೆಯು ಇಂಡಿಯನ್ ರಾಜ್ಯವ್ಯವಸ್ಥೆಗಿಂತ ಭಿನ್ನವಾದುದು, ರಾಜ್ಯವ್ಯವಸ್ಥೆಯ ಕಲ್ಪನೆ ಬರೀ ೩೦೦ ವರ್ಷ ಹಳೆಯದಾದ ಒಂದು ಐರೋಪ್ಯ ಎಡಬಿಡಂಗಿ ಸೃಷ್ಟಿ..

ಭಾರತವನ್ನು ಒಂದು ಏಕರೂಪಿ ರಾಜ್ಯವ್ಯವಸ್ಥೆಯನ್ನಾಗಿ ಸಜ್ಜುಗೊಳಿಸಲಾಗದು ಎಂಬುದು ನನ್ನ ನಂಬಿಕೆ. ಭಾರತದಲ್ಲಿ ರಾಷ್ಟ್ರ ಎಂಬುದು ಇಲ್ಲ ಎಂದು ಟ್ಯಾಗೋರರು ಹೇಳುತ್ತಿದ್ದರು. ಅದಕ್ಕಾಗಿ ಅವರು ಇಂಗ್ಲಿಷ್‌ನ "ನೇಷನ್" ಎಂಬ ಪದವನ್ನು ಬಂಗಾಳಿ ಲಿಪಿಯಲ್ಲಿ ಬರೆಯುತ್ತಿದ್ದರು. ಆದರೆ ಅವರಿಗೆ ದೇಶಭಕ್ತಿಯನ್ನು ನಿರ್ವಚಿಸಲು ೧೨ ರಿಂದ ೧೫ ಬಂಗಾಳಿ ಪದಗಳು ದೊರೆಯುತ್ತಿದ್ದವು. ಭಾರತೀಯರು ದೇಶ ಭಕ್ತರು. ಅದರೆ ದೇಶಭಕ್ತಿಯನ್ನು ರಾಷ್ಟ್ರೀಯತೆಯೆಂದು ಅಪಾರ್ಥ ಮಾಡಿಕೊಳ್ಳುತ್ತಿದ್ದೇವೆ.

ರಾಷ್ಟ್ರ ಎಂಬುದು ವ್ಯಕ್ತಿಗಳನ್ನು ಪ್ರಭುತ್ವಕ್ಕೆ ಮುಖಾಮುಖಿ ಮಾಡುವಂತೆ ಜನರನ್ನು ಏಕರೂಪಗೊಳಿಸುವ ಒಂದು ನಿರ್ಬಂಧ. ಅಲ್ಲಿ ಸಂಪರ್ಕ ಇರುವುದಿಲ್ಲ– ಸಮುದಾಯ ಇರುವುದಿಲ್ಲ, ಧರ್ಮ ಇರುವುದಿಲ್ಲ, ಪಂಗಡ ಇರುವುದಿಲ್ಲ, ಜಾತಿ ಇರುವುದಿಲ್ಲ, ಕಾರ್ಮಿಕ ಸಂಘಟನೆ, ಮಧ್ಯವರ್ತಿ ರಚನೆಗಳಿರುವುದಿಲ್ಲ. ಆದರ್ಶ ರಾಷ್ಟ್ರ–ರಾಜ್ಯದಲ್ಲಿ ಕೇವಲ ವ್ಯಕ್ತಿ ಇರುತ್ತಾನೆ ಮತ್ತು ಪ್ರಭುತ್ವ ಮಾತ್ರ ಇರುತ್ತದೆ. ಒಂದು ಹಂತದ ನಂತರ ಭಾರತೀಯರು ಇದನ್ನು ಒಪ್ಪುತ್ತಾರೆಂದು ನನಗನಿಸುವುದಿಲ್ಲ.

**ಹಾಗಾದರೆ ಈ ರಾಷ್ಟ್ರ–ರಾಜ್ಯದ ಕಲ್ಪನೆಗೆ ಒಂದು ಬದಲಾವಣೆ ಹಿಂದು ಧರ್ಮದೊಳಗಿನಿಂದಲೇ ಹುಟ್ಟುತ್ತದೆಂದು ನಿಮಗೆ ಅನಿಸುತ್ತದೆಯೆ?**

ಹೌದು.

**ಜಾತಿಯು ಹಿಂದು ಧರ್ಮದ ಯುದ್ಧವನ್ನು ನಡೆಸಬಹುದೆಂದು ಯೋಚಿಸುತ್ತೀರಾ?**

ಜಾತಿಯು ಎಷ್ಟು ಕಳಂಕಿತಗೊಂಡಿದೆ ಮತ್ತು ಎಷ್ಟು ರಾಜಕೀಯಗೊಂಡಿದೆ ಎಂದರೆ, ಜಾತಿಯು ಹೇಗೆ ರಾಜಕಾರಣವನ್ನು ಪ್ರಭಾವಿಸುತ್ತದೆ ಎಂದು ನೀವು ಮಾತನಾಡ ಬಾರದು, ರಾಜಕಾರಣವು ಹೇಗೆ ಜಾತಿಯನ್ನು ಪ್ರಭಾವಿಸುತ್ತದೆ ಎಂದು ಮಾತನಾಡಬೇಕು. ಆದರೆ ಜಾತಿಯು ಹಿಂದುತ್ವವನ್ನು ಪ್ರತಿರೋಧಿಸುತ್ತದೆ. ಆದ್ದರಿಂದಲೇ ಹಿಂದುತ್ವವಾಲಾಗಳು ಜಾತಿಯನ್ನೂ ವಿರೋಧಿಸುತ್ತಾರೆ. ಆದರೆ ಒಂದು ವಿಶಾಲವಾದ ದೃಷ್ಟಿ, ಒಂದು ಪರ್ಯಾಯ ದೃಷ್ಟಿ, ಪಂಥಗಳ ಮತ್ತು ವಿವಿಧ ನಂಬಿಕೆಗಳ ವ್ಯವಸ್ಥೆಯ ಮೂಲಕ ಬರುತ್ತದೆ.

**ಅದರ ಲಕ್ಷಣಗಳು ನಿಮಗೆ ಕಾಣುತ್ತಿವೆಯೇ?**

ನಂಬಿಕೆಯುಳ್ಳ ಪ್ರತಿಯೊಬ್ಬ ಭಾರತೀಯನೂ ಅದರ ಲಕ್ಷಣವೇ. ಹಿಂದುತ್ವವು ಹಿಂದು ಧರ್ಮದ ಕೆಲವು ಮೂಲಭೂತ ಕಟ್ಟಳೆಗಳನ್ನು ಮೀರುತ್ತದೆ. ಉದಾಹರಣೆಗೆ ಪ್ರತಿಯೊಬ್ಬ ವ್ಯಕ್ತಿಯೂ ಖಾಸಗಿ ದೇವ ದೇವತೆಗಳನ್ನು ಹೊಂದಿರುತ್ತಾನೆ, ಆತನ ಕುಟುಂಬವೂ ಕೂಡ ತನ್ನದೇ ಆದ ದೇವ ದೇವತೆಗಳನ್ನು ಹೊಂದಿರುತ್ತದೆ, ಆತನ ಪಂಗಡ ಕೂಡ ತನ್ನದೆ ಆದ ದೇವ ದೇವತೆಗಳನ್ನು ಹೊಂದಿರುತ್ತದೆ.

ಇದರ ಜೊತೆ ಎಲ್ಲರೂ ಅವರದ್ದೇ ಆದ ವೈಯಕ್ತಿಕ ಆದ್ಯತೆಗಳನ್ನೂ ಹೊಂದಿರುತ್ತಾರೆ– ಅವರು ಯಾವುದೋ ಕೆಲವು ದೇವ ದೇವತೆಗಳನ್ನು ಪೂಜಿಸದೇ ಇರಬಹುದು ಆದರೆ ಈ ದೇವ ದೇವತೆಗಳನ್ನು ಎದುರು ಹಾಕಿಕೊಳ್ಳಬಯಸುವುದಿಲ್ಲ. ಆ ದೇವರುಗಳೊಡನೆ ಗುರುತಿಸಿಕೊಳ್ಳಬಯಸುತ್ತಾರೋ ಇಲ್ಲವೋ, ಅಥವಾ ಆ ದೇವರುಗಳನ್ನು ನಂಬುತ್ತಾರೋ ಅಥವಾ ಇಲ್ಲವೋ ಎಂಬುದು ಅಪ್ರಸ್ತುತ. ಉದಾಹರಣೆಗೆ ಹಿಂದುಗಳು ದರ್ಗಾಗಳಿಗೆ, ಸುವರ್ಣದೇಗುಲಕ್ಕೆ ಹೋಗ ಬಯಸುತ್ತಾರೆ. ಹಿಂದುತ್ವವು ಇದನ್ನು ತಡೆಯಲಾರದು. ಇದು ಪೂರ್ಣವಾಗಿ ಭಿನ್ನವಾದ ಆಟ.

**ಗಾಂಧಿ ೨೦೫೦ ಅಥವಾ ೨೧೦೦ರಲ್ಲಿ ಭಾರತಕ್ಕೆ ಬಂದರೆ..**

ಒಂದು ರಾಷ್ಟ್ರ–ರಾಜ್ಯ ವ್ಯವಸ್ಥೆಯಲ್ಲಿ ವ್ಯಕ್ತಿ ಮತ್ತು ಪ್ರಭುತ್ವ ಗಳ ಹೊರತಾಗಿ ಇನ್ನೇನೂ ಇರಲಾರದು. ಏಕರೀತಿಯ ರಾಷ್ಟ್ರವಾಗಿರುವುದು ಭಾರತಕ್ಕೆ ಸಾಧ್ಯವಿಲ್ಲ.

ಮಹತ್ವದ ತಾತ್ವಿಕ ನಿಲುವುಗಳು ಸುಮ್ಮನೆ ಕಣ್ಮರೆಯಾಗುವುದಿಲ್ಲ. ಅವು ತಮ್ಮಷ್ಟಕ್ಕೆ ಕೆಲವು ಪರಿಸ್ಥಿತಿಗಳಲ್ಲಿ ಹೊರಹೊಮ್ಮುತ್ತವೆ. ದ್ವಿತೀಯ ಮಹಾಯುದ್ಧೋತ್ತರ ಪ್ರಪಂಚದ ಹೀರೋಗಳು ಮಾರ್ಟಿನ್ ಲೂಥರ್ ಕಿಂಗ್, ನೆಲ್ಸನ್ ಮಂಡೇಲಾ, ಆಂಗ್ ಸಾನ್ ಸೂಕಿ, ದಲೈಲಾಮಾ, ಎಂಬುದನ್ನು ಮರೆಯಬೇಡಿ– ಇವರೆಲ್ಲರೂ ಗಾಂಧಿಯವರ ಬಿಂಬಕ್ಕೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಬಹಳ ಹತ್ತಿರವಿರುವವರು. ಅವರು ತಮ್ಮ ನಿಲುವನ್ನು ತಳೆಯಲು ಗಾಂಧಿಯವರನ್ನು ಓದಿರಲೇಬೇಕೆಂಬ ಅಗತ್ಯವಿಲ್ಲ.ಪೋಲೆಂಡ್ ಜನ "ನಮ್ಮ ಗಾಂಧಿ" ಎಂದು ಕರೆದ

ಲೆಕ್ ವಲೇಸಾ ಅವರಾದರೂ ಅಷ್ಟೆ. ನೀವು ಗಾಂಧಿಯ ಎಳೆಯನ್ನು ತೊಡೆದುಹಾಕಲಾರಿರಿ ಅಥವಾ ನಾಶಮಾಡಲಾರಿರಿ, ಅದೊಂದು ಅಲ್ಪಸಂಖ್ಯಾಕ ಎಳೆಯಾಗಿ ಮುಂದುವರಿಯಬಹುದು. ಬಹುಶಃ ಒಂದು ಮಹಾವಿನಾವಿಪತ್ತು ಸಂಭವಿಸಿ...

**ಗಾಂಧಿಯನ್ನೇ?**

ಗಾಂಧಿಯನ್ನಲ್ಲ, ಅವರ ನೂರಾರು ವಿಭಿನ್ನರೂಪಗಳನ್ನು. ಆಗ ಮಾತ್ರ ಅದೊಂದು ಜನತಾ ಚಳುವಳಿಯಾಗಬಹುದು. ನೀವು ೨೧೦೦ರವರೆಗೆ ಕಾಯಬೇಕಾಗಿಲ್ಲ. ಅದು ಇನ್ನೂ ಬೇಗ ಬರಬಹುದು, ಏಕೆಂದರೆ ನಾವು ಹವಾಮಾನ ಬದಲಾವಣೆಯ ಕೊನೆಯ ಹಂತ ತಲುಪಿದ್ದೇವೆ. ಮನುಷ್ಯನ ದುರಾಸೆ ಮತ್ತು ಬಳಕೆಗೆ ಯಾವುದಾದರೂ ಒಂದು ರೀತಿಯ ಮಿತಿ ಇರಲೇಬೇಕು. ಈಗ ಲಭ್ಯವಿರುವ ತುಟಿರಂಗಿನ ವಿವಿಧ ಛಾಯೆಗಳನ್ನು ಲೆಕ್ಕ ಮಾಡಲು ಒಮ್ಮೆ ಪ್ರಯತ್ನಿಸಿದೆ, ೧೨೦೦ರ ವರೆಗೆ ಎಣಿಸಿದ ನಂತರ ನಾನು ಎಣಿಕೆಯನ್ನು ನಿಲ್ಲಿಸಿದೆ, ಅದನ್ನು ನಿರ್ವಹಿಸುವುದು ನನಗೆ ಸಾಧ್ಯವಾಗಲಿಲ್ಲ, ನಮ್ಮ ಕಣ್ಣ ಅಕ್ಷಿಪಟಲವು ೧೨೦೦ ಛಾಯೆಗಳನ್ನು ಗುರುತಿಸ ಬಹುದು ಎಂಬುದರ ಬಗ್ಗೆ ನನಗೆ ಅನುಮಾನವಿದೆ, ಇಷ್ಟಾದರೂ ನಾವು ಇನ್ನೂ ಹೆಚ್ಚು ಛಾಯೆಗಳನ್ನು ತಯಾರಿಸುತ್ತಿದ್ದೇವೆ.

ಗ್ರಾಮಜೀವನ ಶೈಲಿಗೆ ಹಿಂದಿರುಗುವುದು ಸಾಧ್ಯವೆಂದು ನನಗೆ ವೈಯಕ್ತಿಕವಾಗಿ ಅನಿಸುವುದಿಲ್ಲ. ಆದರೆ ನಗರ ಕೈಗಾರಿಕಾ ದೃಷ್ಟಿಯ ಮಿತಿಯನ್ನಂತೂ ನಾವು ಮೀರಿದ್ದೇವೆ. ಅದು ಬದಲಾಯಿಸಲಾಗದ್ದು. ಅಷ್ಟು ಕೆಟ್ಟದ್ದಂತೂ ಹೌದು. ನಿರ್ಣಾಯಕ ಘಟ್ಟ ಬಂದಾಗ, ನೀವು ಬಹಳ ಮುಂದಿನ ಭವಿಷ್ಯದ ಬಗ್ಗೆ ಯೋಚಿಸದೇ ಹೋದರೂ ಕನಿಷ್ಠ ನಿಮ್ಮ ಮಕ್ಕಳು ಮೊಮ್ಮಕ್ಕಳ ಬಗೆಗಾದರೂ ಯೋಚಿಸಲೇ ಬೇಕು. ಈ ಭೂಮಿಯ ಸಂಪನ್ಮೂಲಗಳನ್ನು ಬಳಸುವ ವಿಚಾರದಲ್ಲಿ ಮಿತಿಗಳನ್ನು ಹೇರಲೇಬೇಕಾಗುತ್ತದೆ.

**೨೧೦೦ ರಲ್ಲಿ ಅಂಬೇಡ್ಕರ್ ಹೇಗಿದ್ದಾರು.?**

ದುರದೃಷ್ಟವಶಾತ್ ಅಂಬೇಡ್ಕರ್ ಅವರು ಗಾಂಧೀಜಿಯವರ ಮೊದಲಿನ ದಿನಗಳಿಗೆ ಹೋಲಿಕೆಯಾಗುವ ಧರ್ಮವನ್ನು ಆಯ್ಕೆ ಮಾಡಿಕೊಂಡರೂ, ಬಹಳ ಆಧುನಿಕ ಮನುಷ್ಯರಾಗಿದ್ದ ಅವರು ಖಂಡಿತವಾಗಿಯೂ ಯಾವುದಾದರೂ ನಗರ – ಕೈಗಾರಿಕಾ ಮಾದರಿಯ ಆವೃತ್ತಿಗಳಲ್ಲಿ ಒಂದನ್ನು ಬಯಸುತ್ತಿದ್ದರು. ಅವರು ಖಂಡಿತ ಅದರಾಚೆಗೆ ನೋಡುತ್ತಿರಲಿಲ್ಲ.

**ನೀವು ಸಂತೋಷವನ್ನು ಕುರಿತು ಪ್ರಬಂಧ ಬರೆದಿದ್ದೀರಿ, ೨೦೫೦ರಲ್ಲಿ ಭಾರತೀಯರು ಸಂತೋಷವಾಗಿರಬಲ್ಲರೆ?**

ಅವರು ಅಸಂತೋಷದಿಂದಿರಬಾರದು ಎಂದು ಅವರನ್ನು ಆಗ್ರಹಿಸಬಹುದಾಗಿದೆ..

**ಹಾಗಾದರೆ ೨೧೦೦ರಲ್ಲಿ ಭಾರತೀಯರು ಎಷ್ಟು ಸಂತೋಷದಿಂದಿರಬಹುದು..?**

ಸದ್ಯಕ್ಕೆ ಭಾರತೀಯರು ಬಹುಮಟ್ಟಿಗೆ ಸಂತೋಷದಿಂದಿರುವವರು. ಬಡದೇಶಗಳು ಸಾಮಾನ್ಯವಾಗಿ ಹಾಗಿರುತ್ತವೆ. ಸಂತೋಷದಿಂದಿರುವವರ ದೇಶಗಳ ಪಟ್ಟಿಯಲ್ಲಿ ಬಾಂಗ್ಲಾ ದೇಶೀಯರೆ ಸಾಕಷ್ಟು ಮೇಲಿದ್ದಾರೆ, ಹಾಗೆಯೇ ನೈಜೀರಿಯಾ ಕೂಡ ಪಟ್ಟಿಯಲ್ಲಿ ಸಾಕಷ್ಟು ಮೇಲಿದೆ. ಭಾರತೀಯರೂ ಕೂಡ ಪಟ್ಟಿಯಲ್ಲಿ ಮೇಲೆಯೇ ಇದ್ದಾರೆ. ಸದ್ಯದ ಚಿತ್ರ ಸುಲಭವಾಗಿ ಬದಲಾಗುವುದಿಲ್ಲ. ಆದ್ದರಿಂದ ಸಂತೋಷವಾಗಿರಬೇಕೆಂದು ಸಾರ್ವಜನಿಕ ಒತ್ತಾಯ ಬರಬಹುದು. ಹಾಗಾಗಿ ಅಸಂತೋಷದಿಂದಿದ್ದರೆ ನೀವು ದೇಶದ್ರೋಹಿಯಾಗುತ್ತೀರಿ. ಸೋವಿಯೆತ್ ಯೂನಿಯನ್ನಿನಲ್ಲಿದ್ದ ಹಾಗೆ, ನೀವು ಅಸಂತೋಷದಿಂದಿದ್ದರೆ ನೀವು ವರ್ಗಶತ್ರು, ಅಲ್ಲಿ ಅಸಂತೋಷದಿಂದರುವವರನ್ನು ಮನೋವೈದ್ಯರಲ್ಲಿಗೆ ಕಳುಹಿಸಲಾಗುತ್ತಿತ್ತು.

**ನಾವು ಆ ದಿಕ್ಕಿನಲ್ಲಿ ಹೊರಟಿದ್ದೇವೆಯೇ?**

ಭಾರತವನ್ನು ಆ ದಿಕ್ಕಿಗೆ ನೂಕಲಾಗುತ್ತಿದೆ ಎಂಬುದು ನನ್ನ ಆತಂಕ.



**(ಸಂದರ್ಶಕ ಅಜಾಝ್ ಆಶ್ರಫ್ ದೆಹಲಿಯಲ್ಲಿನ ಹಿರಿಯ ಪತ್ರಕರ್ತರಲ್ಲೊಬ್ಬರಾಗಿದ್ದು, ಕಾದಂಬರಿಕಾರರೆಂದೂ ಗುರುತಿಸಲ್ಪಟ್ಟಿದ್ದಾರೆ. ಈ ಸಂದರ್ಶನ ೨೦೧೮ರ ಅಕ್ಟೋಬರ್ ೨೮ರ ಔಟ್‌ಲುಕ್ ಸಂಚಿಕೆಯಲ್ಲಿ ಪ್ರಕಟವಾಗಿದ್ದು, ಇದು ಈ ಆಗಸ್ಟ್ ೫ರಂದು ಪ್ರಧಾನಿ ಮೋದಿಯವರು ಭಾಗವಹಿಸಿದ್ದ ರಾಮಜನ್ಮಭೂಮಿ ಭೂಮಿ ಪೂಜೆಯ ಸಂದರ್ಭದಲ್ಲಿ ಈ ಪತ್ರಿಕೆಯ ಬೆಳ್ಳಿ ಹಬ್ಬದ ಸ್ಮೃತಿ ಸಂಗ್ರಹದಲ್ಲಿ ಕಾಣಿಸಿಕೊಂಡಿದ್ದು ಅದನ್ನಿಲ್ಲಿ ನಾವು ಇಂದಿಗೆ ಅರ್ಥಪೂರ್ಣವೆಂದು ಅನುವಾದಿಸಿ ಪ್ರಕಟಿಸುತ್ತಿದ್ದೇವೆ–ಸಂ.)**

(ಅನುವಾದ ಎಂ ರಾಜು)

**೫ನೇ ಪುಟದಿಂದ)**

ಇಡಬಾರದಿತ್ತು. ಇದಲ್ಲದೆ ವಂದನಾ ಶಿವಾ ವಿಜ್ಞಾನದ ಬಗ್ಗೆ, ಪರಿಸರವಾದದ ಆಧ್ಯಾತ್ಮಿಕತೆಯ ಬಗ್ಗೆ, "ಭಾರತೀಯ" ಸಂಪ್ರದಾಯವನ್ನು ಜಾತಿ, ವರ್ಗ ಇವುಗಳನ್ನು ಚರ್ಚಿಸದೇ ಪರಿಭಾವಿಸುವುದರ ಬಗ್ಗೆ ಅತ್ಯಂತ ಪ್ರಖರವಾದ ಚರ್ಚೆಗಳು ನಡೆದಿವೆ. ಈ ಚರ್ಚೆಗಳಿಗೆ ಸಮಕಾಲೀನ ರಾಜಕೀಯ ಹಾಗೂ ಸಾಂಸ್ಕೃತಿಕ ಪ್ರಸ್ತುತತೆ ಇದೆ. ಇವು ಕನ್ನಡದಲ್ಲಿ ಚರ್ಚೆಯಾಗಲೇಬೇಕು. ಅವಕಾಶ ಸಿಕ್ಕಾಗ ಸುದೀರ್ಘವಾದ ಲೇಖನವೊಂದನ್ನು ಬರೆಯುತ್ತೇನೆ. ಆದರೆ ಗಾಸಿಪ್ ಮಟ್ಟದ ಆರೋಪಗಳನ್ನು ವಂದನಾ ಶಿವಾ ಅವರು ಎತ್ತುವ ಮೂಲಭೂತ ಪ್ರಶ್ನೆಗಳನ್ನು ಬದಿಗಿಡಲು ಬಳಸುವ ಪ್ರಯತ್ನಗಳನ್ನು ನಾನು ಒಪ್ಪುವುದಿಲ್ಲ. ಆ ಪ್ರಯತ್ನಗಳನ್ನು ಬೆಂಬಲಿಸುವುದಕ್ಕಾಗಿ ಅಂತಾರಾಷ್ಟ್ರೀಯ ಕಂಪನಿಗಳು ಅನೇಕ ಬಿಲಿಯನ್ ಡಾಲರ್‌ಗಳನ್ನು ಹೂಡಿದ್ದರಿಂದ ಎಚ್ಚರವಾಗಿರಲೇಬೇಕು.

**–ರಾಜೇಂದ್ರ ಚೆನ್ನಿ**, ಶಿವಮೊಗ್ಗ

ನನ್ನ ಲೇಖನಕ್ಕೆ ಬಂದ ದೀರ್ಘ ಪ್ರತಿಕ್ರಿಯೆಯನ್ನು ನೋಡಿದೆ. ಈ ಪ್ರತಿಕ್ರಿಯೆಯಲ್ಲಿಯೇ ಪರಸ್ಪರ ವಿರುದ್ಧವಾದ ಅನೇಕ ಮಾತುಗಳಿವೆ. ತಮ್ಮ ತಮ್ಮ ಅಭಿಪ್ರಾಯಗಳನ್ನು ಹರಿಯಬಿಡುವುದೇ ಉದ್ದೇಶವಾದರೆ ನಾನು ಏನೂ ಮಾಡುವಂತಿಲ್ಲ. . ನಿಜವಾದ ಜಿಜ್ಞಾಸೆಯು ಒಂದು ಮುಖ್ಯ ವಿಚಾರದ ಸುತ್ತ ಸುಳಿಯುತ್ತದೆ. ಅದೆಂದರೆ ನಾವೆಂದರೆ ನಮ್ಮ ಎಚ್ಚರದ ಮನಸ್ಸು ಮಾತ್ರವಲ್ಲ– ನಮ್ಮ ಸುಪ್ತ ಮನಸ್ಸೂ ಹೌದು. ಇವೆರಡರ ನಡುವಣ ಸಂಬಂಧವನ್ನು ಆಳವಾಗಿ ಬಗೆಯುವುದರಿಂದಲೇ ಎಲ್ಲ ಘನವಾದದ್ದೂ ಪ್ರಕಟವಾಗುವುದು. ಬರಿಯ ನಿರಾಕರಣೆಯಿಂದಲೂ ಅಲ್ಲ – ಜಡ ಒಪ್ಪಿಗೆಯಿಂದಲೂ ಅಲ್ಲ.

**– ಲಕ್ಷ್ಮೀಶ ತೋಳ್ಪಾಡಿ,** ಪುತ್ತೂರು

ಆಗಸ್ಟ್, ೨೦೨೦ರ ಹೊಸ ಮನುಷ್ಯ ವಾರ್ಷಿಕ ವಿಶೇಷ ಸಂಚಿಕೆಯನ್ನು ಓದಿದೆ. ಇತ್ತೀಚೆಗೆ ಹೊಸ ಮನುಷ್ಯ ಸಂಚಿಕೆಗಳನ್ನು ಓದತೊಡಗಿದ ನನಗೆ ಡಿಎಸ್ಸೆನ್ ಎಂಬ ವಿಶ್ವವಿದ್ಯಾಲಯವಿದೆ ಎಂದು ಅನ್ನಿಸತೊಡಗಿದೆ. ಅಲ್ಲದೇ ಇದು ಇತರ ಸಾಂಪ್ರದಾಯಿಕ ವಿಶ್ವವಿದ್ಯಾಲಯಗಳು ಮಾಡಲು ವಿಫಲವಾಗುತ್ತಿರುವ ನಿಜವಾದ ಜ್ಞಾನವನ್ನು ಪ್ರಸರಣ ಮಾಡುತ್ತಿರುವ ಅಥವ ಜ್ಞಾನ ಸೃಷ್ಟಿಮಾಡಿ ಸಾರ್ವಜನಿಕರಿಗೆ ಸತ್ಯಾಸತ್ಯತೆಗಳನ್ನು ದಾಖಲೆಗಳ ಸಹಿತ ತೋರಿಸುತ್ತಿರುವ ವಿಶ್ವವಿದ್ಯಾಲಯ ಅಂತ ಅನ್ನಿಸಿದೆ. ಈ ವಿಶ್ವವಿದ್ಯಾಲಯದ ಗುಣ ಎಂಥಹದ್ದೆಂದರೆ ಇದ್ದದ್ದು ಇದ್ದ ಹಾಗೆ ಹೇಳುವುದು. ಅದು ಪ್ರತಿ ತಿಂಗಳಿಗೊಮ್ಮೆಯಂತೂ ಕಡ್ಡಾಯ. ಈ ಸಂಚಿಕೆಗಳನ್ನು ಓದಲು ನನ್ನನ್ನೂ ಒಳಗೊಂಡಂತೆ ನನ್ನ ಅನೇಕ ಗೆಳೆಯರು ಹಾಳಾದ್ದು ಈ ತಿಂಗಳು ಇನ್ನೂ ಬರಲಿಲ್ಲವಲ್ಲ ಯಾವಾಗ ಬರುತ್ತೋ ಏನೊ ಎಂಬ ನಿರೀಕ್ಷೆಯಲ್ಲಿ ಕಾದಿರುತ್ತಾರೆ. ಇದು ಈ ಸಂಚಿಕೆಗಳಿಗಿರುವ ವಿಶೇಷ ಶಕ್ತಿ.

**–ಶ್ರೀಧರ್ ಆರ್.ವಿ.** ತುಮಕೂರು(ವಿಶ್ವವಿದ್ಯಾಲಯ)

ವಿಶೇಷಾಂಕ ತುಂಬಾ ವೈಚಾರಿಕವಾದ ಲೇಖನಗಳಿಂದ ತುಂಬಿದ್ದು ನಮ್ಮಂಥ ದಡ್ಡರಿಗೆ ಜೀರ್ಣಿಸಿಕೊಳ್ಳುವುದು ಕಷ್ಟವಾಗಿದೆ. ಮುದ್ರಣ ದೋಷಗಳು ಕೆಲವೆಡೆ ಹಾಗೇ ಉಳಿದುಹೋಗಿವೆ ಏಕೆ?

**–ಪ್ರಕಾಶ ಪರ್ವತೀಕರ್**, ತಿರುಪ್ಪೂರ್ (ತಮಿಳ್ನಾಡು)

(ನಮಗೆ ಮುಜುಗರ ಉಂಟು ಮಾಡುತ್ತಿರುವ ಈ ಮುದ್ರಣ ದೋಷಗಳಿಗೆ ಕಾರಣವಾಗುತ್ತಿರುವ ನಮ್ಮ ಗಣಕಯಂತ್ರದ ಸಾಫ್ಟ್‌ವೇರ್‌ನ ದೋಷದ ಕಡೆ ಈಗ ಗಮನ ಹರಿಸಲಾಗಿದೆ..–ಸಂ.)

**ತಿದ್ದುಪಡಿ**: ಕಳೆದ (ಆಗಸ್ಟ್) ವಿಶೇಷ ಸಂಚಿಕೆಯಲ್ಲಿನ ಬಿ.ಎ. ವಿವೇಕ ರೈ ಅವರ ಲೇಖನದ ಜೊತೆಯಲ್ಲಿರುವ ಚಿತ್ರಗಳಲ್ಲಿ ಎರಡರ ಹೆಸರುಗಳು ಅದಲುಬದಲಾಗಿದ್ದು ಇನ್ನೊಂದು ಚಿತ್ರ ತಪ್ಪಾಗಿ ಮುದ್ರಿತವಾಗಿದೆ. ಕಣ್ತಪ್ಪಿನಿಂದಾಗಿ ಆದ ಈ ಲೋಪಕ್ಕಾಗಿ ವಿಷಾದಿಸುತ್ತೇವೆ. ಸರಿಯಾದ ಚಿತ್ರ–ವಿವರ ಈ ಕೆಳಗಿದೆ–ಸಂ.





**ಕೆದಂಬಾಡಿ ಜತ್ತಪ್ಪ ರೈ ಅಮೃತ ಸೋಮೇಶ್ವರ ಡಿ ಕೆ. ಚೌಟ**

ಲಲಿತ ಪ್ರಬಂಧ

# ಪರಿಮಳಗಳ ಮಾಯೆ!

–ಆರ್ ಸಮತಾ



ಚಿತ್ರ: ಗುಜ್ಜಾರ್

ಒಂದು ಭಾನುವಾರ ಬೆಳಬೆಳಗ್ಗೆಯೇ ಮನೆಗೆ ಬಂದ ನನ್ನ ಎದುರುಮನೆ ಗೆಳತಿ ಉಷಾ "ರೀ, ಅಲ್ಲಿ ನನ್ ತಂಗಿ ಮನೆ ಹತ್ರ ಒಂದು ಛತ್ರದಲ್ಲಿ ಸೀರೆ ಸೇಲ್ ಹಾಕಿದ್ದಾರಂತೆ, ಬೇಗ ಕೆಲ್ಸ ಮುಗ್ಸಿ ರೆಡಿಯಾಗಿ ಬನ್ನಿ ಹೋಗೋಣ" ಎಂದು ಆದೇಶ ಮಾಡಿದಂತೆಯೇ ಹೇಳಿದಾಗ, ಸೀರೆ ಎಂದರೆ ಸಾಗರದಾಚೆಗೂ ಹೋಗುವಷ್ಟು ದುರಾಸೆಯ ನಾನು "ಹೂ, ಹೋಗೋಣ ತೊಗೊಳ್ಳಿ" ಎಂದು ಚಕ್ ಚಕ್ ಕೆಲ್ಸ ಎಲ್ಲಾ ಮುಗಿಸಿ, ಇಬ್ಬರೂ ಅವರ ಸ್ಕೂಟಿಯೇರಿ ಸವಾರಿ ಹೊರಟೆವು.

ಛತ್ರದ ಬಳಿ ಗಾಡಿ ನಿಲ್ಲಿಸಿ, ಒಳ ಹೊರಡಲು ಹೆಜ್ಜೆ ತೆಗೆಯುತ್ತಿದ್ದಂತೆ, ಇದ್ದಕ್ಕಿದ್ದಂತೆ ಗಾಳಿಯಲ್ಲಿ ತೇಲಿಬಂದ ಮಧುರ ಸುವಾಸನೆಯೊಂದು ನನ್ನ ಹಿಡಿದು ನಿಲ್ಲಿಸಿತು. ಮುಂದೆ ನುಗ್ಗುತ್ತಿದ್ದ ಉಷಾಳ ಕೈ ಹಿಡಿದು ಜಗ್ಗುತ್ತಾ "ಉಷಾ, ನಿಲ್ರಿ, 'ಇಲ್ಲೆಲ್ಲೋ ಹಲಸಿನ ಹಣ್ಣು ಕುಯ್ತ ಅವ್ರೆ ಕಣ್ರೀ, ಬನ್ನಿ ನೋಡೋಣ" ಎಂದಾಗ ನನ್ನಂತೆಯೇ ಹಲಸಿನ ಪ್ರಿಯೆಯಾದ ಅವರು "ಅದೆಲ್ರಿ ಬಂತು, ನಿಮ್ಗೆ ವಾಸ್ನೆ, ನಂಗೇನೂ ಬರ್ಲಿಲ್ಲ "ಅಂದ್ರೂ, "ನಡೀರಿ ನೋಡೋಣ" ಅಂತ ಹಲಸಿನ ಬೇಟೆಗೆ ಸಿದ್ಧವಾದರು.

ಹಾಗೆ ಸುತ್ತಮುತ್ತ ಹುಡುಕಿದಾಗ ಅಲ್ಲೊಂದು ಮರದ ಕೆಳಗೆ ಒಂದು ತಳ್ಳೋ ಗಾಡಿಯ ಪಕ್ಕದಲ್ಲಿ ಹಲಸಿನ ಹಣ್ಣುಗಳ ಗುಡ್ಡೆ ಹಾಕ್ಕೊಂಡು ಕುಯ್ಯುತ್ತ ಇದ್ದ ಒಬ್ಬ ಆಸಾಮಿ ಕಾಣಿಸಿದ. ಉಷಾ ಅಂತೂ ಬಿದ್ದು ಬಿದ್ದು ನಗುತ್ತಾ "ಎಂಥಾ ಘಾಟಿ ಮೂಗ್ರಿ ನಿಮ್ದು, ಅಷ್ಟು ದೂರ ಇದ್ರೂ ನಿಮ್ಗೆ ವಾಸ್ನೆ ಹೊಡಿತಲ್ಲ, ಒಳ್ಳೆ ಭೀಮ ಸೌಗಂಧಿಕಾ ಪುಷ್ಪ ಹುಡುಕಿದ ಹಾಗೆ ಹುಡುಕಿ ಬಿಟ್ರಲ್ಲ" ಅಂದು ಅಣಕಿಸಿದರು. ಇಬ್ರೂ ಚೆನ್ನಾಗಿ ಹಲಸಿನಹಣ್ಣು ತಿಂದು ಮತ್ತೆ ತಿರುಗಿ ನಮ್ಮ ಸೀರೆ ಬೇಟೆಗೆ ಹೊರಟೋ.

ಚಿಕ್ಕಂದಿನಿಂದಲೂ ನನ್ನ ಮೂಗು ಸ್ವಲ್ಪ ಸೂಕ್ಷ್ಮವೇ.

ಎಲ್ಲೇ ಏನೇ ವಾಸನೆ ಇದ್ದರೂ ನನ್ನ ಮೂಗಿಗೆ ಬಡಿದು ಬಿಡುತ್ತಿತ್ತು. ಇನ್ನು ನನ್ನ ಮನೆಯಲ್ಲಿ ಅಮ್ಮ ಅಪ್ಪ ಅಣ್ಣ ತಮ್ಮ ಪ್ರತಿಯೊಬ್ಬ ರಿಗೂ ವಿಶಿಷ್ಟವಾದ ಅವರದೇ ಆದ ಒಂದು ವಿಧದ ದೇಹಗಂಧವಿದ್ದಂತೆ ನನಗೆ ಅನ್ನಿಸುತ್ತಿತ್ತು.

ಅಣ್ಣಾ ಅಂತ ನಾವೆಲ್ಲ ಕರೆಯುತ್ತಿದ್ದ ನಮ್ಮಪ್ಪನ, ಬೀಡಿ ಸಿಗರೇಟ್, ಅವರು ಯಾವಾಗಲೂ ಹೊದೆದಿರುತ್ತಿದ್ದ ಶಾಲ್‌ನ ಬೆವರಿನ, ತಲೆಯ ತೆಂಗಿನೆಣ್ಣೆಯ ಕಮಟು ಎಲ್ಲಾ ಸೇರಿ ಅಪ್ಪನದೆ ಒಂದು ವಿಶಿಷ್ಟ ಪರಿಮಳ ನಮಗೆ ರೂಡಿಯಾಗಿ ಬಿಟ್ಟಿತ್ತು. ಈಗಲೂ ಎಲ್ಲಾದರೂ ಬೀಡಿ ಸಿಗರೇಟು ವಾಸನೆ ಬಂದರೆ ಅಣ್ಣ ಇಲ್ಲೇ ಎಲ್ಲೋ ಇದೆ ಎನಿಸಲಾರಂಭಿಸುತ್ತದೆ.

ಇನ್ನು ಮಂಡಿಯವರೆಗೆ ಉದ್ದದ ದಟ್ಟ ಕೂದಲಿದ್ದ, ಯಾವಾಗಲೂ ಜಡೆಗೆ ಯಾವುದಾದರೊಂದು ಹೂ ಮುಡಿದಿರುತ್ತಿದ್ದ ಅಮ್ಮ, ತಮ್ಮ ಕೇಶವರ್ಧಿನಿ ತೈಲ ಎರೆದು ಬೆಳೆಸಿದ್ದ ತಲೆಗೂದಲು ಬಿಚ್ಚಿ ನನ್ನನ್ನು ಬಾಚಲು ಕರೆದಾಗ, ಅಮ್ಮನ ತಲೆ ಬಾಚುತ್ತ ಬಾಚುತ್ತಾ, ನನ್ನೊಳಗೆ ಇಳಿದಿರುವ ಅಮ್ಮನ ಆ ಸುಗಂಧಭರಿತ ತಲೆಗೂದಲ ವಾಸನೆ ಈಗಲೂ ನನಗೆ ನೆನಪಿದೆ. ಬರಿ ತಲೆಗೂದಲಲ್ಲ ಅಮ್ಮನ ಸೀರೆಗಳು ಕೂಡ ವಿಶಿಷ್ಟ ಪರಿಮಳ ಸೂಸಿದಂತೆ ನನಗೆ ಭಾಸವಾಗುತ್ತಿತ್ತು. ಅವರ ಸೀರೆಗಳಿಟ್ಟ ಗೋದ್ರೆಜ್ ಬೀರು ಬಾಗಿಲು ತೆಗೆದರೆ ಸಾಕು ಹಿತವಾದ ಸುವಾಸನೆ ಹರಡಿದಂತೆ ಅನಿಸಿ ನಾನು ಮೂಗೆಳೆಯುತ್ತ ನಿಂತರೆ ನಮ್ಮಮ್ಮನಿಗೇ ನಗುವೇ ನಗು.

"ಅಮ್ಮನ ವಾಸನೆ ಮಲ್ಲಿಗೆ ಹೂವಿನಂತೆ "ಅಂತ ನಮ್ಮ ಕಡೆ ಒಂದು ಗಾದೇನೇ

**ಮಲ್ಲಿಗೆ ಹೂವಿನ ಸುಗಂಧ, ಮೊದಲ ಮಳೆಬಿದ್ದಾಗ ಏಳುವ ಮಣ್ಣಿನ ಘಮ, ಮುದ್ದು ಮಕ್ಕಳ ಹಾಲಿನ ವಾಸನೆ, ಅಚಾನಕ್ ಆಗಿ ಎಲ್ಲಿಂದಲೋ ತೇಲಿ ಬರುವ ಯಾವುದೆಂದು ತಿಳಿಯದ ಪರಿಮಳ, ನಾವೇ ನೆಟ್ಟ ಗಿಡದಲ್ಲಿ ಬೆಳೆದ ಹೂವಿನ ಸುವಾಸನೆ, ಇವೆಲ್ಲ ಯಾರಿಗೆ ಸುಖ ತಾರವು ಹೇಳಿ!.**

ಇದೆ. ನಮ್ಮ ದುರದೃಷ್ಟ ನನ್ನಮ್ಮ ಹೆಚ್ಚಿನ ಆಯುಷ್ಯ ಪಡೆದು ಬಂದಿರಲಿಲ್ಲ. ಚಿಕ್ಕ ವಯಸ್ಸಿನಲ್ಲೇ ಹೋಗಿ ಬಿಟ್ಟರು. ಆಗ ವಿಧಿ ವಿಧಾನಗಳ ಪ್ರಕಾರ ಇಡೀ ಮನೆಯನ್ನು ಕ್ಲೀನ್ ಮಾಡಬೇಕೆಂದು ಹೇಳಿ ನೆಂಟರೆಲ್ಲ ಮನೆಯಲ್ಲಿನ ಎಲ್ಲಾ ಬಟ್ಟೆ ಬರೆ, ಮೇಜು ಕುರ್ಚಿ, ಮಂಚ ಗಿಂಚ, ಪಾತ್ರೆ ಪಡಗ ಅಂತೆಲ್ಲಾ ಒಂದು ಚಮಚ ಕೂಡ ಬಿಡದೆ ತೊಳೆದು ಹಾಕಿ ಬಿಟ್ಟರು. ನನಗಂತೂ ನಮ್ಮಮ್ಮನ ಬಟ್ಟೆ ತೊಳೆದು ಹಾಕುವುದು ಸ್ವಲ್ಪವೂ ಇಷ್ಟ ವಿರಲಿಲ್ಲ. "ಅಮ್ಮನ ವಾಸನೆ ಎಲ್ಲ ಹೋಗಿ ಬಿಡುತ್ತದೆ" ಎಂದು ಎಷ್ಟು ಬೇಡಾ ಎಂದರು ಕೇಳದೆ ತೊಳೆದು ಹಾಕಿ ಆ ಮಧುರ ನೆನಪು ಶಾಶ್ವತವಾಗಿ ತೊಳೆದು ಹೋಯಿತು. ನೆನಪಾದಾಗಲೆಲ್ಲ ದಟ್ಟ ವಿಷಾದವೆನಿಸುತ್ತದೆ.

ನನಗಿಂತ ಸ್ವಲ್ಪ ಕುಳ್ಳಿಯಾದ ನನ್ನ ಜೀವದ ಗೆಳತಿಗೆ, ನನ್ನ ನೋಡಿದ ತಕ್ಷಣ ಗಟ್ಟಿಯಾಗಿ ತಬ್ಬಿಕೊಂಡರೆ ಮಾತ್ರ ಅವಳಿಗೆ ಸಮಾಧಾನ. ಹಾಗೆ ಅವಳು ತಬ್ಬಿಕೊಂಡ ತಕ್ಷಣ ಅವಳ ನೆತ್ತಿ ಸರಿಯಾಗಿ ನನ್ನ ಮೂಗಿಗೆ ತಗಲುತಿತ್ತು. ಆಗ ಪರಿಚಯವಾದ ಅವಳ ನೆತ್ತಿಯ ವಾಸನೆ ಈಗಲೂ ಅವಳ ನೆನಪಿನೊಟ್ಟಿಗೆ ನುಗ್ಗಿ ಬರುತ್ತದೆ. ಬೇರೆ ಊರಿನಲ್ಲಿ ಇರುವ ಅವಳು ಯಾವಾಗಲಾದರೂ ರಜೆಯಲ್ಲಿ ಮನೆಗೆ ಬಂದಾಗ ತಬ್ಬಿಕೊಂಡು ಅವಳ ನೆತ್ತಿ ಮೂಸುವ ನಾನು ಅವಳ "ಮುದ್ದಿನ ನಾಯಿಮರಿ" .

ಮಲ್ಲಿಗೆ ಹೂವಿನ ಸುಗಂಧ, ಮೊದಲ ಮಳೆಬಿದ್ದಾಗ ಏಳುವ ಮಣ್ಣಿನ ಘಮ, ಮುದ್ದು ಮಕ್ಕಳ ಹಾಲಿನ ವಾಸನೆ, ಅಚಾನಕ್ ಆಗಿ ಎಲ್ಲಿಂದಲೋ ತೇಲಿ ಬರುವ ಯಾವುದೆಂದು ತಿಳಿಯದ ಪರಿಮಳ, ನಾವೇ ನೆಟ್ಟ ಗಿಡದಲ್ಲಿ ಬೆಳೆದ ಹೂವಿನ ಸುವಾಸನೆ, ಇವೆಲ್ಲ ಯಾರಿಗೆ ಸುಖ ತಾರವು ಹೇಳಿ.

ಆದರೆ ಕೆಲವೊಬ್ಬರು ಜನರ ವಿಚಿತ್ರ ಪರಿಮಳಗಳ ಹವ್ಯಾಸಗಳು ನೋಡುವವರಿಗೆ ನಗೆ ಬರಿಸಿದರೂ, ಆ ಅಭ್ಯಾಸಗಳ ರೂಢಿಸಿಕೊಂಡವರಿಗೆ ಅದೇ ಖುಷಿ.

ನನ್ನ ಗೆಳತಿಯೊಬ್ಬಳಿಗೆ ಪೆಟ್ರೋಲ್ ಡೀಸೆಲ್‌ಗಳ ವಾಸನೆ ಎಷ್ಟು ಇಷ್ಟ ಎಂದರೆ ಶಾಲೆಗೆ ಹೋಗುವ ಸಮಯದಲ್ಲಿ ನಾವೊಂದಿಷ್ಟು ಗೆಳತಿಯರು ಜೊತೆಗೂಡಿ ದಾರಿಯಲ್ಲಿ ಹೋಗುವಾಗ ಯಾವುದಾದರೂ ಬಸ್ ಅಥವಾ ಕಾರ್ ಪಕ್ಕದಲ್ಲಿ ಹೋದರೆ ಸಾಕು ಮೂಗರಳಿಸಿಕೊಂಡು ಆಘ್ರಾಣಿಸುತ್ತ ನಿಂತು ಬಿಡುತ್ತಿದ್ದಳು.

"ಎಷ್ಟು ಚಂದವೇ ಇದು" ಎಂದವಳು ಮೈ ಮರೆತರೆ ಜೊತೆಯಲ್ಲಿದ್ದ ನಾವು ಗೆಳತಿಯರೆಲ್ಲ ಅವಳ ಅಲ್ಲಾಡಿಸಿ ಎಚ್ಚರಿಸಿ, "ಇದೆಂಥ ಹುಚ್ಚೇ ಇದು ನಿಂಗೆ" ಅಂತ ಬೈದರೂ ಅವಳು ತನ್ನ ಅಭ್ಯಾಸ ಬಿಟ್ಟಿರಲಿಲ್ಲ.

ನಮ್ಮ ಕರ್ನಾಟಕದ ದಕ್ಷಿಣ ಭಾಗದ ಯಾವುದೇ ಒಂದು ಸುಮಾರು ದೊಡ್ಡ ಊರಿನಲ್ಲಿ, ನೀವು ನೋಡಿ ಬೇಕಾದ್ರೆ, ಒಂದು ಅಂಗಡಿ ಬೀದಿ, ಇಲ್ಲವೇ ವಾಣಿಜ್ಯ ವ್ಯವಹಾರದ ಯಾವುದೇ ರಸ್ತೆಯಲಿ ಕಾಫಿ ಪುಡಿ ಮಾಡುವ ಇಲ್ಲವೇ ಮಾರುವ ಅಂಗಡಿಗಳು ಸಾಲು ಸಾಲಾಗಿ ಕನಿಷ್ಟ ಒಂದೆರಡು ಮೂರಾದರು ಇದ್ದರೆ ಆ ರಸ್ತೆಯಲ್ಲಿ ಸುಳಿದಾಡುವ ಸುಖವೇ ಬೇರೆ. ನನಗಂತೂ ಅಂತಹ ಯಾವುದೇ ರಸ್ತೆಯಲ್ಲಿ ನಡೆಯುವಾಗ ಕಾಫಿಯ ದಿವ್ಯ ಪರಿಮಳ ಮೈ ಮನಗಳಿಗೆ ಮತ್ತೇರಿಸಿ ಕಾಲುಗಳು ಮುಂದೆ ಚಲಿಸುವುದಿಲ್ಲವೆಂದು ನಿಂತೇ ಬಿಡುತ್ತವೆ. ಬಹುಶಃ ಕಾಫೀ ಕುಡಿದರೂ ಅಷ್ಟು ಸವಿ ಅನಿಸದು.

ಹಾಗೆಯೇ ಕಾಫಿಯ ಮತ್ತು ನೆತ್ತಿಗೇರಿ ನನ್ನಂತೆಯೇ ನಿಂತು ಅಸ್ವಾದಿಸುವವರು ಒಬ್ಬಿಬ್ಬರಾದರು ನನಗೆ ಸಿಕ್ಕೇ ಸಿಗುತ್ತಾರೆ.

ಆಗ ಅವರನ್ನು ನೋಡಿ ನಾನು, ನನ್ನನ್ನು ನೋಡಿ ಅವರು, ಸಿಕ್ಕಿ ಬಿದ್ದ ಕಳ್ಳರಂತೆ, ಹುಳ್ಳ ಹುಳ್ಳಗೆ ನಗುತ್ತಾ ಬರಲಾರದ ಕಾಲು ಕಿತ್ತು ಮುಂದೆ ಹೋಗುತ್ತೇವೆ. ಯಾರಿಗೆ ಗೊತ್ತು ಅಂಗಡಿ ಮಾಲೀಕ ವಾಸನೆಗೂ ದುಡ್ಡು ಕಿತ್ತು ಬಿಟ್ಟರೆ!

ದೇವಸ್ಥಾನಗಳಲ್ಲಿ ಪ್ರತಿನಿತ್ಯ, ಮತ್ತು ಮನೆಗಳಲ್ಲಿ ಹಬ್ಬ ಹರಿದಿನಗಳಲ್ಲಿ ವಿವಿಧ ಗಂಧ, ಸುಗಂಧ, ಪರಿಮಳ, ಸುವಾಸನೆಗಳು ಸೇರಿ ಕೊಡುವ ದಿವ್ಯ ಅನುಭೂತಿ ಅನುಭವಿಸಿಯೇ ತೀರಬೇಕು. ಹೂಗಳ, ಹಣ್ಣುಗಳ, ಪೂಜೆಯ ಅಗರಬತ್ತಿಯ, ಕರ್ಪೂರದ, ಪ್ರಸಾದಗಳ, ಸುವಾಸನೆಗಳು ಪರಸ್ಪರ ಮಿಶ್ರಗೊಂಡು ತಮ್ಮದೇ ಆದ ವಿಶಿಷ್ಟ ಪರಿಮಳ ನೀಡಿಬಿಡುತ್ತವೆ.

ಇರುವ ವಿವಿಧ ಹಬ್ಬಗಳಿಗೆ ಮಾಡುವ ಅಡುಗೆಗಳು ಬೇರೆ ಬೇರೆಯಾಗಿ ಇರುವುದರಿಂದ ಪ್ರತಿಯೊಂದು ಹಬ್ಬವನ್ನೂ ತನ್ನದೇ ಆದ ವಿಶಿಷ್ಟ ವಾಸನೆಯಿಂದ ನನ್ನ ಮೂಗು ನೆನಪಿಸಿಕೊಳ್ಳುತ್ತದೆ. ಒಬ್ಬಟ್ಟು ಮಾಡಿದಾಗೆಲ್ಲಾ ಯುಗಾದಿ ನೆನಪಾದರೆ, ಕಜ್ಜಾಯದ ಸವಿ ನಮ್ಮೂರಿನ ದೀಪಾವಳಿಯ ಹಿರಿಯರ ಎಡೆಹಾಸಿನ ಮುಂದೆ ನಿಲ್ಲಿಸಿಬಿಡುತ್ತದೆ. ಆಯುಧ ಪೂಜೆಯಲ್ಲಂತು ಶೇವಂತಿಗೆ ಚೆಂಡು ಹೂಗಳ ಸುಗಂಧ

ಪೂಸಿಕೊಂಡು ನನ್ನ ಸ್ಕೂಟಿ ಲಿಯೋನ ಸವಾರಿ ಮೆರೆಯುತ್ತದೆ.

ಹಬ್ಬದ ಮಾರನೆಯ ವರ್ಷತೊಡಕುಗಳ ಮಾಂಸದಡುಗೆ ಗಮಲುಗಳಂತೂ ಈ ಲೋಕದ್ದಲ್ಲ ಬಿಡಿ.

ಇನ್ನು ಮದುವೆ ಮನೆಗಳಂತು, ತರ ತರದ ಹೂಗಳ, ಹಣ್ಣುಗಳ, ಹೊಸ ಹೊಸ ಬಟ್ಟೆಗಳ, ಅತ್ತರು, ಪರ್ಫ್ಯೂಮ್‌ಗಳ, ವಿವಿಧ ರೀತಿಯ ಭಕ್ಷ್ಯ ಭೋಜನಗಳನ್ನು ತಯಾರಿಸುವ ಗಮಲಿನ, ಎಲ್ಲಾ ತರಹದ ವಾಸನೆಗಳು ಸೇರಿ ಆಹ್ಲಾದಕರ ವಾತಾವರಣವನ್ನೇ ಸೃಷ್ಟಿ ಮಾಡಿ ಬಿಡುತ್ತವೆ. ನನಗಂತೂ ದುಂಡುಮಲ್ಲಿಗೆಯ ಪರಿಮಳ ಯಾವಾಗಲೂ ಮದುವೆ ಮನೆಯ ನೆನಪನ್ನೇ ತರುತ್ತದೆ.

ಹಣ್ಣುಗಳನ್ನು ನೋಡಿ, ಒಂದರ ಹಾಗೆ ಇನ್ನೊಂದರ ವಾಸನೆ ಇರುವುದಿಲ್ಲ. ಬೇರೆ ಬೇರೆ ರೀತಿಯ ಹಣ್ಣುಗಳ ಬಿಡಿ, ಒಂದೇ ಜಾತಿಯ ಹಣ್ಣುಗಳಲ್ಲು ಬೇರೆ ಬೇರೆ ವಿಧಗಳು ಬೇರೆ ಬೇರೆ ಪರಿಮಳ ಬೀರುತ್ತವೆ. ನೋಡಿ ಬೇಕಾದ್ರೆ, ಬಾದಾಮಿ ಮಾವಿನ ಪರಿಮಳ ತೋತಾಪುರಿಗುಂಟೆ? ಜೀರಿಗೆ ಮಾವಿನ ಸೊಗಡು ರಸಪುರಿಗೆ ಬರಲು ಸಾದ್ಯವೇ? ಮಾವಿನ ಹಣ್ಣಿನ ಕಾಲದಲ್ಲಿ ನೀವು ಗಮನಿಸಿ ನೋಡಿ ಇಡೀ ಗಾಳಿಯಲ್ಲಿ ಮಾವಿನ ಪರಿಮಳ ಹರಡಿ ಹೋದಂತೆ ಅನಿಸುವುದಿಲ್ಲವೇ?

ನನ್ನ ಪ್ರಕಾರ ಹೇಳುವುದಾದರೆ ಪರಿಮಳದ ರಾಜ ಅಂತ ಏನಾದರೂ ಇದ್ದರೆ ಅದು ಹಲಸಿನ ಹಣ್ಣಿನ ಪರಿಮಳ. ಹಲಸಿನ ಹಣ್ಣಿನ ಪರಿಮಳ ನಾನು ಮೈಲು ದೂರದಿಂದಲೇ ಮೂಸಬಲ್ಲೆ.

ಹಣ್ಣುಗಳ ರಾಜ ಅನ್ನುವ ಬಿರುದು ಅದಕ್ಕೆ ಪಾಪ ಕೂದಲೆಳೆಯಿಂದ ತಪ್ಪಿಹೋಗಿದೆ. ಅಷ್ಟು ರುಚಿಕರ ಹಣ್ಣು ಕೊಡುವ, ಬೇಸಾಯಕ್ಕೆ ಹೆಚ್ಚು ಖರ್ಚು ಬೇಡದ, ಆಡು ಕುರಿಗಳಿಗೆ ಸೊಪ್ಪು ನೀಡಿ, ಮರಮುಟ್ಟುಗಳಿಗೂ ಆಗಿ ಬರುವ ಹಲಸಿನ ಮರ ಅದು ಯಾಕೆ ಕಲ್ಪವೃಕ್ಷ ಪಟ್ಟ ತಪ್ಪಿಸಿ ಕೊಂಡಿತೋ ತಿಳಿಯದು. ನಮ್ಮ ಮನೆಯಲ್ಲಿ ಹಲಸಿನ ಹಣ್ಣು ತಂದರೆ ನಾನಂತೂ ಒಂದೆರಡು ದಿನ ಬಿಟ್ಟೇ ಅದನ್ನು ಕುಯ್ಯುವುದು. ಆ ಎರಡು ದಿನಗಳಲ್ಲಿ ಮನೆಯಿಡೀ ಘಮ ಘಮ ಘಮಿಸುತ್ತಿರುತ್ತದೆ. ಆ ಪರಿಮಳದ ಕೊಳದಲ್ಲಿ ಮನಸ್ಪೂರ್ತಿಯಾಗಿ ಮುಳುಗೆದ್ದ ಬಳಿಕವೇ ಅ ಹಣ್ಣಿಗೆ ಮುಕ್ತಿ. ನನ್ನ ಗಂಡ ನನ್ನ ಈ ಹಲಸಿನ ಮೋಹಕ್ಕೆ "ಸದ್ಯ ನೀನು ಈ ಅಗ್ಗವಾಗಿ ಸಿಗುವ ಹಲಸಿನ ಬದಲು ಸೇಬು ಗೀಬು ಅಂತ ಏನಾದ್ರೂ ಮರುಳಾಗಿ ಹೋಗಿದ್ದಿದ್ದರೆ ನಾನು ದಿವಾಳಿಯಾಗಿ ಹೋಗಿರುತ್ತಿದ್ದೆ" ಅಂತ ರೇಗಿಸುತ್ತಿರುತ್ತಾರೆ.

ನನ್ನ ಈ ವಾಸನದ್ವೇಷಿ ಗಂಡನ ಮೈ ವಾಸನೆ ಹೇಗಿದೆ ಅಂತ ಮದುವೆಯಾಗಿ ಹದಿನೆಂಟು ವರ್ಷವಾದರೂ, ನಾಯಿ ಮೂಗು ಅಂತ ಹೆಸರಾಗಿರುವ ನನ್ನಂತ ನನಗೇ ಕಂಡುಕೊಳ್ಳಲಾಗಿಲ್ಲ. ಯಾವಾಗ ಬಳಿ ಬಂದರೂ ತಲೆಯ ಶಾಂಪೂ, ಮೈನ ಸೋಪಿನ ವಾಸನೆಯ ನನ್ನ ಮಿ.ಕ್ಲೀನ್ ಗಂಡನನ್ನು ನಾನು "ನೀವು ಮನುಷ್ಯರೋ ಇಲ್ಲಾ ಅನ್ಯಗ್ರಹ ಜೀವಿಯೋ" ಅಂತ ಕಾಲೆಳೆಯುತ್ತಿರುತ್ತೇನೆ.

ಕೆಲವೊಂದು ವಾಸನೆಗಳು ಕೆಲವೊಂದು ಮಧುರ ನೆನಪುಗಳನ್ನೂ ಹೊತ್ತು ತರುವುದು ಇದೆ. ಮೈಸೂರ್ ಸ್ಯಾಂಡಲ್ ಸೋಪ್‌ನ ವಾಸನೆ ನನಗೆ ಸೀದಾ ನಮ್ಮಜ್ಜಿ ಮನೆಯ ನೀರುಮನೆಯ ದೊಡ್ಡ ಹಂಡೆ ಒಲೆಯ, ಸುಡುವ ನೀರಿನ, ಉರಿವ ಬೆಂಕಿಯ, ಸೀಗೆಯ ಘಾಟಿನ, ಮೊಗೆ ಮೊಗೆದು ನೀರೆರೆಸಿಕೊಳ್ಳುತ್ತಿದ್ದ ದಿನಗಳ ನೆನಪುಗಳನ್ನು ಹೊತ್ತು ತಂದುಬಿಡುತ್ತದೆ. ಹೊಸ ಪುಸ್ತಕಗಳು ಶಾಲಾ ಕಾಲೇಜಿನ ದಿನಗಳ ಎದಿರು ನಿಲ್ಲಿಸುತ್ತವೆ. ಮೊನ್ನೆ ಒಮ್ಮೆ ಹೀಗೆ ಸಂಜೆ ವಾಕ್ ಮಾಡುತ್ತಾ ಹೋಗುವಾಗ ಅಲ್ಲೇ ಒಂದು ರಸ್ತೆ ಬದಿಯ ಒಂದು ಮನೆಯ ಔಟ್‌ಹೌಸ್‌ನಲ್ಲಿ ಕಟ್ಟಿದ್ದ ಹಸು ಕರುಗಳ, ಕೋಳಿಗಳ, ಅವುಗಳ ಸಗಣಿ ಗಂಜಲ ಎಲ್ಲಾ ಸೇರಿ ಬರುತ್ತಿದ್ದ ಒಂದು ವಾಸನೆ ನನ್ನನ್ನು ನಮ್ಮೂರಿಗೆ ಕರೆದೊಯ್ದು ಕಣ್ಣು ತೇವವಾಯಿತು.

ಆದರೆ ಎಲ್ಲ ವಾಸನೆಗಳು ಸವಿ ನೆನಪುಗಳನ್ನು ತಾರವು. ಫಿನಾಯಿಲ್ ಡೇಟ್ಟಲ್‌ಗಳಂತೂ ಆಸ್ಪತ್ರೆಯ ನೆನಪುಗಳೊಂದಿಗೆ ತಳುಕು ಹಾಕಿಕೊಂಡು ಬಿಟ್ಟಿವೆ. ಘಾಟು ವಾಸನೆಯ ಸುಗಂಧರಾಜದ ಪರಿಮಳ ನನಗಂತೂ ಶೋಕಾಚರಣೆಯ ದುಕ್ಕ ಸುರಿದು ಹೋಗುತ್ತದೆ.

ನನ್ನ ಈ ಪರಿಮಳದ ಮೋಹ ನನ್ನ ಮಗಳಿಗೂ ವರ್ಗಾವಣೆ ಯಾಗಿ ಹೋಗಿದೆ. ಹುಟ್ಟಿದ ದಿನದಿಂದಲೂ ನನಗೇ ಅಂಟಿಕೊಂಡು ಬೆಳೆದ ಅವಳಿಗೆ ರಾತ್ರೆ ಮಲಗುವಾಗಲೂ ನನ್ನ ಗಟ್ಟಿಯಾಗಿ ತಬ್ಬಿಕೊಂಡು, ನನ್ನ ಮೇಲೆ ಕೈ ಕಾಲು ಹೇರಿಕೊಂಡು ಮಲಗಿದರೆಯೇ ಸರಿ ಅವಳಿಗೆ. ಅವಳಿನ್ನೂ ಕೇವಲ ಮೂರು ವರ್ಷದವಳಿದ್ದಾಗ ಹೀಗೆ ರಾತ್ರಿ ನನ್ನ ತಬ್ಬಿ ಮಲಗಿದ್ದ ಅವಳು ಇದ್ದಕ್ಕಿದ್ದಂತೆ "ಅಮ್ಮ ನೀನು ಯಾಕೆ ಮೂಸಿದ್ರೆ ಚಂದ ಅನ್ನಿಸ್ತಿಯ" ಅಂತ ಕೇಳಿದ್ದಳು. ಈಗಲೂ ಆಕೆಗೆ ನನ್ನ ಮುಖ, ತಲೆ ಮೂಸುತ್ತ ಮಲಗಿದರೆ ಮಾತ್ರ ಸಮಾಧಾನ.

ಹೀಗೆ ಎಲ್ಲ ವಸ್ತುಗಳ, ಮನುಷ್ಯರ, ಪ್ರಾಣಿಗಳ, ಹೂ ಹಣ್ಣು ತಿಂಡಿಗಳ ಗಮಲಿನಲ್ಲಿ ತೇಲುವ ನನ್ನನ್ನು ನನ್ನ ಗಂಡ ಕಾಲೆಳೆದು ಕೆಳಗಿಳಿಸುತ್ತಾರೆ. "ಹೀಗೆಯೇ ವಾಸನೆ ಹಿಡಿಯುತ್ತಾ ನೀನು ತಿರುಗುತ್ತಿದ್ದರೆ ಮುಂದಿನ ಜನ್ಮದಲ್ಲಿ ಗ್ಯಾರಂಟಿ ದುಂಬಿಯೋ, ಜೇನುನೊಣವೋ ಆಗಿ ಹುಟ್ಟುತ್ತಿಯಾ, ಹುಷಾರ್" ಎಂದು ಎಚ್ಚರಿಸಿ ಹಲ್ಲು ಕಿರಿಯುತ್ತಾರೆ. ಆದರೆ ನಾನೋ "ದೇವಾ ಮುಂದಿನ ಜನ್ಮ ಅಂತ ಒಂದು ಇದ್ದರೆ ನನ್ನನ್ನ ಒಂದು ಕರಡಿಯಾಗಿಸಿ ಒಂದು ತುಂಬಿದ ಹಲಸಿನ ವನದಲ್ಲಿ ತುಡುಗು ಬಿಟ್ಟುಬಿಡು" ಅಂತ ದಿನವೂ ಪ್ರಾರ್ಥಿಸುತ್ತೇನೆ. ನೀವೆಲ್ಲರೂ ದಯವಿಟ್ಟು ತಥಾಸ್ತು ಅಂತ ಹೇಳಿ.



**(ಮೈಸೂರಿನ ನಿವಾಸಿಯಾದ ಲೇಖಕಿ ಕೊಡಗಿನ ಹಳ್ಳಿಯೊಂದರ ಶಾಲೆಯಲ್ಲಿ ಉಪಾಧ್ಯಾಯಿನಿಯಾಗಿದ್ದಾರೆ)**

---

**೧ನೇ ಪುಟದಿಂದ)**

ಸುಪ್ತಮನಸ್ಸಿನಲ್ಲಿ ಮನೆಮಾಡಿದ್ದ ಮತ್ತು ರಾಷ್ಟ್ರ ವಿಭಜನೆಯ ಸಂದರ್ಭದಲ್ಲಿ ಇನ್ನಷ್ಟು ಬಲಗೊಂಡಿದ್ದ ಮುಸ್ಲಿಂ ವಿರೋಧಿ ಭಾವನೆಗಳು ತಣಿಯುವಂತಹ ಹಲವು ರಾಜಕೀಯ ಕ್ರಮಗಳನ್ನು ಕೈಗೊಂಡು ಆ ಬಹುಭಾಗವನ್ನು ಮತಾಧಾರಿತ ದೇಶಭಕ್ತಿಯ ಜೋಗುಳ ಹಾಡಿ ಮಲಗಿಸಿಬಿಟ್ಟಿದೆ. ಇವರನ್ನು ಎಬ್ಬಿಸುವ ರಾಜಕೀಯ ತಾಕತ್ತು ಇಂದು ಯಾರಿಗೂ ಇಲ್ಲದ ಕಾರಣದಿಂದಲೇ (ಮೋದಿ ಇಂದು ಹಲವು ವೈಫಲ್ಯಗಳ ನಡುವೆಯೂ ಅದ್ವಿತೀಯ ನಾಯಕರಾಗಿ ಉಳಿಯಲು ಸಾಧ್ಯವಾಗಿದೆ. ('ಧರ್ಮವಿಚಾರ ಪುಟ'ದ ಲೇಖನ ನೋಡಿ.)

ಹೋದವಾರದ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆಯ ನಡಾವಳಿಯನ್ನು ಗಮನಿಸಿದ ಯಾರಿಗೇ ಆದರೂ, ಮೋದಿಯವರಿಗೆ ಪರ್ಯಾಯ ಸದ್ಯಕ್ಕಂತೂ ಸಾಧ್ಯವಿಲ್ಲ ಎಂಬುದು ಸ್ಪಷ್ಟವಾದೀತು. ಕಾಂಗ್ರೆಸ್, ನೆಹರೂ ಕುಟುಂಬದಾಚೆಗೆ ಬೆಳೆಯಲು ನಿರಾಕರಿಸುತ್ತಿರುವ ಪರಿಯಲ್ಲಿ ಕಾಣುವ ಅದರ ರಾಜಕೀಯ ಹೇಡಿತನ ಗಾಬರಿ ಹುಟ್ಟಿಸುವಂತಿದೆ. ಅದನ್ನು ನೆಹರೂ ಕುಟುಂಬದ ವರ್ಚಸ್ಸು ಮಾತ್ರ ಒಂದು ಪಕ್ಷವಾಗಿ ಉಳಿಸಬಹುದೆಂಬ ಅದರ ನಂಬಿಕೆಯನ್ನು ಕಂಡು ಭಾರತದ ಒಂದು ಚಿಕ್ಕ ಮಗು ಕೂಡ ನಗದಿರಲಾರದು. ಒಂದು ದೊಡ್ಡ ತಾತ್ವಿಕ ಪರಂಪರೆಯ ವಾರಸುದಾರನಾದ ಈ ಪಕ್ಷ ಇಂದು ತನ್ನನ್ನು ಪಕ್ಷವಾಗಿ ಉಳಿಸಿ ಬೆಳೆಸಬಲ್ಲ ಒಂದು ಸ್ಪಷ್ಟ ತಾತ್ವಿಕ ಬೆನ್ನೆಲುಬನ್ನು ರೂಪಿಸಿಕೊಳ್ಳುವ ಹಂಬಲವನ್ನೇ ಕಳೆದುಕೊಂಡಿರುವುದು ಈ ರಾಷ್ಟ್ರದ ದುರಂತ. ಆದರೂ ಪಕ್ಷದ ಒಂದಷ್ಟು ಜನ ಮೊದಲ ಬಾರಿಗೆ ಪಕ್ಷವನ್ನು ಬುಡದಿಂದ ತುದಿವರೆಗೆ ಪುನರ್ರೂಪಿಸಬೇಕಾದ ಅಗತ್ಯದ ಬಗ್ಗೆ ಧೈರ್ಯದಿಂದ ಮಾತಾಡಿರುವುದು ಒಂಚೂರು ಆಶೆಯನ್ನು ಹುಟ್ಟಿಸಿದೆ. ಇನ್ನಾರು ತಿಂಗಳು ಕಾದು ನೋಡಬಹುದು.

* * * * * *

ಇನ್ನು ನಮ್ಮ ಆಗಸ್ಟ್ ವಾರ್ಷಿಕ ವಿಶೇಷ ಸಂಚಿಕೆಗೆ ಓದುಗರಿಂದ ದೊರೆತಿರುವ ಪ್ರೀತಿಪೂರ್ವಕ ಸ್ವಾಗತ ನಮ್ಮ ಉತ್ಸಾಹವನ್ನು ಹೆಚ್ಚಿಸುವಂತಿದೆ. ಈ ವಿಶೇಷಾಂಕದಲ್ಲಿನ ಪತ್ರಗಳಲ್ಲಿ ನೀಡಲಾಗಿರುವ ಸಲಹೆಗಳನ್ನು ನಾವು ಗಮನಿಸಿದ್ದೇವೆ. ಇದೇ ಸಂದರ್ಭದಲ್ಲಿ ಒಂದೆರಡು ಸಂತೋಷದ ಸುದ್ದಿಗಳನ್ನು ಓದುಗರೊಂದಿಗೆ ಹಂಚಿಕೊಳ್ಳಬಯಸುತ್ತೇವೆ. ಈ ವಿಶೇಷಾಂಕದಿಂದ ದೊರೆತ ಆದಾಯದಲ್ಲಿ ಒಂದು ಭಾಗವನ್ನು ಪತ್ರಿಕೆಗಾಗಿ 'ಕಾಪು ನಿಧಿ'ಯೆಂದು ಇರಿಸಿಕೊಂಡು ಮಿಕ್ಕೆಲ್ಲ ಹಣವನ್ನು ಕಳೆದ ವರ್ಷ ನಮಗೆ ಬರಹಗಳನ್ನು ನೀಡಿದ ಎಲ್ಲ ಮುಖ್ಯ ಲೇಖಕರಿಗೆ, ಅನುವಾದಕರಿಗೆ ಮತ್ತು ಕಲಾವಿದರಿಗೆ ಸಾಂಕೇತಿಕ ಸಂಭಾವನೆಯ ರೂಪದಲ್ಲಿ ವಿತರಿಸಿದ್ದೇವೆ. ಹೀಗೆ ವಿತರಿಸಿದ ಒಟ್ಟು ಮೊತ್ತ ಸುಮಾರು ನಲವತ್ತೈದು ಸಾವಿರ ರೂಪಾಯಿಗಳು.

ಇನ್ನೊಂದು ಸಂತೋಷದ ಸಂಗತಿ ಎಂದರೆ ನಮ್ಮ ಪತ್ರಿಕೆಗೆ ವಿಶ್ವವಿದ್ಯಾಲಯ ಧನ ಸಹಾಯ ಆಯೋಗದ ಮಾನ್ಯತೆ ದೊರೆತು 'ಯುಜಿಸಿ ಕೇರ್ ಲಿಸ್ಟ್'ಗೆ ಸೇರಿಕೊಂಡಿದೆ. ನಮ್ಮ ಓದುಗರ ಪೈಕಿ ಅತ್ಯಂತ ಕಡಿಮೆ ಸಂಖ್ಯೆಯಲ್ಲಿರುವವರು ಕಾಲೇಜು ಮೇಷ್ಟ್ರುಗಳು. ಆದರೂ ಯಾರ ಕೈವಾಡವೋ ಖಚಿತವಿಲ್ಲ, ಈ ಮಾನ್ಯತೆ ದೊರೆತು ಈ ಮೇಷ್ಟ್ರುಗಳು ಕಳಿಸಲಾರಂಭಿಸಿರುವ ಲೇಖನಗಳ ಹೊಡೆತಕ್ಕೆ ಒಂದೆರಡು ವಾರಗಳಲ್ಲೇ ಸುಸ್ತಾಗಿದ್ದೇವೆ. ನಮ್ಮ ಪ್ರತಿ ಸಂಚಿಕೆಯೂ ಪೂರ್ವ ನಿಯೋಜಿತವಾಗಿರುವುದರಿಂದ–ಕಥೆ–ಕವನ ಹೊರತಾಗಿ ಸಂಪೂರ್ಣ ಆಹ್ವಾನಿತ ಲೇಖನಗಳಿಂದ ಕೂಡಿರುತ್ತದೆ. ಹಾಗಾಗಿ ಈ ಅಧ್ಯಾಪಕ ಗೆಳೆಯರಿಗೆ ನನ್ನ ಮನವಿ ಇಷ್ಟೇ: ಆಹ್ವಾನಿಸದೆ ಲೇಖನ ಕಳಿಸಬೇಡಿ.

**–ಸಂಪಾದಕ**

**(ಹಿರಿಯ ರಂಗಕರ್ಮಿ ಇಬ್ರಾಹಿಂ ಅಲ್ಕಾಜಿ ಮತ್ತು ಹಿರಿಯ ಸಂಗೀತಗಾರ ಪಂಡಿತ್ ಜಸರಾಜ್ ಅವರ ನಿಧನಕ್ಕಾಗಿ 'ಹೊಸ ಮನುಷ್ಯ' ತನ್ನ ತೀವ್ರ ಸಂತಾಪ ಸೂಚಿಸುತ್ತದೆ–ಸಂ.)**

# ನವಿಲುಗರಿ

## ಹಕ್ಕಿ ಹಿಕ್ಕಿಯ ಹಾಡು



ನೆತ್ತಿ ಕಿವಿ ಮೈ ಕೈ ತುರಿಕೆ ಬಿಟ್ಟರೆ
ತುರಿಸಿಕೊಳ್ಳಲೇಬೇಕು
ಎಂಥ ಧಾವಂತದಲೂ
ಈ ಪುಣ್ಯಾತ್ಮನ ನೆತ್ತಿಯ ಮೇಲೆ
ಎಷ್ಟೊಂದು ಪಕ್ಷಿಗಳು
ಕಚಿಪಿಚಿ ಹೆಜ್ಜೆಗಳು
ಹಿಕ್ಕೆ ಕರಿ ಬಿಳಿ ಚುಕ್ಕಿ
ಹಿಂಸೆಯಾಗುವುದಿಲ್ಲವೇ ಅವನಿಗೆ !
ಮತ್ತು ನನಗೂ
ಹಗಲು ರಾತ್ರಿ ಮಳೆ ಗಾಳಿ
ಪಕ್ಷಿ ಆಶ್ರಯ ತಾಣ
ತೊಳೆಯಲಾದೀತೆ ಹಾಕಿದ ಹಿಕ್ಕೆಗಳ ದಿನ ದಿನ
ಗೌರವದಿ ಹಿಡಿಯಲಾದೀತೆ
ಅಷ್ಟೆತ್ತರಕೆ ಕೊಡೆ?
ಎಲ್ಲಾ ಪ್ರಕೃತಿಯೇ! ಮಣ್ಣು ಕಲ್ಲು

ಅವನ ತಲೆ ಹಕ್ಕಿ ಹಿಕ್ಕಿ ಮತ್ತು ನಾನು



ನೋಡಬಾರದೆಂದರೂ ಪದೇ ಪದೇ
ನನ್ನ ಕಣ್ಣು ಅವನ ತಲೆಯಮೇಲೆ
ತಿರುಗುತ್ತಲೇ ಇದ್ದಾರೆ ಜನ ಸುತ್ತ ಮುತ್ತ
ಆಚೆ ವಿಧಾನ ಸೌಧ ಈಚೆ ವಿಕಾಸ ಸೌಧ
ನಡುವೆ ಗಾಂಧಿಪ್ರತಿಮೆ
ಕೆಳಗೆ ಬಿದ್ದ ಕಸ ಗುಡಿಸಬಹುದು
ಗುಡಿಸಲಾದೀತೇ ಅಷ್ಟು ಎತ್ತರದ ಕಸ?

**–ಬಸವರಾಜ ಹೂಗಾರ**

## ಕೊರೊನಾ

ಮುಂಜಾನೆ ಕಣ್ಣು ಬಿಟ್ಟಾಗ
ಸೀನು ಕೆಮ್ಮುಸಣ್ಣಗೆ ಜ್ವರ
ಬಂದೇ ಬಿಟ್ಟಿತೇ
ನನಗೂ ಅದೇ ಜಡ್ಡು?
ಭಯ

ಒಂದಲ್ಲ ಎರಡೆರಡು ಮುಖಗವಸು
ಕೈ ಕಾಲಿಗೆ ಕವಚ ತೊಟ್ಟು
ಹೊರನಡೆದೆ

ಬಜಾರದಲ್ಲಿ ಯಾರು ಯಾರೋ
ಗುರುತು ಸಿಕ್ಕರೂ
ಸಿಗದವರಂತೆ ಧಾವಂತ

ಸಂಜೆಯ ಒಳಗೆ
ಗೂಡು ಸೇರಿ
ಕೊಕ್ಕು ಅಗಲಿಸಿರುವ ಮರಿಗಳಿಗೆ
ತುತ್ತ ಈಯಬೇಕು

ಇರುವುದೇ ಹಿಡಿ ಕಾಳು
ಅದರಲ್ಲೂ ಸಮಪಾಲು
ಅಕ್ಕಪಕ್ಕದ ಗೂಡುಗಳು
ಆಗಲೇ ಖಾಲಿ

ಅಲ್ಲೀಗ ಮೊಟ್ಟೆಗಳಿಗೆ ಕಾವು ಕೊಡುವವರಿಲ್ಲ
ಮರಿಗಳಿಗೆ ತುತ್ತ ನೀಡುವವರಿಲ್ಲ

ಸಾಗಿದ್ದಾವೆ ಹಾದಿಗುಂಟ
ಅರೆಬರೆದ ಕವಿತೆಗಳ
ಎದೆಗೆ ಅವುಚಿ ಹಿಡಿದು



ಚಿತ್ರಗಳು: ವಿಜಯಶ್ರೀ ಹಾಲಾಡಿ



ಅಲ್ಲಿ
ಸುಂಕದ ಕಟ್ಟೆಯಲ್ಲಿ
ಬಡಿಗೆ ಹಿಡಿದವ
ರೆಕ್ಕೆ ಪುಕ್ಕವ ಕತ್ತರಿಸಿ
ಹಾರಿ ಎಂದಾಗ
ಅವು ತೆವಳುತ್ತವೆ ಗಮ್ಯದೆಡೆಗೆ
ಅಥವಾ ಉಸಿರ ಚೆಲ್ಲುತ್ತವೆ

ನಟ್ಟಿರುಳಿನಲ್ಲಿ
ನನಗೂ ಅದೇ ಯೋಚನೆ
ರೆಕ್ಕೆ ಪುಕ್ಕ ಕತ್ತರಿಸಿ
ನಾನೂ ಕೆಡೆಯಬಹುದೇ
ಅಥವಾ?.......!

ಬೆವೆತು ಹಣ್ಣಾಗಿ
ದೇವರ ಮನೆ ನೋಡಿದರೆ
ಅವರೆಲ್ಲ ಮುಖ ಮುಚ್ಚಿಕೊಂಡಿದ್ದರು!

**–ಪಿ.ಬಿ. ಪ್ರಸನ್ನ**

## ಕೊರೋನ–೨

ನಿನ್ನ ಇರುವಿಕೆ ನನಗಂತಲ್ಲ,
ನಿನ್ನ ನಿಜರೂಪ ನಾಮಸ್ವರೂಪಗಳು
ವೈದ್ಯರು–ವಿಜ್ಞಾನಿಗಳಿಗೆ
ಭವಿಷ್ಯಕಾರರಿಗೆ, ಬ್ರಹ್ಮಾಂಡ ಗುರುವಿಗೆ
ಹಸ್ತ ಸಾಮುದ್ರಿಕನಿಗೇ ಯಾಕೆ?
ಮಾತಾಡುವ ದೇವಾನುದೇವತೆಗಳಿಗೂ ಗೋಚರಿಸುತ್ತಿಲ್ಲ
ಇಲ್ಲಿ ಪ್ರಾರ್ಥನೆ, ನಮಾಜು, ಪೂಜೆ ಪುನಸ್ಕಾರ
ಹೋಮ ಹವನ ನಿಂತೇ ಹೋಗಿವೆ
ಗುಡಿ ಗುಂಡಾರ ಮಸೀದಿ ಮಂದಿರ ಚರ್ಚುಗಳ
ಬಾಗಿಲುಗಳು ಮುಚ್ಚೇ ಹೋಗಿವೆ.

ಸುದ್ದಿ ಹೇಳುವವರಿಗೆ, ವಾರ್ತಾಕಾರರಿಗೆ
ನಿನ್ನದೇ ವಿಷಯ ಬೇರೆಲ್ಲಾ ಗೌಣ,
ಜೀವಂತಿಕೆಯ ಕ್ಷಣಗಳೆಲ್ಲಾ ಭಣ ಭಣ.
ಸದಸ್ಯ, ಶಾಸಕ, ಸಂಸದರೆಲ್ಲಾ ಭೀತಗೊಂಡು
ಅಧಿಕಾರಿ ಕಾರ್ಯದರ್ಶಿಗಳೆಲ್ಲಾ ನಡುಗುತ್ತಿರುವರು.
ಎತ್ತು ಎಮ್ಮೆಗೆ ಹಾಕುವ ಬಾಯಿ ಕುಕ್ಕೆಗಳೇ
ಈಗ ವಿಶೇಷ ಮುಖಾಲಂಕಾರ



ಲಸಿಕೆ ಕಂಡುಹಿಡಿದಿದ್ದೇವೆಂದು
ಗಡ್ಡ ನೀವುತ್ತಾ ದೇಶದೆಲ್ಲೆಡೆ ಪ್ರಚಾರ ಮಾಡುತ್ತಾ
ಜಂಭ ಹೊಡೆದವರು ಕೇಸು ಜಡಿಸಿಕೊಂಡಿಹರು.
ಚಪ್ಪಾಳೆ ಹೊಡೆದು, ಶಂಖ ಊದಿ
ಜಾಗಟೆ ಬಡಿದು ದೀಪ ಹಚ್ಚಿದ ಮೇಲಂತೂ
ಕಿಟ್ಟುಗಳು, ವೆಂಟಿಲೇಟರ್, ರಸಾಯನ
ಪರಿಕರಗಳ ಖರೀದಿ ಭರಾಟೆಯಲ್ಲಿ
ಇಮ್ಮಡಿಯಾಗಿದೆ ಶಕ್ತಿ ಸೌಧದವರ ಆನಂದೋತ್ಸಾಹ

ಮಂದಿಯ ಅಂದಿಗಂದಿನ ಗಂಜಿಗೂ ಎರವಾದೆ
ಎಂದು ಹೋಗುವಿಯೋ ವೈರಾಣುವೇ
ನಿನಗೊಂದು ದೊಡ್ಡ ನಮಸ್ಕಾರ!

**–ಗೋ.ತಿಪ್ಪೇಶ್**



# ಸೆಕ್ಯುಲರಿಸಂ ಎಂಬ 'ಅಧರ್ಮ'

ಧರ್ಮವಿಚಾರ ಪುಟ

**–ಡಿ.ಎಸ್. ನಾಗಭೂಷಣ**



೨೦೨೦ರ ಆಗಸ್ಟ್ ೫ ಆಧುನಿಕ ಭಾರತದ ಇತಿಹಾಸದಲ್ಲಿ ಒಂದು ನಿರ್ಣಾಯಕ ದಿನವಾಗಿ ದಾಖಲಾಗಲಿದೆ. ಅಂದು ಅಯೋಧ್ಯೆಯಲ್ಲಿ ರಾಮಮಂದಿರದ ಭೂಮಿ ಪೂಜೆ ನಡೆಯಿತೆಂದಲ್ಲ. ಅದು ನಮ್ಮ ಸರ್ವೋನ್ನತ ನ್ಯಾಯಾಲಯದ ತೀರ್ಪಿಗೆ–ಅದು ಎಷ್ಟೇ ಚರ್ಚಾರ್ಹವೇ ಆಗಿರಲಿ–ಅನುಸಾರವಾಗಿ ನಡೆಯಿತು. ಆದರೆ ಅದು ದೇಶದ ಪ್ರಧಾನ ಮಂತ್ರಿ ನೇತೃತ್ವದಲ್ಲಿ, ಮುಖ್ಯಮಂತ್ರಿ, ರಾಜ್ಯಪಾಲರುಗಳಲ್ಲದೆ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕರ ಸಹಭಾಗಿತ್ವದಲ್ಲಿ ನಡೆದು, ಅವರು ಜನರಿಂದ ಶ್ರೀರಾಮನಿಗೆ ಜೈಕಾರ ಕೂಗಿಸಿದರು ಎಂಬುದು ಆ ದಿನ ನಿರ್ಣಾಯಕವೆನಿಸಲು ಮುಖ್ಯ ಕಾರಣವೆನ್ನಬಹುದು. ಅಂದು ರಾಷ್ಟ್ರಕ್ಕೆ ಆಧಾರವಾಗಿರುವ ನಮ್ಮ ಸಂವಿಧಾನದ ಮೂಲ ತತ್ವಗಳಲ್ಲಿ ಒಂದಾದ ಸೆಕ್ಯುಲರಿಸಂನ ಮಾರಣಹೋಮವಾಯಿತು ಎಂಬ ಚರ್ಚೆ ರಾಷ್ಟ್ರಾದ್ಯಂತ ದಟ್ಟವಾಗಿ ನಡೆಯುತ್ತಿದೆ. ಅಂದು ರಾಷ್ಟ್ರಧರ್ಮವೆಂಬುದೊಂದಿದ್ದರೆ ಅದಕ್ಕೆ ತೀವ್ರ ಆಘಾತವಾಗಿದ್ದು, ಈ ಚರ್ಚೆಗೆ ಆಧಾರ ಒದಗಿಸಿದೆ. ಆದರೆ ಈ ಚರ್ಚೆ ಇಷ್ಟಕ್ಕೇ ಸೀಮಿತವಾಗದೆ ಈ ಆಘಾತಕ್ಕೆ ಮೂಲ ಕಾರಣವಾದರೂ ಏನು ಎಂಬುದರ ಚರ್ಚೆಗೂ ವಿಸ್ತರಿಸಿಕೊಳ್ಳಬೇಕಿದೆ.

ಹಾಗೆ ವಿಸ್ತರಿಸಿಕೊಂಡಾಗ ಮೊದಲು ಅರಿವಿಗೆ ಬರಬೇಕಾದ ಸಂಗತಿ ಎಂದರೆ, ಈ ಸೆಕ್ಯುಲರಿಸಂ ತತ್ವ ಉಲ್ಲಂಘನೆಯಾಗುತ್ತಿರುವುದು ಬಿಜೆಪಿ ಸರ್ಕಾರಗಳು ಬಂದ ಮೇಲೆ ಮಾತ್ರವಲ್ಲ. ಕೇರಳದ ಕಮ್ಯುನಿಸ್ಟ್ ಸರ್ಕಾರ ಐವತ್ತರ ದಶಕದಲ್ಲೇ ಮುಸಿಂ ಲೀಗ್‌ನ ಓಲೈಕೆಗಾಗಿ ಮುಸ್ಲಿಂ ಬಹುಸಂಖ್ಯಾತ ಮಲಪ್ಪುರಂ ಜಿಲ್ಲೆ ರಚನೆ ಮಾಡಿದಂದಿನಿಂದಲೂ ಸೆಕ್ಯುಲರಿಸಂನ ಮಹಾಪ್ರತಿಪಾದಕರಾಗಿದ್ದ ನೆಹರೂ ಸರ್ಕಾರಗಳೂ ಸೇರಿದಂತೆ ಹೆಚ್ಚೂಕಡಿಮೆ ಎಲ್ಲ ಪಕ್ಷಗಳ ಸರ್ಕಾರಗಳೂ ಈ ಉಲ್ಲಂಘನೆಗಳಲ್ಲಿ ಪಾಲ್ಗೊಂಡಿವೆ. ಈ ಹಲವು ಉಲ್ಲಂಘನೆಗಳ ಇತಿಹಾಸವೇ ಇಂದು ಬಿಜೆಪಿಗೆ ಅದರ ಮಾರಣಹೋಮ ನಡೆಸಲು ಸುಲಭಗೊಳಿಸಿರುವುದು. ಇದೆಲ್ಲದರ ಹಿಂದೆ ಇರುವ ವಾಸ್ತವಾಂಶ ಎಂದರೆ ಭಾರತದ ಜನಜೀವನದ ಜಾಯಮಾನಕ್ಕೆ ಒಗ್ಗದ ಅರ್ಥದ ಸೆಕ್ಯುಲರಿಸಂನ್ನು ನಾವು ಆಧುನಿಕ ರಾಷ್ಟ್ರವನ್ನು ನಿರ್ಮಿಸುವ ಭರದಲ್ಲಿ ಯೂರೋಪ್‌ನಿಂದ ಆಧುನಿಕ ರಾಷ್ಟ್ರದ ಪರಿಕಲ್ಪನೆಯೊಂದಿಗೆ ಆಮದು ಮಾಡಿಕೊಂಡಿರುವುದು. (ಇದೇ ಸಂಚಿಕೆಯಲ್ಲಿನ ಆಶೀಶ್ ನಂದಿ ಅವರ ಸಂದರ್ಶನ ನೋಡಿ.) ಈ ಹಿಂದೆಯೊಮ್ಮೆ ನಾನು ಬರೆದಂತೆ ಈ ಸೆಕ್ಯುಲರಿಸಂ ಎಂಬ ಶಬ್ದಕ್ಕೆ ಸರಿಯಾದ ಭಾರತೀಯ ಭಾಷೆಯ ಶಬ್ದವೊಂದು ನಮಗೆ ಸಿಗದೆ ಹೋಗುವುದಿರಲಿ, ಹೊಸ ಶಬ್ದವೊಂದನ್ನು ಟಂಕಿಸಲೂ ಸಾಧ್ಯವಾಗದಿರುವುದು ಇದಕ್ಕೆ ಸಾಕ್ಷಿ. ಈ ಪ್ರಯತ್ನದಲ್ಲಿ ಜಾತ್ಯತೀತತೆ, ಧರ್ಮ ನಿರಪೇಕ್ಷತೆ, ಸರ್ವಧರ್ಮ ಸಮಭಾವ ಇತ್ಯಾದಿ 'ಅನುವಾದ'ಗಳು ಕೇವಲ ಸಂದರ್ಭಗಳಿಗೆ ತಕ್ಕಂತೆ ಬಳಸಲಾಗುತ್ತಿರುವ ಶಬ್ದಗಳು ಸಮಯಸಾಧಕ ರಾಜಕೀಯ ಸಾಧನಗಳಾಗಿ ಕಾಣುತ್ತಿವೆಯೇ ಹೊರತು ಸೆಕ್ಯುಲರಿಸಂ ಶಬ್ದ ಸೂಚಿಸುವುದೆಂದು ಹೇಳಲಾಗುವ ಪ್ರಭುತ್ವವನ್ನು ಧರ್ಮದಿಂದ 'ಪ್ರತ್ಯೇಕಿಸ'ಬೇಕೆಂಬ ನಿಖರ ಅರ್ಥ ಹೊರಡಿಸುವುದಿಲ್ಲ. ಸಂವಿಧಾನದ ಅಡಿಯಲ್ಲಿ ನಮ್ಮ ರಾಷ್ಟ್ರಪತಿಗಳಿಂದ ಹಿಡಿದು ಸರ್ಕಾರಗಳ ಕಿರಿಯ ಅಧಿಕಾರಿಗಳವರೆಗೆ ಅಧಿಕಾರ ಸ್ವೀಕರಿಸುವ ಔಪಚಾರಿಕ ಪ್ರಮಾಣ ವಚನದಲ್ಲಿ 'ದೇವರ ಹೆಸರಿನಲ್ಲಿ...' (ಕೆಲವೊಮ್ಮೆ ಮನೆದೇವರ ಹೆಸರಿನಲ್ಲಿಯೂ!) ಎಂಬ ಶಬ್ದಗಳಿಗೆ ಅವಕಾಶವಿರುವಾಗ ನೀವು ಎಂತಹ ಸೆಕ್ಯುಲರಿಸಮ್ಮನ್ನು ಇಲ್ಲಿ ಜಾರಿಗೆ ತರುತ್ತೀರಿ? ಸೆಕ್ಯುಲರಿಸಂ ಅಂದರೆ ನಾಸ್ತಿಕವಾದವಲ್ಲ ತಾನೆ?

ಈ ಗೊಂದಲದ ಹಿನ್ನೆಲೆಯಲ್ಲೇ ನಮ್ಮ ಸಂವಿಧಾನ ರಕ್ಷಣೆಯ ಅಂತಿಮ ಜವಾಬ್ದಾರಿ ಹೊಂದಿರುವ ನಮ್ಮ ಸರ್ವೋನ್ನತ ನ್ಯಾಯಾಲಯವೂ ಅಯೋಧ್ಯಾ ನಿವೇಶನ ಹಕ್ಕುದಾರಿಕೆ ವಿವಾದವನ್ನು ಇತ್ಯರ್ಥಪಡಿಸಲು ಹೋಗಿ ರಾಮಮಂದಿರ ಕಟ್ಟಲು ಟ್ರಸ್ಟ್‌ವೊಂದನ್ನು ರಚಿಸುವಂತೆ ಸರ್ಕಾರಕ್ಕೆ ಸೂಚಿಸುವಂತಹ ತೀರ್ಪು ನೀಡುವ ಒತ್ತಡಕ್ಕೆ ಒಳಗಾಗಿದೆ. ಜೊತೆಗೇ ಬಾಬ್ರಿ ಮಸೀದಿಯನ್ನು ಉರುಳಿಸಿದ್ದು ಒಂದು ಘೋರ ಅಪರಾಧ ಮತ್ತು ಇದರ ವಿಚಾರಣೆ ಕ್ಷಿಪ್ರವಾಗಿ ನಡೆದು ಅಪರಾಧಿಗಳಿಗೆ ಶಿಕ್ಷೆಯಾಗಬೇಕೆಂದು ಹೇಳಲೂ ಅದು ಮರೆತಿಲ್ಲ. ಅಷ್ಟೇ ಅಲ್ಲ, ಮುಂದುವರೆದ ಅದು ವ್ಯಾಜ್ಯದ ಮುಸ್ಲಿಂ ಸಮುದಾಯದ ಕಕ್ಷಿದಾರಿಗೆ ಅವರು ಕಳಕೊಂಡ ಮಸೀದಿಗೆ ಪರಿಹಾರವಾಗಿ ಅಯೋಧ್ಯೆಯಲ್ಲೇ ಒಂದು ಪರ್ಯಾಯ ನಿವೇಶನ ನೀಡಬೇಕೆಂದೂ ಸೂಚಿಸಿದೆ. ಸಾಮಾನ್ಯ ನ್ಯಾಯ ದೃಷ್ಟಿಗೆ ತದ್ವಿರುದ್ಧ ಸೂಚನೆಗಳಂತೆ ಕಾಣುವ ಈ ಎಲ್ಲ ಸಾಂವಿಧಾನಿಕ ವೈರುಧ್ಯಗಳನ್ನು ಅರ್ಥ ಮಾಡಿಕೊಳ್ಳುವುದು ಹೇಗೆ? ಅದಕ್ಕೆ ಹೆಚ್ಚು ಕಷ್ಟ ಬೇಡ ಎಂದು ಸರ್ಕಾರ ಈ ತೀರ್ಪಿನ ನೇತೃತ್ವ ವಹಿಸಿ ನಿವೃತ್ತರಾದ ಮುಖ್ಯ ನ್ಯಾಯ್ಯಾಧೀಶರಿಗೆ ರಾಜ್ಯಸಭೆಯ ಸದಸ್ಯತ್ವವನ್ನು ದಯಪಾಲಿಸಿ ಕೊನೆಯ ನಗೆ ನಕ್ಕಿದೆ! ಕ್ಷಮಿಸಿ, ಕೊನೆಯ ನಗೆ ನಕ್ಕಿರುವವರು ಆ ಸದಸ್ಯತ್ವವನ್ನು ಯಾವ ಎಗ್ಗೂ ಇಲ್ಲದೆ ಒಪ್ಪಿಕೊಂಡ ಆ ನಿವೃತ್ತ ನ್ಯಾಯಾಧೀಶರು!

ಈ ಎಲ್ಲ ಗೊಂದಲಗಳಾಚೆ ನಿಂತು ಯೋಚಿಸಿದರೆ ಒಂದು ಪ್ರಶ್ನೆ ನಮ್ಮ ಮುಖದೆದುರೇ ಬಂದು ನಿಲ್ಲುತ್ತದೆ. ಈ ದೇಶದ ಜನರ ಸ್ಮೃತಿಕೋಶದಲ್ಲಿ ಹಾಸುಹೊಕ್ಕಾಗಿರುವ ಶ್ರೀರಾಮನಿಗೆ ಅವನ ಊರಾದ ಅಯೋಧ್ಯೆಯಲ್ಲಿ ಒಂದು ಐತಿಹಾಸಿಕ ಸ್ಮಾರಕವೋ, ಮಂದಿರವೋ ಇಲ್ಲದೆ ಅಲ್ಲೊಂದು ಬೃಹತ್ ಮಸೀದಿ ಇದ್ದುದನ್ನು ಅರ್ಥ ಮಾಡಿಕೊಳ್ಳುವುದು ಹೇಗೆ? 'ಈಶ್ವರ ಅಲ್ಲಾ ತೇರೇ ನಾಮ್' ಎಂದು ನಂಬುವವರನ್ನೂ ಕಾಡುವ ಪ್ರಶ್ನೆ ಇದು. ಹಾಗಾಗಿ ಸೆಕ್ಯುಲರಿಸಂ ಎಂದರೆ ಖಂಡಿತ ನಾಸ್ತಿಕತೆ ಅಲ್ಲದಿದ್ದರೆ, ಅದರ ವಿವೇಕ ಬಾಬ್ರಿ ಮಸೀದಿಯ ಕಕ್ಷಿದಾರರನ್ನು ಬಹು ಹಿಂದೆಯೇ ಆ ಜಾಗವನ್ನು ತಾವೇ ತಾವಾಗಿ ರಾಮಮಂದಿರ ಕಟ್ಟಬಯಸುವವರಿಗೆ ಬಿಟ್ಟುಕೊಡಲು ಪ್ರೇರೇಪಿಸಬೇಕಿತ್ತು. ಆದರೆ ನಾವು ಆಧುನಿಕ ಆಡಳಿತ ವ್ಯವಸ್ಥೆ ರೂಪಿಸುವ ಹೆಸರಿನಲ್ಲಿ ಚಲಾವಣೆಗೆ ತಂದಿದ್ದ ಸೆಕ್ಯುಲರಿಸಮ್ಮಿನ ರಾಜಕೀಯ ಸಂಕಥನ ಆಂತಹ ವಾತಾವರಣಕ್ಕೆ ಅವಕಾಶವನ್ನೇ ನೀಡಲಿಲ್ಲ.(ಅವರು ಹಾಗೆ ಮಾಡಲು ಸಿದ್ದರಿದ್ದರೆಂದೂ, ಆದರೆ ಕೆಲ 'ಸೆಕ್ಯುಲರ್' ಚರಿತ್ರಕಾರರು ಅದು 'ಸೆಕ್ಯುಲರಿಸಂ'ಗೆ ದ್ರೋಹ ಬಗೆದಂತಾಗುವುದೆಂದು ತಡೆದರೆಂಬ ವರದಿಗಳೂ ಇವೆ.) ಈಗ ಅದಕ್ಕಾಗಿ ದೊಡ್ಡ ಬೆಲೆ ತೆರಬೇಕಾಗಿದೆ. ದೇಶದ ಅತ್ಯುಚ್ಚ ನ್ಯಾಯಾಲಯ ಸಂವಿಧಾನದ ಬಹು ಅಪರೂಪದ ಸಂದರ್ಭಗಳಲ್ಲಿ ಮಾತ್ರ ಬಳಸಬಹುದಾದ ಒಂದು ವಿಶೇಷಾಧಿಕಾರ ಬಳಸಿ ಮಂದಿರ ನಿರ್ಮಾಣದ ವ್ಯವಸ್ಥೆಯ(ಟ್ರಸ್ಟ್‌ನ) ಆದೇಶ ನೀಡುವಂತಾಗಿದೆ ಮತ್ತು ಇದು ಸೃಷ್ಟಿಸಿದ ವಾತಾವರಣ ದೇಶದ ಪ್ರಧಾನ ಮಂತ್ರಿ ಅದರ ಭೂಮಿ ಪೂಜೆ ನಡೆಸಿ ಶ್ರೀರಾಮನಿಗೆ ಜಯಕಾರ ಕೂಗುವ ರಾಜಕಾರಣ ಮಾಡುವ ಧೈರ್ಯ ಮತ್ತು ಸ್ಥೈರ್ಯಗಳೆರಡನ್ನೂ ಪ್ರದಾನ ಮಾಡಿದೆ.. ಅಂದರೆ ಅದಕ್ಕೆ ಬಹು ಜನರ ಸಮ್ಮತಿಯೂ ಸಿಕ್ಕಿದೆ. ಇಂದು ಕಾಂಗ್ರೆಸ್ ನಾಯಕರೂ ಇದರ ಬಗ್ಗೆ ಚಕಾರವೆತ್ತದೆ, ಇಂತಹ ಜನಸಮ್ಮತಿಯಲ್ಲಿ ಪಾಲು ಪಡೆಯಲು ಹಾತೊರೆಯುತ್ತಿರುವುದು ಅದರ ಪಾಪಪ್ರಜ್ಞೆಯ ಪ್ರತೀಕವೇ ಆಗಿದೆ. ಹಾಗೇ ಇಂದು ಈ ಸೆಕ್ಯುಲರಿಸಂ ಅಪಹಾಸ್ಯಕ್ಕೀಡಾಗುತ್ತಿರುವುದರ ಬಗ್ಗೆ ಎದೆ ಎದೆ ಬಡಿದುಕೊಂಡು ದುಃಖಿಸುತ್ತಿರುವವರು ಅಸಾವುದ್ದೀನ ಒವೈಸಿಯಂತಹ, ಧರ್ಮವೆಂದರೆ ಅದರ ಪುರೋಹಿತಶಾಹಿ ಮಾತ್ರ ಮುಟ್ಟುವಂಥದ್ದು ಎಂದು ನಂಬಿರುವ ಮೂಲಭೂತವಾದಿ ರಾಜಕಾರಣಿಗಳು ಮಾತ್ರ. ಹಾಗೆ ನೋಡಿದರೆ ಈತನೇ ಉತ್ತಮ. ಇತರರು ತಮ್ಮ ದು:ಖವನ್ನು ವೋಟು ಕಳೆದುಕೊಳ್ಳುವ ಆತಂಕದಿಂದ ಹತ್ತಿಕ್ಕಿ ಒಳಗೊಳಗೇ ನುಲಿಯುತ್ತಿರುವಂತಿದೆ.

ನಿಜವಾದ ಸೆಕ್ಯುಲರಿಸಂ ನಮ್ಮ ಜನಜೀವನದ ನರನಾಡಿಗಳಲ್ಲೇ ಹಾಸುಹೊಕ್ಕಾಗಿದೆ. ಅಥವಾ ಸರಿಯಾಗಿ ಹೇಳುವುದಾದದರೆ ಹಾಸುಹೊಕ್ಕಾಗಿತ್ತು. ಆದರೆ ಸೆಕ್ಯುಲರಿಸಂನ ಹೆಸರಿನಲ್ಲಿ ಮಾಡಿದ ವೋಟಿನ ರಾಜಕಾರಣ ಈ ಪರಂಪರೆಯನ್ನೇ ಇಂದು ನಾಶ ಮಾಡಿ ಕೂರಿಸಿದೆ. ಬಾಬ್ರಿ ಮಸೀದಿ ಪ್ರಶ್ನೆಯನ್ನು ಅಯೋಧ್ಯೆಯ ಜನರಿಗೇ ಮಾತಾಡಿ ಪರಿಹರಿಸಿಕೊಳ್ಳಲು ಬಿಡುವುದೇ ನಿಜವಾದ ಸೆಕ್ಯುಲರಿಸಂ ಆಗಿತ್ತು. ಆಗ ರಥಯಾತ್ರೆ, ಕೋಮು ದಂಗೆ, ಬಹುಸಂಖ್ಯಾತರ ಕೋಮು ಉನ್ಮಾದ, ಮೋದಿ ನಾಯಕತ್ವದ ಉದಯ ಇವಾವುವೂ ಇರುತ್ತಿರಲಿಲ್ಲ. ಹಾಗಾಗಿ ಎಲ್ಲಕ್ಕಿಂತ ಮುಖ್ಯವಾಗಿ ಬಹು ಆಯಾಮದ ಸೀತಾರಾಮ ಏಕಾಯಾಮದ ಕೋದಂಡರಾಮನಾಗಿ ಪರಿವರ್ತಿತನಾಗುತ್ತಿರಲಿಲ್ಲ. ಇದರಿಂದಾಗಿ ಆಗಿರುವ ಹಾನಿಯನ್ನು ಸರಿಪಡಿಸಲು ಇರುವುದು ಒಂದೇ ಮಾರ್ಗ. ಅಯೋಧ್ಯೆಯಲ್ಲಿಯೇ ದೂರದಲ್ಲಿ ಸರ್ಕಾರ ಮಂಜೂರು ಮಾಡಿರುವ ಬದಲಿ ನಿವೇಶನದಲ್ಲಿ ಕಟ್ಟಲಾಗುವ ಮಸೀದಿ ನಿರ್ಮಾಣದ ಆರಂಭೋತ್ಸವಕ್ಕೆ ಪ್ರಧಾನಿ ಮೋದಿಯವರು ಹಾಜರಾಗಿ ಅಲ್ಲಾಹುವಿಗೆ ಪ್ರಾರ್ಥನೆ ಸಲ್ಲಿಸುವುದು. ಇದಕ್ಕೆ ಅಪಾರ ರಾಜಕೀಯ ಧೈರ್ಯವೂ, ಸೀಮಾತೀತ ರಾಜಕೀಯ ಮುತ್ಸದ್ದಿತನವೂ, ರಾಮ–ರಹೀಮರು ಬೇರೆಯಲ್ಲ ಎಂಬ ಅನುಪಮ ಧಾರ್ಮಿಕ ಅರಿವೂ ಬೇಕಾಗುತ್ತದೆ. ಇಂತಹ ಒಂದು ಐತಿಹಾಸಿಕ ಹೆಜ್ಜೆ ಇಡಬಲ್ಲ ಮಹಾನಾಯಕತ್ವದ ಛಾತಿಯನ್ನು ಮೋದಿಯವರು ಪ್ರದರ್ಶಿಸುವರೇ?

ಇಲ್ಲಿಯೇ ಹೇಳಬೇಕಾದ ಒಂದು ಮುಖ್ಯ ಮಾತೆಂದರೆ, ನಿಜವಾದ ಸೆಕ್ಯುಲರಿಸಂ

೧೮ನೇ ಪುಟಕ್ಕೆ)

# ಸಾಹಿತ್ಯ, ಸಂಸ್ಕೃತಿ, ಕ್ರೀಡೆ ಇತ್ಯಾದಿ ಕೆಲ ಚಿಟಿ ಟಿಪ್ಪಣಿಗಳು

## ಎಚ್ ವಿಶ್ವನಾಥ್ ಎಂಬ ಡಿಯೂರಪ್ಪನವರ ಆಸ್ಥಾನ ಸಾಹಿತಿ



**ಈ**ಗ ವೃದ್ಧ ರಾಜಕಾರಣಿ ಎನಿಸಿರುವ ರಾಜ್ಯದ ಹಿರಿಯ ರಾಜಕಾರಣಿ ಮತ್ತು ಇದೀಗ ಪಕ್ಷಾಂತರ ಚಾತುರ್ಯಕ್ಕೆ ಹೆಸರಾಗಿರುವ ಎಚ್. ವಿಶ್ವನಾಥ್ ಅವರನ್ನು ಯಡಿಯೂರಪ್ಪ ಸರ್ಕಾರ ಸಾಹಿತಿಗಳ ಕೋಟಾದಿಂದ ವಿಧಾನ ಪರಿಷತ್‌ಗೆ ನಾಮಕರಣ ಮಾಡಿದ್ದಾರೆ. ಈ ಬಗ್ಗೆ ಸಾಹಿತಿಗಳ ವಲಯದಲ್ಲಿ ಅಲ್ಲ, ರಾಜಕೀಯ ವಲಯಗಳಲ್ಲಿ ಚರ್ಚೆ ನಡೆದಿದೆ. ನಡೆದು ಈಗ ತೆಪ್ಪಗಾಗಿದೆ! ಚರ್ಚೆ ಆರಂಭವಾಗಿ ಈಗ ತೆಪ್ಪಗಾಗಿರಲು ಕಾರಣ ಈ ಬಗ್ಗೆ ದನಿ ಎತ್ತುವ ಹಕ್ಕುಳ್ಳ ಸಾಹಿತಿಗಳಾರೂ ಮಾತಾಡಲಿಲ್ಲ. ಏಕೆಂದರೆ ಈಗ ಸಾಹಿತಿಗಳೆಂದರೆ ಯಾರು ಎಂಬ ಪ್ರಶ್ನೆಯೇ ಚರ್ಚಾರ್ಹವಾಗಿದ್ದು, ವಿಶ್ವನಾಥ್ ಕೂಡ 'ಹಳ್ಳಿಯ ಹಕ್ಕಿ' ಎಂಬ ಒಂದು ಪುಸ್ತಕ ಬರೆದು ಸಾಹಿತಿಗಳ ಮಧ್ಯೆಯೂ 'ಪ್ರಸಿದ್ಧ'ರಾಗಿದ್ದಾರೆ. ಆದರೆ ಅದು ಸಾಹಿತ್ಯ ಕೃತಿಯೋ, ಹಾಗಿದ್ದರೆ ಅದು ಎಷ್ಟರಮಟ್ಟಿಗಿನ ಸಾಹಿತ್ಯ ಕೃತಿ ಅಥವಾ ಒಂದು ಪುಸ್ತಕ ಬರೆದವರೆಲ್ಲ ಸಾಹಿತಿಗಳ ಕೋಟಾದಿಂದ ವಿಧಾನ ಪರಿಷತ್ತಿಗೆ ಆಯ್ಕೆಗೆ ಅರ್ಹರಾಗುವರೋ ಎಂಬ ಚರ್ಚೆಗೆ ಯಾರಿಗೂ ಉತ್ಸಾಹವಿಲ್ಲ.

ಕಾರಣ, ಇಂತಹ ಪ್ರಶ್ನೆಗಳು ಮತ್ತು ಚರ್ಚೆ ಹಾಸ್ಯಾಸ್ಪದವೆನಿಸುಷ್ಟು ಪರಿಸ್ಥಿತಿಯನ್ನು ನಮ್ಮ ರಾಜಕಾರಣಿಗಳು ಮತ್ತು ಸಾಹಿತಿಗಳು ಸೇರಿ ಹದಗೆಡಿಸಿದ್ದಾರೆ. . ಮೊನ್ನೆ ಯಾವುದೋ ಆಹ್ವಾನಪತ್ರಿಕೆಯಲ್ಲಿ ಪದ್ಮಶ್ರೀ ದೊಡ್ಡರಂಗೇಗೌಡ ಎಂಬ ಸಂಬೋಧನೆಯನ್ನು ಓದಿದಾಗ ಮನಸ್ಸು ಜಿಗುಪ್ಸೆಯಿಂದ ತುಂಬಿ ಹೋಗಲೂ ಇದೆ ಕಾರಣವಾಗಿತ್ತು,

ನಮ್ಮ ರಾಜಕಾರಣ ಸಾಹಿತ್ಯ ಸಂಸ್ಕೃತಿಗಳ ಗಂಧ-ಗಾಳಿ ಇಲ್ಲದ ಆಡೊಂಬಲವಾಗುತ್ತಿದ್ದಂತೆ ಸಾಹಿತಿಗಳ ಮಧ್ಯೆ ಪುಢಾರಿಗಳು ಮೇಲೆದ್ದು ಅವರು ಹೇಳಿದ್ದೇ ಸಾಹಿತ್ಯವೆನಿಸತೊಡಗಿದ್ದು ಸಹಜ. ಕಳೆದ ಹತ್ತು ಹದಿನೈದು ವರ್ಷಗಳಲ್ಲಿ ನಮ್ಮ ರಾಜಕೀಯ ಪಕ್ಷಗಳು ಸಾಹಿತಿಗಳೆಂದು ಗುರುತಿಸಿ ವಿಧಾನ ಪರಿಷತ್ತಿಗೋ, ರಾಜ್ಯ ಸಭೆಗೋ ಕಳಿಸಿದ ಹೆಸರುಗಳನ್ನು ನೆನಪಿಸಿಕೊಳ್ಳಿ ಇದು ನಿಮಗೆ ಅರ್ಥವಾಗುತ್ತದೆ, ಕಳೆದ ಸರ್ಕಾರದ ಅವಧಿಯಲ್ಲಿ (ಸಿದ್ಧರಾಮಯ್ಯನವರು ಸಾಹಿತಿಗಳ ಕೋಟಾವನ್ನೂ ತಮಗೆ ಬೇಕಾದ ರಾಜಕಾರಣಿಯನ್ನು ನಾಮನಿರ್ದೇಶನ ಮಾಡಿ ತುಂಬಿದರು. ಅದನ್ನು ಸಾಹಿತಿಗಳಾರೂ ಪ್ರಶ್ನಿಸಲಿಲ್ಲ. ಏಕೆಂದರೆ ಅವರಿಗಾಗಿ ಸರ್ಕಾರಿ ಕಾರು-ಮನೆ-ಆಳು ಕಾಳುಗಳ ಬೇರೆ ಹುದ್ದೆಗಳ ಭರವಸೆಯನ್ನಿತ್ತಿದ್ದರು.. ಅದು ಕೆಲವರಿಗೆ ಕೆಲಕಾಲ ಸಿಕ್ಕಿಯೂ ಸಿಕ್ಕಿತು. ಇಂಥವರ ಮಧ್ಯೆ ವಿಶ್ವನಾಥರೂ ಸಾಹಿತಿ ಎನಿಸಿಕೊಳ್ಳುವುದರಲ್ಲಿ ಆಶ್ಚರ್ಯವೇನು?

ನಿಜವಾದ ಸಾಹಿತ್ಯ ಎಂದಿಗೂ ಪ್ರಭುತ್ವದ ವಿರುದ್ಧವೇ ಎಂಬುದು ಎಲ್ಲ ಕಾಲದ ಸತ್ಯವಿರಬಹುದು.

## ದೋನಿ ಎಂಬ 'ಕ್ಯಾಪ್ಟನ್ನ್ ಕೂಲ್'



**ದೋ**ನಿ ಎಂದೇ ಭಾರತದ ಕ್ರಿಕೆಟ್ ಪ್ರೇಮಿಗಳ ಮಧ್ಯೆ ಜನಪ್ರಿಯರಾಗಿದ್ದ ಮಹೇಂದ್ರಸಿಂಗ್ ದೋನಿ ಈಗ ಏಕದಿನ ಮತ್ತು ಟಿ-೨೦ ಕ್ರಿಕೆಟ್‌ನಿಂಲೂ ನಿವೃತ್ತಿ ಘೋಷಿಸಿ ಎಲ್ಲ ಪ್ರಕಾರಗಳ ಅಂತಾರಾಷ್ಟ್ರೀಯ ಕ್ರಿಕೆಟ್‌ನಿಂದಲೂ ದೂರವಿರಲು ನಿರ್ಧರಿಸಿದ್ದಾರೆ. ಇವರ ಈ ನಿವೃತ್ತಿ ಐಪಿಎಲ್ ಪಂದ್ಯಾವಳಿಗೆ ಅನ್ವಯವಾಗುವುದಿಲ್ಲವೆಂಬುದು ಅವರ ಆಟದ ವೈಭವವನ್ನು ಜನ ಇನ್ನಷ್ಟು ಕಾಲ ನೋಡಲು ಅವಕಾಶವಿದ್ದರೂ, ಅದಕ್ಕೆ ರುಚಿ ಇರಲಾರದು.

ಕಳೆದ ವಿಶ್ವ ಕಪ್ ಹೊತ್ತಿಗೇ ಅವರು ತಮ್ಮ ಬ್ಯಾಟಿಂಗ್ ಸಾಮರ್ಥ್ಯ ಕಳೆದುಕೊಂಡಿದ್ದು ಸಾಬೀತಾಗಿ ಆಗಲೇ ಅವರು ಈ ನಿವೃತ್ತಿ ಘೋಷಿಸಿದ್ದರೆ ಅವರ ವ್ಯಕ್ತಿತ್ವದ ಶೋಭೆ ಇನ್ನಷ್ಟು ಹೆಚ್ಚಿರುತ್ತಿತ್ತು ಎಂಬುದು ಕೆಲ ಅವರ ಅಭಿಮಾನಿಗ:ಳದ್ದೇ ಅಭಿಪ್ರಾಯವಾಗಿದ್ದರೂ ಅದರಿಂದ ಅವರು ಆಡಿರುವ ಕ್ರಿಕೆಟ್‌ನ ವೈಭವ ಮತ್ತು ಘನತೆ ಒಂದಿಷ್ಟು ಹೆಚ್ಚೂ ಆಗುತ್ತಿರಲಿಲ್ಲ; ಕಡಿಮೆಯೂ ಆಗುತ್ತಿರಲಿಲ್ಲ ಎಂಬುದನ್ನೂ ಅವರು ಒಪ್ಪಿಯಾರು. ಏಕೆಂದರೆ ಟೆಸ್ಟ್, ಏಕ ದಿನ ಮತ್ತು ಟಿ-೨೦ ಕ್ರಿಕೆಟ್ ಈ ಮೂರೂ ಪ್ರಕಾರಗಳಲ್ಲಿಯೂ ಅವರು ತಮ್ಮ ಮಾಂತ್ರಿಕ ಬ್ಯಾಟಿಂಗ್‌ನ ಮತ್ತು ಪ್ರಬುದ್ಧ ನಾಯಕತ್ವದ ತುತ್ತತುದಿಯ ಸಾಮರ್ಥ್ಯವನ್ನು ಪ್ರದರ್ಶಿಸಿ ನಮಗೆ ನಿಜವಾದ ಕ್ರಿಕೆಟ್ ರೋಮಾಂಚನದ ಸುಖ ನೀಡಿದ್ದರು. ೨೦೦೭ರಲ್ಲಿ ಮೊದಲ ಟಿ-೨೦ ವಿಶ್ವ ಕಪ್ ಪಂದ್ಯಾವಳಿಯ ಪಾಕಿಸ್ತಾನದ ವಿರುದ್ಧದ ಅಂತಿಮ ಪಂದ್ಯದಲ್ಲಿ ಕೊನೆಯ ಓವರ್ ಹೊತ್ತಿಗೆ ಪಾಕಿಸ್ತಾನ ಗೆಲುವಿನ ಅಂಚಿನಲ್ಲಿದ್ದಾಗ ಎಲ್ಲರ ನಿರೀಕ್ಷೆಗೆ ವಿರುದ್ಧವಾಗಿ ತನ್ನದೇ ಲೆಕ್ಕಾಚಾರದಲ್ಲಿ ಜೋಗೀಂದರ್ ಶರ್ಮ ಎಂಬ ಅಪ್ರಸಿದ್ಧ ಬೌಲರ್‌ಗೆ ಚೆಂಡು ಕೊಟ್ಟು ಅದಕ್ಕೆ ತಕತೆ ಫೀಲ್ಡಿಂಗ್ ಪುನಾರಚಿಸಿ ಭಾರತವನ್ನು ಗೆಲ್ಲಿಸಿದ ಮತ್ತು ೨೦೧೧ರ ಏಕ ದಿನ ವಿಶ್ವಕಪ್ ಅಂತಿಮ ಪಂದ್ಯದಲ್ಲಿ ಶ್ರೀಲಂಕಾದ ವಿರುದ್ಧ ಕೊನೆಯ ಚೆಂಡಿನಲ್ಲಿ ತನ್ನ ವಿಶಿಷ್ಟ ಹೆಲಿಕಾಪ್ಟರ್ ಹೊಡೆತದ ಮೂಲಕ ೨೮ ವರ್ಷಗಳ ನಂತರ ಭಾರತಕ್ಕೆ ವಿಶ್ವ ಕಪ್ ಗೆದ್ದುಕೊಟ್ಟ ಕ್ಷಣಗಳು ದೋನಿಯ ನಾಯಕತ್ವ ಮತ್ತು ಬ್ಯಾಟಿಂಗ್ ಮೋಡಿಗೆ ಸಾಕ್ಷಿಯಾಗಿ ಭಾರತದ ಕ್ರಿಕೆಟ್ ಇತಿಹಾಸದ ಪುಟಗಳಲ್ಲಿ ಸ್ಥಾಯಿಯಾಗಿ ನಿಲ್ಲುವುವು.

'ಕ್ಯಾಪ್ಟನ್ ಕೂಲ್' ಎಂದೇ ಹೆಸರಾಗಿದ್ದ ಎಂ.ಎಸ್. ಅವರ ಪ್ರಿಯವಾದ ಶಬ್ದ 'ಪ್ರಕ್ರಿಯೆ'(Process). ಬೌದ್ಧ ಮೀಮಾಂಸೆಯ ಈ ಶಬ್ದ ಎಲ್ಲವನ್ನೂ ಅನಂತ ಪ್ರವಾಹದ ಒಂದು ಭಾಗವಾಗಿ ನೋಡುವ ವ್ಯವಧಾನವನ್ನೂ, ನಮ್ರತೆಯನ್ನೂ ಸೂಚಿಸುತ್ತದೆ. ರಾಂಚಿ ಎಂಬ ಪುಟ್ಟ ನಗರದಲ್ಲಿ ಬೆಳೆದ ಈ ಮಾಜಿ ರೈಲ್ವೇ ಟಿಕೆಟ್ ತಪಾಸಣಾಕಾರ ತನ್ನ ಆಟ ಮತ್ತು ನಾಯಕತ್ವದುದ್ದಕ್ಕೂ ಪ್ರದರ್ಶಿಸಿದ್ದು ಈ ವ್ಯವಧಾನ ಮತ್ತು ನಮ್ರತೆಯನ್ನೇ. ಹಾಗಾಗಿಯೆ ಅವರ ಆಟದ ವೈಭವಕ್ಕೊಂದು ಘನತೆ ಇತ್ತು. ಭಾರತದ ಕ್ರಿಕೆಟ್ ಇತಿಹಾಸದಲ್ಲಿ ನಾಯಕನಾಗಿ ಕಪಿಲ್‌ದೇವ್ ಜೊತೆ ಸ್ಥಾನ ಹಂಚಿಕೊಳ್ಳಬಲ್ಲವರು ಇವರೊಬ್ಬರೇ.

## ಮಹೇಶ್ವರಪ್ಪ ಎಂಬ ವೃದ್ಧ ಸೌಂದರ್ಯ



**ನ**ಮ್ಮ ಜೀವನದಲ್ಲಿ ಅನೇಕರು ಬಂದು ಹೋಗಿರುತ್ತಾರೆ. ಅವರಲ್ಲಿ ಬಹಳ ಜನದ್ದೇನೂ ದೊಡ್ಡ ಪಾತ್ರವಿರುವುದಿಲ್ಲ. ಆದರೂ ನಮ್ಮ ಮನಸ್ಸಿನ ಒಂದು ಮೂಲೆಯಲ್ಲಿ ಅವರು ತಮ್ಮದೊಂದು ಹಸ್ತಾಕ್ಷರ ಮೂಡಿಸಿ ಹೋಗಿರುತ್ತಾರೆ. ಅಂಥವರ ಸಾವಿನ ಸುದ್ದಿ ಬಂದಾಗ ಜೀವ ನಮಗೆ ಗೊತ್ತಾಗದಂತೆ ಜಿನುಗಿ ಕಣ್ಣುಗಳು ತಂತಾನೇ ಒದ್ದೆಯಾಗುತ್ತವೆ. ಕೆಲ ದಿನಗಳ ಹಿಂದೆ ಚಿತ್ರದುರ್ಗದಿಂದ ಷರೀಫಾಬಿಯುವರು ಮಹೇಶ್ವರಪ್ಪನವರ ಸಾವಿನ ಸುದ್ದಿ ತಲುಪಿಸಿದಾಗ ನನಗಾದ ಅನುಭವ ಇದೇ ತೆರನದ್ದು.ನಾನು ಚಿತ್ರದುರ್ಗ ಆಕಾಶವಾಣಿಯ ನಿರ್ದೇಶಕನಾಗಿದ್ದಾಗ ಪರಿಚಯವಾದ ಈ ನಿವೃತ್ತ ಕನ್ನಡ ಅಧ್ಯಾಪಕರು ಎಪ್ಪತ್ತನ್ನು ದಾಟಿದ್ದರೂ ಹಸುಮಗುವಿನ ಮುಗ್ಧತೆ ಉಳಿಸಿಕೊಂಡಿದ್ದವರು.

ನಾನು ಆಕಾಶವಾಣಿ ಕೇಂದ್ರದ ಕೇಳುಗರ ವೇದಿಕೆ ಅಥವಾ ಒಕ್ಕೂಟ ಮಾಡಿದಾಗ ಅದರ ಪದಾಧಿಕಾರಿಗಳಲ್ಲಿ ಒಬ್ಬರಾಗಿ ನನ್ನೆಲ್ಲ ಚಟುವಟಿಕೆಗಳಲ್ಲಿ ಸದಾ ಹಸನ್ಮುಖರಾಗಿ ನನ್ನೊಂದಿಗೆ ನಿಂತ ಈ ಹಿರಿಯವರು, ಹಿರಿತನದ ಸರಳ ಸೌಂದರ್ಯಕ್ಕೆ ಇನ್ನೊಂದು ಹೆಸರಿನಂತಿದ್ದರು. ಆ ಗುಣದ ಮೂಲಕ ಇಂಥವರು ನಮ್ಮ ಬಾಳಿಗೆ ಏನೆಂದು ಹೇಳಲಾಗದ ಸವಿ ಸ್ಪರ್ಶವೊಂದನ್ನು ನೀಡಿಬಿಟ್ಟಿರುತ್ತಾರೆ. ನಾವು ಅವರ ಮನೆಯಲ್ಲಿ 'ಬಾ ಬಾ ಬಾನುಲಿ' ಕಾರ್ಯಕ್ರಮ ಏರ್ಪಡಿಸಿದಾಗ ಅವರ ಇಡೀ ಕುಟುಂಬ ಅದನ್ನು ಹಬ್ಬದಂತೆ ಆಚರಿಸಿದ್ದು ಇನ್ನೂ ನನ್ನ ನೆನಪಿನಲ್ಲಿದೆ. ಸೃಜನಶೀಲ ಸಾಹಿತ್ಯಕ್ಕಿಂತ ಹೆಚ್ಚಾಗಿ ಶಾಸ್ತ್ರ ಸಾಹಿತ್ಯದಲ್ಲಿ, ವಿಶೇಷವಾಗಿ ಅನುವಾದ ಶಾಸ್ತ್ರದಲ್ಲಿ ಹೆಚ್ಚಿನ ಆಸಕ್ತಿಯಿದ್ದ ಅವರು ಆ ಕ್ಷೇತ್ರದಲ್ಲಿ ಒಂದೆರಡು ಪುಸ್ತಕಗಳನ್ನೂ ಪ್ರಕಟಿಸಿದ್ದರು. ಅವನ್ನು ನಾನು ಮೆಚ್ಚಿ ಮಾತಾಡಬೇಕೆಂಬುದಷ್ಟೇ ಅವರು ನನ್ನಲ್ಲಿ ಇಟ್ಟಿದ್ದ ನಿರೀಕ್ಷೆ. ಇದಕ್ಕೆ ಪ್ರತಿಯಾಗಿ ಅವರು ಆಕಾಶವಾಣಿಗಾಗಿ ಬರೆದು ಪ್ರಸಾರ ಮಾಡಿದ ನಲ್ನುಡಿಗಳ ಸಂಗ್ರಹಕ್ಕೆ ಮುನ್ನುಡಿಯೊಂದನ್ನು ಬರೆದುಕೊಟ್ಟ ನೆನಪು.ಇವರಲ್ಲಿ ಇಷ್ಟಪಡದಿದ್ದ ಒಂದು ನೆನಪೆಂದರೆ ಅವರು ವಚನಸಾಹಿತ್ಯವನ್ನು ಅದು ವೇದ-ಉಪನಿಷತ್ತುಗಳ ಅನುವಾದವಷ್ಟೆ ಎನ್ನುತ್ತಿದ್ದುದು. ಅದಕ್ಕೆ ನಾನು ;ಇದು ನಿಮ್ಮ ಅನುವಾದಶಾಸ್ತ್ರ ಪಾಂಡಿತ್ಯದ ಅತಿರೇಕವಷ್ಟೆ' ಎಂದರೆ ಅವರು 'ಅದಕ್ಕಿಂತ ಹೆಚ್ಚಾಗಿ ನನ್ನ ಕುಲಗುಣ ಇರಬಹುದು!' ಎಂದು ಜೋರಾಗಿ ನಗುತ್ತಿದ್ದರು! ಅವರು ಲಿಂಗಾಯ್ತರಲ್ಲಿ ಏನೋರು ಎಂದು ಕೇಳಿದ್ದೆ.

-ಡಿಎಸ್ಸೆನ್

# ಪುಸ್ತಕಾವಲೋಕನ

**ಪು: ಕಾಗೆ ಮುಟ್ಟಿದ ನೀರು(ಆತ್ಮಕತೆ) ಲೇ: ಪುರುಷೋತ್ತಮ ಬಿಳಿಮಲೆ ಪ್ರ: ಅಹಿರ್ನಿಶಿ ಪ್ರಕಾಶನ, ಶಿವಮೊಗ್ಗ(೯೪೪೯೧೭೪೬೬೨) ಪು: ೩೦೪ ಬೆ: ರೂ. ೩೦೦/-**

## ಹಳ್ಳಿ ಹೈದ ದಿಲ್ಲಿಗೆ ಹೋಗಿ 'ಸಜ್ಜನ'ನಾದ ಕಥೆ




ಪುರುಷೋತ್ತಮ ಬಿಳಿಮಲೆ ಕನ್ನಡ-ಕರ್ನಾಟಕ ಜನಪದ ಅಧ್ಯಯನ ಕ್ಷೇತ್ರದಲ್ಲಿನ ಒಂದು ಗಣ್ಯ ಹೆಸರು. ಹಾಗೇ ಕಳೆದ ಇಪ್ಪತ್ತಕ್ಕೂ ಹೆಚ್ಚು ವರ್ಷಗಳ ಕಾಲದಿಂದ ದೆಹಲಿ ನಿವಾಸಿಯಾಗಿ ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡದ ಕಟ್ಟಾಳುವಾಗಿ ಹೆಸರಾದವರು. ಜೊತೆಗೆ ಎಡಪಂಥೀಯ ಚಿಂತಕರೆಂದೂ, ಬಂಡಾಯ ಸಾಹಿತಿಯೆಂದು ಗುರುತಿಸಲ್ಪಟ್ಟವರು. ಈ ಕೃತಿಯಲ್ಲಿ ಬಿಳಿಮಲೆಯವರು ತಮ್ಮ ವ್ಯಕ್ತಿತ್ವದ ಈ ಎಲ್ಲ ಚಹರೆಗಳಿಗೆ ಸಾಕ್ಷ್ಯ ಒದಗಿಸುವ ರೀತಿಯಲ್ಲಿ ತಮ್ಮ ಈ ಕಥೆಯನ್ನು ನಿರೂಪಿಸಿದ್ದಾರೆ. ದ.ಕ.ದ ಬಂಟಮಲೆಯೆಂಬ ದಟ್ಟ ಕಾಡು-ಬೆಟ್ಟಗಳ ಮಧ್ಯೆ ಹುಟ್ಟಿ ಬೆಳೆದ ಇವರು ಕಾಲೇಜು, ವಿಶ್ವವಿದ್ಯಾಲಯಗಳ ಆಧ್ಯಾಪಕರಾಗಿ, ಅಂತಾರಾಷ್ಟ್ರೀಯ ಅಧ್ಯಯನ ಸಂಸ್ಥೆಯೊಂದರ ಜಂಟಿ ನಿರ್ದೇಶಕರಾಗಿ ತಮ್ಮ ಜನಪದ ಸಂಸ್ಕೃತಿ ಅಧ್ಯಯನದ ತಿಳುವಳಿಕೆಯನ್ನು ವಿವಿಧ ರೂಪಗಳಲ್ಲಿ ವಿಶ್ವದ ಹಲವು ದೇಶಗಳಿಗೆ ಒಯ್ದು ಸೇವೆಯಿಂದ ನಿವೃತ್ತರಾದ ನಂತರ ದೆಹಲಿಯ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ(ಜೆಎನ್‌ಯು) ಕನ್ನಡ ಅಧ್ಯಯನ ಪೀಠದ ನಿರ್ದೇಶಕರಾಗಿ, ಜೊತೆಗೆ ಈ ಸಮಯದಲ್ಲೇ ದೆಹಲಿಯ ಕರ್ನಾಟಕ ಸಂಘವನ್ನು ಕನ್ನಡ ಸಂಸ್ಕೃತಿಯ ಒಂದು ಮಹತ್ವದ ಪ್ರಾತಿನಿಧಿಕ ಸಂಸ್ಥೆಯಾಗಿ ಕಟ್ಟುವವರೆಗಿನ ಹಲವು ಏರುಪೇರುಗಳ ಬಾಳಿನ ಈ ಸಾಹಸಗಾಥೆಯ ಮೊದಲ ಭಾಗ ಸರಳ, ನೇರ, ಸು-ಲಲಿತ ಮತ್ತು ಕೆಲವೊಮ್ಮೆ ತುಡಿಯುವ ಭಾವನಾತ್ಮಕ ಭಾಷೆಯಲ್ಲಿ ಹರಿಯುತ್ತಾ ತನಗೆ ತಾನೆ ಕುತೂಹಲಕಾರಿ ಓದನ್ನು ಆಹ್ವಾನಿಸಿಕೊಳ್ಳುತ್ತದೆ.. ಲೇಖಕರಿಗೇ ಸುಸ್ತು ಮಾಡುವಷ್ಟು ಅವರ ಮುಂದೆ ತೆರೆದುಕೊಂಡ, ಬೇಸರ ಪಡಿಸುವಷ್ಟು ವಿವರಗಳನ್ನು ಒಳಗೊಂಡ ವಿದೇಶ ಪ್ರವಾಸಗಳ ಅಧ್ಯಾಯ ಇದಕ್ಕೊಂದು ಅಪವಾದ.

ಬಿಳಿಮಲೆ ಕಾಡು ಮೂಲೆಯ ಅಷ್ಟೇನೂ ಅನುಕೂಲವಿಲ್ಲದ ಕುಟುಂಬವೊಂದರಿಂದ ಬಂದವರಾದರೂ, ಅವರ ಅಜ್ಜ ಅವರ ಗೌಡ ಸಮುದಾಯದ ಮಧ್ಯೆ ಹೆಸರಾದವರು. ಇನ್ನು ಅವರ ತಂದೆ-ತಾಯಿ ಇಬ್ಬರೂ ಅಕ್ಷರಸ್ಥರಾಗಿದ್ದು, ತಂದೆ ಯಕ್ಷಗಾನ-ತಾಳೆಮದ್ದಲೆ ಕಲಾವಿದರಾಗಿದ್ದರೆ, ತಾಯಿ ಕಾದಂಬರಿಗಳನ್ನು ಓದಬಲ್ಲ 'ಆಧುನಿಕ'ರಾಗಿದ್ದರು. ಆದರೆ ಇದೇನೂ ಪುರುಷೋತ್ತಮನ ಬಾಲ್ಯವನ್ನು ಕಾಡು ಬದುಕಿನಿಂದ ಪಾರುಮಾಡಿರಲಿಲ್ಲ. ಕೃತಿಯ ಈ ಘಟ್ಟದ ಬದುಕಿನ ವಿವರಗಳು ಎಷ್ಟು ಜೀವಂತವಾಗಿವೆಯೆಂದರೆ, ಇವೇ ಲೇಖಕನ ಅಂತಿಮ ಬೆಳವಣಿಗೆಯನ್ನು ಬೆರಗಿನಿಂದ ನೋಡವಂತೆ ಮಾಡುವುದು. ವಿಶೇಷವಾಗಿ ವಾಟೆಕಜೆಯ ಕಾಡು, ಕೂತ್ಕುಂಜದ ಶಾಲೆ ಮತ್ತು ಯಕ್ಷಗಾನದ ಬಣ್ಣದ ಲೋಕಕ್ಕೆ ಒಯ್ಯುವ ಪಂಜದ 'ನಾಗರಿಕ' ಲೋಕದ ಅನುಭವಗಳು. ತಂದೆಯ ಜಾತಕ ವ್ಯಸನ ಹೇಳಿದ 'ಸತ್ಯ'ದ ಹೊರತಾಗಿಯೂ ಎಸ್ಸೆಸೆಲ್ಸಿ ಪಾಸಾಗಿ ತಂದೆಯದೇ ಒತ್ತಾಯದ ಮೇರೆಗೆ ಕೊಕ್ಕರ್ಣೆಯಲ್ಲಿ ಟಿಸಿಎಚ್ ಸೇರಬೇಕಾಗಿ ಬಂದ ಸಂದರ್ಭದಲ್ಲಿ ಸ್ಫೋಟಿಸಿದ ಅಸಹಾಯಕತೆಯ ಅಳು ಇವರ ಜೀವನದ ಒಂದು ನಿರ್ಣಾಯಕ ತಿರುವಾಗಿ ಮುಂದಿನ ಏರು ಬದುಕಿಗೆ ಇವರನ್ನು ಸಜ್ಜುಗೊಳಿಸುತ್ತದೆ.

ನಂತರದ ಕಥೆ ನಾಗರೀಕ ಲೋಕದಲ್ಲಿ ಅವರ ಬೆಳವಣಿಗೆಯ-ಕಾಲೇಜು ವಿದ್ಯಾಭ್ಯಾಸದ-ವಿವಿಧ ಘಟ್ಟಗಳನ್ನು-ಅಮೃತ ಸೋಮೇಶ್ವರ, ತಾಳ್ತಜೆ ಮೇಷ್ಟ್ರುಗಳ ಮತ್ತು ರಾಮಚಂದ್ರ ಉಚ್ಚಿಲರಂತಹ ಹಿರಿಯ ವೈಚಾರಿಕ ಗೆಳೆಯರ ಆಪ್ತ ಒಡನಾಟದಲ್ಲಿ ಅರಳಿದ ಸಾಹಿತ್ಯ, ಯಕ್ಷಗಾನ, ಜಾನಪದ ಲೋಕ, ಚಾರಣ ಕುರಿತ ವಿಶೇಷ ಆಸಕ್ತಿಗಳ ಜೊತೆಗೇ ಮದ್ರಾಸ್‌ನಲ್ಲಿ ಕೈಗೊಂಡ ಕನ್ನಡ ಎಂಎ. ವ್ಯಾಸಂಗ ಮತ್ತು ಅಲ್ಲಿ ತೆರಕೊಂಡ ಹೊಸ ಲೋಕಾನುಭವಗಳು, ನಂತರ ಸುಳ್ಯದ ಕಾಲೇಜಿನಲ್ಲಿ, ಆನಂತರ ಮಂಗಳೂರು ವಿಶ್ವವಿದ್ಯಾಲಯದಲ್ಲಿ ವಿವೇಕ ರೈ ಅವರ ಮಾರ್ಗದರ್ಶನದಲ್ಲಿ ಗಳಿಸಿದ ಪಿಎಚ್‌ಡಿ ಪದವಿ, ಆನಂತರ ಅಲ್ಲೇ ನಡೆಸಿದ ಅಧ್ಯಾಪನ ಇವೆಲ್ಲ ಸರಳರೇಖಾತ್ಮಕವಾಗಿ ಇಲ್ಲಿ ವಿವರಿಸಲ್ಪಟ್ಟಿವೆ. ಇವುಗಳ ಜೊತೆಗೆ ಆ ಯೌವ್ವನದ ದಿನಗಳಲ್ಲಿ ಅವರ ಲೋಕದೃಷ್ಟಿಯನ್ನು ರೂಪಿಸಿದ್ದೆಂದು ಹೇಳಬಹುದಾದ ಕೋವೂರ್ ಪ್ರಣೀತ ವಿಚಾರವಾದ ಕಮ್ಯೂನಿಸ್ಟ್ ವಿಚಾರಧಾರೆಯ 'ಕ್ರಾಂತಿಕಾರಿ' ಚಟುವಟಿಕೆಗಳು ಇವರನ್ನು ಮಂಗಳೂರಿನ ಸುತ್ತಮುತ್ತಲಿನ ಸಾರ್ವಜನಿಕ ಜೀವನದಲ್ಲಿ ಸುಪರಿಚಿತಗೊಳಿಸಿದ್ದವು.

ಆದರೆ ನಂತರ ಆಗತಾನೇ ಆರಂಭವಾಗಿದ್ದ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಒಮ್ಮೆಗೇ ಪ್ರಾಧ್ಯಾಪಕರಾಗಿ ಕಂಬಾರರಿಂದ ಆಹ್ವಾನಿತರಾಗಿ ಅಲ್ಲಿಗೆ ಹೋದ ಮೇಲೆ ಕೆಲ ವರ್ಷಗಳಲ್ಲೇ ಅವರ ಸಂಶಯಕ್ಕೆ ತುತ್ತಾಗಿ ಬೇಸರದಿಂದ ಅಲ್ಲಿಂದ ಕು.ಶಿ ಹರಿದಾಸ ಭಟ್ಟರ ಸೂಚನೆಯಂತೆ ದೆಹಲಿಯಲ್ಲಿನ 'ಅಮೆರಿಕನ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯನ್ ಸ್ಟಡೀಸ್'ನ ಉಪನಿರ್ದೇಶಕರಾಗಿ ಸೇರಿದ ನಂತರ ಬಿಳಿಮಲೆಯವರದ್ದು ಸುಗಮ ಬದುಕಿನ ಏರುದಾರಿಯೇ. ಇದಕ್ಕೆ ತಕ್ಕುನಾಗಿಯೇ ಪುಸ್ತಕದ ಈ ಮೊದಲ ಭಾಗ ಸುಗಮ ಓದಿಗೆ ದಕ್ಕುತ್ತದೆ.

ಬಿಳಿಮಲೆಯವರು ತಾವು ದೆಹಲಿಯಲ್ಲಿ ಸ್ವಂತ ಮನೆ ಹೊಂದಿದ್ದು, ತಮ್ಮ ದೇಶ-ವಿದೇಶಗಳ ವಾಸ-ಪ್ರವಾಸಗಳ ಒಣ ವಿವರ-ಅನುಭವಗಳು, ಹೊಸದೇನೂ ಇಲ್ಲದ ದೇವರು, ಸಾವು, ಪುನರ್ಜನ್ಮ, ಜಾತಿ ವ್ಯವಸ್ಥೆ ಕುರಿತ ತಮ್ಮ ವಿಚಾರಗಳು ಮತ್ತು ತಮ್ಮ ಕಾಯಿಲೆ-ಕಸಾಲೆಗಳ-ಚಿಕಿತ್ಸೆಗಳ ಕಥೆ ಹೇಳುವ ಈ ಇಡೀ ಎರಡನೇ ಭಾಗದಲ್ಲಿ ನಮ್ಮ ಮನಸ್ಸಿನಲ್ಲಿ ಉಳಿಯುವ ಮೂರು ನಿರೂಪಣೆಗಳೆಂದರೆ ಅವರ ಜೆರೂಸಲೆಮ್ ನಗರ ದರ್ಶನ, ಅವರ ಮದುವೆಯ ಪ್ರಸಂಗ ಮತ್ತು ಡಯಾಬಿಟೀಸ್‌ನಿಂದ ಮೂತ್ರಪಿಂಡ ಕಳೆದುಕೊಳ್ಳುವ ಸ್ಥಿತಿ ತಲುಪಿದಾಗ ಪತ್ನಿ ಶೋಭನಾ ಅವರು ತಮ್ಮದೊಂದು ಮೂತ್ರಪಿಂಡ ಕೊಡಲು ನಿರ್ಧರಿಸುವುದನ್ನು ವಿವರಿಸುವ ಮಾರ್ದವ ಬರವಣಿಗೆಯ ಭಾಗಗಳು. ಆಶ್ಚರ್ಯವೆಂದರೆ ಈ ಅತ್ಮ-ಕತೆಯಲ್ಲಿ ಹೆಂಡತಿ-ಮಗನ ಪ್ರಸ್ತಾಪ ಬರುವುದು ಆನುಷಂಗಿಕವಾಗಿ ಮಾತ್ರ. ಪತ್ನಿಯ ಮೊದಲ ಪ್ರವೇಶವಾಗುವುದು, ದಿಢೀರನೆ, ಅವರ ವಿದೇಶ ಪ್ರವಾಸದಲ್ಲಿ ಜೊತೆಯಾಗುವ ಪ್ರಸ್ತಾಪದೊಂದಿಗೆ! ಮತ್ತೆ ಕಾಣಿಸಿಕೊಳ್ಳುವುದು ಕಿಡ್ನಿ ದಾನಿಯಾಗಿ. ಇನ್ನು ಅವರ ವ್ಯಕ್ತಿತ್ವದ ಅಲ್ಪಸ್ವಲ್ಪವಾದರೂ ಪರಿಚಯವಾಗುವುದು ಜಾತಿ ವ್ಯವಸ್ಥೆ ಕುರಿತ ವಿಚಾರಗಳ ಅಧ್ಯಾಯದಲ್ಲಿ; ಅವರ ಈ ಆಂತರ್ಜಾತಿ ವಿವಾಹದ ಸಾಹಸ ನಿರೂಪಿಸುವಾಗ. ಹೀಗಾಗಿ ಈ ಆತ್ಮಕಥೆ ತೀರಾ ಸ್ವಕೇಂದ್ರಿತವಾಗಿ ವಿನ್ಯಾಸಗೊಂಡಿದ್ದೆನಿಸಿ ಈ ಕೃತಿಯ ಮುಖ್ಯ ಶೀರ್ಷಿಕೆಗಿಂತ 'ಚದುರಿ ಬಿದ್ದ ಆತ್ಮದ ತುಣುಕುಗಳು' ಎಂಬ ಅದರ ಉಪಶೀರ್ಷಿಕೆಯೇ ಹೆಚ್ಚು ಅರ್ಥಪೂರ್ಣವೆನಿಸುತ್ತದೆ.

ಈ ಇಡೀ ಕೃತಿಯಲ್ಲಿ ಎದ್ದು ಕಾಣುವ ಬಿಳಿಮಲೆಯವರ ಬದುಕು ಕಟ್ಟಿಕೊಳ್ಳುವ ಹಠ, ಜಾಣ್ಮೆ, ಅದಕ್ಕೆ ತಕ್ಕುನಾದ ಪ್ರತಿಭೆ ಪರಿಶ್ರಮಗಳ ನಡುವೆಯೂ ಕೆಲವು ಪ್ರಶ್ನಾರ್ಥಕ ಖಾಲಿ ಜಾಗಗಳು ಉಳಿದುಕೊಳ್ಳುತ್ತವೆ. ಉದಾಹರಣೆಗೆ, ಕಂಬಾರರು ತಮ್ಮ ಮೇಲೆ ಸಂಶಯಗ್ರಸ್ತರಾಗಲು ಏನು ಕಾರಣ ಎಂಬ ಸುಳಿವೂ ಇಲ್ಲಿ ದೊರೆಯುವುದಿಲ್ಲ. ವಿಶ್ವವಿದ್ಯಾಲಯದ ಪರವಾಗಿ ಆಹ್ವಾನಿತರಾಗಿದ್ದ ಜಪಾನೀ ಅತಿಥಿಯನ್ನು ವಾಪಸು ಕಳಿಸುವ ಕಂಬಾರರ ತುಘಲಕೀ ನಿರ್ಧಾರದ ಜವಾಬ್ದಾರಿಯನ್ನು ಬಿಳಿಮಲೆಯವರೇಕೆ ವಹಿಸಿಕೊಳ್ಳಬೇಕು? ಕಮ್ಯೂನಿಸ್ಟ್ ಸ್ಫೂರ್ತಿಯಲ್ಲಿ ಹೋರಾಟಗಾರರಾಗಿ ಬಂಡಾಯ ಸಾಹಿತಿಯೂ ಆಗಿ ಗುರುತಿಸಿಕೊಂಡು ಅಮೆರಿಕಾ ಎಂದರೆ ಬಂಡವಾಳಶಾಹಿ, ಸಾಮ್ರಾಜ್ಯಶಾಹಿ ಎನ್ನುತ್ತಾ ಜಾಗತೀಕರಣದ ವಿರುದ್ಧ ವಾದಿಸುತ್ತಿದ್ದ ಬಿಳಿಮಲೆಯವರು ಯಾವ ದ್ವಂದ್ವವೂ ಇಲ್ಲದೆ ಅಮೆರಿಕಾದ ಸಂಸ್ಥೆಯನ್ನು ಸೇರಿಕೊಂಡದ್ದನ್ನು ಹೇಗೆ ಅರ್ಥ ಮಾಡಿಕೊಳ್ಳುವುದು? ಅದೂ ಆ ಹೊತ್ತಿಗೆ ವಿಶ್ವವಿದ್ಯಾನಿಲಯದಿಂದ ಕಂಬಾರರ ನಿರ್ಗಮನ ಖಚಿತವಾಗಿದ್ದಾಗ?. ಅಲ್ಲದೆ ಆ ಅಮೆರಿಕನ್ ಸಂಸ್ಥೆಯ ಹುದ್ದೆಗೆ ಇಂಗ್ಲಿಷ್‌ನಲ್ಲಿ ಅರ್ಜಿ ಬರೆಯಲೂ ಬಾರದವನಾಗಿದ್ದೆ ಎಂದು ಹೇಳಿಕೊಳ್ಳುವ ಅವರು ನೇರವಾಗಿ ಅದರ ಉಪನಿರ್ದೇಶಕರಾಗಿ ಸೇರಿಕೊಂಡು, ನಂತರದ ವರ್ಷಗಳಲ್ಲಿ ಅದರ ಆಡಳಿತ ಮಂಡಳಿಯ ನಿರ್ದೇಶಕರಾದ ಹದಿನೇಳು ವರ್ಷಗಳಷ್ಟು ದೀರ್ಘ ಅವಧಿಯ ತಮ್ಮ ಸಾಧನೆಯ ಕಥೆಯನ್ನು ಕೇವಲ ಏಳೆಂಟು ಪುಟಗಳಲ್ಲಿ ಮುಗಿಸಿ ನಮ್ಮಲ್ಲಿ ಆಶ್ಚರ್ಯವನ್ನುಂಟು ಮಾಡುತ್ತಾರೆ. ಜೊತೆಗೆ ಈ ದೀರ್ಘ ಸೇವಾವಧಿಯ ಕಾಲದಲ್ಲಿ ಅವರ ಎಡಪಂಥೀಯ ಆಲೋಚನೆಗಳು ಏನಾಗಿದ್ದವು ಎಂಬುದರ ಸುಳಿವು ಎಲ್ಲೂ ದೊರಕುವುದಿಲ್ಲ. ಅವುಗಳ ಪ್ರಸ್ತಾಪ ಮತ್ತೆ ಕಾಣಿಸಿಕೊಳ್ಳುವುದು ಅವರು ಜೆಎನ್‌ಯು ಸೇರಿದ ಮೇಲೇ. ಹಾಗೇ, ಕರ್ನಾಟಕ ಸಂಘದ ಆಡಳಿತ ಕಾಲದಲ್ಲಿ ತಮ್ಮ ವಿರೋಧಿ ಗುಂಪು ತಮ್ಮ ಮೇಲೆ ಅಪಪ್ರಚಾರದಲ್ಲಿ ತೊಡಗಿತು ಎನ್ನುವ ಬಿಳಿಮಲೆ ಆ ಅಪಪ್ರಚಾರಕ್ಕೆ ಕಾರಣಗಳೇನು ಮತ್ತು ಅದರ ವಾದವೇನಾಗಿತ್ತು ಎಂಬುದರ ಸೂಚನೆಯನ್ನೂ ನೀಡುವುದಿಲ್ಲ. ಬದುಕಲ್ಲಿ ಕಹಿ ಉಂಡಿರುವಾಗ, ದ್ವಂದ್ವಗಳ ಸಂಕಟಗಳನ್ನು ಎದುರಿಸಿರುವಾಗ ಮತ್ತು ಅವನ್ನೆಲ್ಲ ಜಯಿಸಿ ದಡ ಮುಟ್ಟಿರುವಾಗ ಅದನ್ನು ಅದಿದ್ದಂತೆ ದಾಖಲಿಸಲು ಹಿಂಜರಿಯುತ್ತಾ ಸಜ್ಜನ (ಜಂಟ್ಲ್‌ಮನ್)ನಾಗಿ ಉಳಿಯಬಯಸುವ ಉದ್ದೇಶವಾದರೂ ಏನು? ಉದ್ದೇಶ ಏನೇ ಇರಲಿ, ಪರಿಣಾಮವಂತೂ ಸ್ಪಷ್ಟ ಕಥನದ ಸಮಗ್ರತೆ(Integrity) ಭಂಗಗೊಂಡಿದೆ. ನಿರೂಪಣೆಯ ಬೆನ್ನೆಲುಬು ಸಡಿಲವಾಗಿದೆ.

**-ಡಿ.ಎಸ್. ನಾಗಭೂಷಣ**

ಪು: **ಅವರಿವರು**(ವ್ಯಕ್ತಿ ಚಿತ್ರಗಳು) ಲೇ: **ಬಸವರಾಜು ಮೇಗಲಕೇರಿ** ಪ್ರ: **ರೂಪ ಪ್ರಕಾಶನ**, ಮೈಸೂರು (೯೩೪೨೨೭೪೩೩೧) ಪು: **೨೪೪** ಬೆಲೆ: **ರೂ.೨೦೦/-**

## ವ್ಯಕ್ತಿತ್ವಗಳನ್ನು 'ನಿಕಷ'ಕ್ಕೆ ಒಡ್ಡುವ ಚಿತ್ರಗಳು




'ಲಂಕೇಶ್ ಪತ್ರಿಕೆ'ಯಿಂದ ಆರಂಬಿಸಿ, ನಂತರ ವಿವಿಧ ಪತ್ರಿಕೆಗಳಲ್ಲಿ ಕೆಲಸ ಮಾಡಿದ ಬಸವರಾಜು ಮೇಗಲಕೇರಿ ೨೦೧೪ರಿಂದ 'ವಾರ್ತಾಭಾರತಿ' ದೈನಿಕದಲ್ಲಿ ಬೆಂಗಳೂರು ಸ್ಥಾನಿಕ ಸಂಪಾದಕರಾಗಿದ್ದು, ಅವರು ವಿವಿಧ ಪತ್ರಿಕೆ, ವೆಬ್ ತಾಣಗಳಿಗೆ ಬರೆದಿರುವ ವ್ಯಕ್ತಿ ಚಿತ್ರಗಳ ಸಂಕಲನ ಇದಾಗಿದೆ. ಇಲ್ಲಿರುವ ಬಹುತೇಕ ಬರಹಗಳು 'ವಾರ್ತಾಭಾರತಿ'ಗೆ ಬರೆದ ಅಂಕಣ ಬರಹಗಳಾಗಿವೆ. ರಾಜಕಾರಣಿ, ಕಲಾವಿದರು, ಚಿತ್ರ ನಟರು, ಕ್ರಿಕೆಟಿಗರು, ಹೋರಾಟಗಾರರಲ್ಲದೆ ಜನ ಸಾಮಾನ್ಯರ ಬಗ್ಗೆಯೂ ಇಲ್ಲಿ ಲೇಖನಗಳಿವೆ.

ಸಾಮಾನ್ಯವಾಗಿ ಪತ್ರಿಕಾ ಅಂಕಣಗಳ ಬರಹಕ್ಕೆ ಹಲವು ಮಿತಿಗಳಿರುತ್ತವೆ. ಇಂತಿಷ್ಟೆ ಪದಗಳಲ್ಲಿ ಹೇಳಬೇಕಾದದ್ದನ್ನೆಲ್ಲಾ ಅಭಿವ್ಯಕ್ತಿಸಬೇಕಾದ ಸವಾಲು ಇರುತ್ತದೆ. ಇದರಿಂದಾಗಿ ವ್ಯಕ್ತಿ ಚಿತ್ರಣ ಕಟ್ಟಿಕೊಡುವ ಸಂದರ್ಭದಲ್ಲಿ ಕೆಲಬಾರು ಯಾರ ಬಗ್ಗೆ ಬರೆಯಲಾಗಿರುತ್ತದೆಯೊ ಅವರಿಗೆ ಸಂಪೂರ್ಣ ನ್ಯಾಯ ದಕ್ಕದೆ ಹೋಗಿರುವುದು ಉಂಟು. ಆದರೆ ಬಸವರಾಜು ಅವರು ತಮ್ಮ ಕೃತಿಯ ಬಹುತೇಕ ಬರಹಗಳಲ್ಲಿ ಈ ಮಿತಿಯ ಚೌಕಟ್ಟಿನಲ್ಲಿಯೇ ಸಮಗ್ರವಾಗಿ ವ್ಯಕ್ತಿಯ ಚಿತ್ರಣ ಕಟ್ಟಿಕೊಡುವ ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರೆ.

ಈ ಸಂಕಲನದಲ್ಲಿ ೪೫ ವ್ಯಕ್ತಿಗಳ ಸಚಿತ್ರ ಚಿತ್ರಣವಿದೆ. ರಾಜಕಾರಣಿಗಳಾದ ವಾಟಾಳ್ ನಾಗರಾಜ್, ಜಿಗ್ನೇಶ್ ಮೆವಾನಿ, ಅಮಿತ್ ಷಾ, ಅಶೋಕ್ ಖೇಣಿ, ಎಂ.ವಿ.ರಾಜಶೇಖರನ್, ನಜೀರ್ ಸಾಬ್, ರಮೇಶ್ ಕುಮಾರ್, ಚಿತ್ರ ನಟರಾದ ಉಪೇಂದ್ರ, ರಜನೀಕಾಂತ್, ಪ್ರಕಾಶ್ ರೈ, ಸಂಜಯ್ ದತ್, ಜಯಮಾಲ, ಅನುಪಮಖೇರ್, ಬರ್ಮಾದ ಹೋರಾಟಗಾರ್ತಿ ಸೂಕಿ, ರೈತ ಸಂಘದ ಅನುಸೂಯಮ್ಮ, ದೇಸಿ ಚಿಂತಕ ಪ್ರಸನ್ನ, ಪತ್ರಕರ್ತೆ ಗೌರಿ ಲಂಕೇಶ್ ಸೇರಿದಂತೆ ಹಲವರ ವ್ಯಕ್ತಿ ಚಿತ್ರಣ ದಾಖಲಾಗಿವೆ.

ಓರ್ವ ವ್ಯಕ್ತಿಯ ಚಿತ್ರಣ ಕಟ್ಟಿಕೊಡುವುದು ಎಂದರೆ ಅದು ಕೇವಲ ವ್ಯಕ್ತಿಯ ಕುರಿತ ಚಿತ್ರ ಮಾತ್ರ ಆಗಿರುವುದಿಲ್ಲ. ಬದಲಾಗಿ ಆಯಾ ಕಾಲದ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಸನ್ನಿವೇಶಗಳ, ವಿದ್ಯಮಾನಗಳ ಚಿತ್ರಣ ಕೂಡ ಅದು ಆಗಿರುತ್ತದೆ. ವ್ಯಕ್ತಿಯ ಕುರಿತು ಹೇಳುತ್ತಲೆ ಆಯಾ ಕಾಲದ ವಿದ್ಯಮಾನಗಳಿಗೆ ಬರಹ ಸ್ಪಂದಿಸಿದಾಗ ಅದರ ಮೌಲ್ಯ ವರ್ಧಿಸುತ್ತದೆ. ಜೊತೆಗೆ ಬರಹ ತನ್ನ ಸಕಾಲಿಕತೆಯನ್ನು ಉಳಿಸಿಕೊಳ್ಳುತ್ತದೆ. ಇಂತಹ ಗುಣ ಇರುವ ಬರಹಕ್ಕೆ ಅಪ್ಪಟ ಉದಾಹರಣ ಎಂದರೆ ಸೂಕಿ ಕುರಿತು ಇರುವ ಲೇಖನ. ಬಸವರಾಜು ಅವರು ಸೂಕಿಯ ಹೋರಾಟಗಳನ್ನು ವಿವರಿಸುತ್ತಲೆ ಆಕೆಯ ಸಂಕಟಗಳನ್ನು ವಿಶ್ಲೇಷಿಸುತ್ತ ಒಟ್ಟಾರೆಯಾಗಿ ಮಯನ್ಮಾರ್‌ನ ರಾಜಕೀಯ ಚರಿತ್ರೆಯನ್ನೆ ನಿರೂಪಿಸುತ್ತ ಅದನ್ನು ಜಗತ್ತಿನ ರಾಜಕಾರಣದ ಜೊತೆಗೆ ಅನುಸಂಧಾನ ಮಾಡುವುದು ಆ ಬರಹದ ವಿಶೇಷತೆಯಾಗಿದೆ.

ಲೇಖಕರು ತಮ್ಮ ಬರಹಕ್ಕೆ ಆಯ್ಕೆ ಮಾಡಿಕೊಂಡಿರುವ ವ್ಯಕ್ತಿಗಳು ಯಾರು ಎಂಬುದನ್ನು ಗಮನಿಸಿದರೆ ಅವರ ಬರವಣಿಗೆಯ 'ಮನೋಧರ್ಮ' ಸ್ಪಷ್ಟಗೊಳ್ಳುತ್ತದೆ. ಬಹುತೇಕ ಬರಹಗಳಲ್ಲಿ ವ್ಯಕ್ತಿಯ ಹುಟ್ಟು, ಬಾಲ್ಯ, ವಿದ್ಯಾಭ್ಯಾಸ, ಬೆಳೆದು ಬಂದ ಬಗೆಗಳನ್ನು ವಿವರಿಸುತ್ತಲೆ ಅವರ ಸಾಧನೆಗಳ ಜೊತೆಗೆ ವೈಫಲ್ಯ, ದೌರ್ಬಲ್ಯಗಳನ್ನು ಕೂಡ ವಿಶ್ಲೇಷಿಸಲಾಗಿದೆ. ಹೀಗಾಗಿ ವ್ಯಕ್ತಿ ಚಿತ್ರಣ ಎನ್ನುವುದು ವ್ಯಕ್ತಿತ್ವವನ್ನು ನಿಷ್ಠುರ 'ನಿಕಷ'ಕ್ಕೆ ಒಳಪಡಿಸುವ ಛಾತಿಯನ್ನು ಲೇಖಕರು ತೋರಿದ್ದಾರೆ.

ಕೆಲವು ಬರಹಗಳಲ್ಲಿ ಬಸವರಾಜು ಕಟ್ಟಿಕೊಟ್ಟಿರುವ 'ವಿವರ'ಗಳು ಬೆರಗು ಹುಟ್ಟಿಸುವಂತಿದೆ. ಉದಾಹರಣೆಗೆ ಕಲಾವಿದ, ನಿರ್ದೇಶಕ ಟಿ.ಎಸ್.ರಂಗಾ ಅವರ ಕುರಿತ ಬರಹದಲ್ಲಿ ಪ್ರಪಂಚದ ಪ್ರಸಿದ್ಧ ಸಿನಿಮಾ ನಿರ್ದೇಶಕರ ಬಗ್ಗೆ ರಂಗಾ ಅವರು ನೀಡುತ್ತಿದ್ದ ವಿವರಣೆಯನ್ನು ದಾಖಲಿಸಿರುವ ಪರಿ ಅನನ್ಯವಾಗಿದೆ. ಹಾಗೇ, ಪ್ರಸಿದ್ಧರಲ್ಲದವರ ಕುರಿತು ಬಸವರಾಜು ದಾಖಲಿಸಿರುವ ವ್ಯಕ್ತಿ ಚಿತ್ರಣ ಕುತೂಹಲಕಾರಿಯಾಗಿದ್ದು ಆಪ್ತವೆನಿಸುತ್ತದೆ. ಬೈಕ್‌ನ ಟಯರ್‌ಗೆ ಪಂಕ್ಚರ್ ಹಾಕುವ ರಾಮಣ್ಣ ಹೇಳಿದ 'ಬಿಸಿಲು, ಮಳೆಗೆ ಮೈಕೊಟ್ಟು ನೋಡಬೇಕು. ಅವುಗಳ ಜೊತೆಗೆ ಬದುಕಬೇಕು' ಎಂಬ ಮಾತನ್ನು ಯು.ಆರ್.ಅನಂತಮೂರ್ತಿ ಅವರ ಬರಹದ ಜೊತೆ ಹೋಲಿಸಿ ನೋಡಲು ಲೇಖಕರಿಗೆ ಸಾಧ್ಯವಾಗಿರುವುದು ವಿಸ್ಮಯವೆನಿಸುತ್ತದೆ.

ಸರಳವಾದ ಭಾಷೆಯಲ್ಲಿ ಬರವಣಿಗೆ ಇರುವುದರಿಂದ ಒಂದೇ ಗುಕ್ಕಿನಲ್ಲಿ ಕೃತಿಯನ್ನು ಓದಬಹುದು. ಅಕ್ಷರಮಟ್ಟಿಗೆ ಓದಿಸಿಕೊಂಡು ಹೋಗುವ ಗುಣ ಕೃತಿಗೆ ಇದೆ. ಸ್ವತಃ ಪತ್ರಕರ್ತರಾಗಿದ್ದರೂ ಮಾಧ್ಯಮದ ನಿಲುವುಗಳ ಬಗ್ಗೆ ಬಸವರಾಜು ತಮ್ಮ ಬರಹಗಳಲ್ಲಿ ಕಟುವಾದ ವಿಮರ್ಶೆ ಮಾಡಿದ್ದಾರೆ. ಕ್ರಿಕೆಟಿಗ ರವಿಶಾಸ್ತ್ರಿ ಕುರಿತ ಬರಹದಲ್ಲಿ ೧೯೮೩ರ ವಿಶ್ವಕಪ್‌ನಲ್ಲಿ ಗಮನ ಸೆಳೆಯುವಂತಹ ಆಟವಾಡಿ ಕಾರನ್ನು ಬಹುಮಾನವಾಗಿ ಗಳಿಸಿದ್ದರು ಎಂಬ ಉಲ್ಲೇಖವಿದೆ. ವಾಸ್ತವದಲ್ಲಿ ರವಿಶಾಸ್ತ್ರಿಗೆ ಆ ಸಾಧನೆ ಮಾಡಿದ್ದು ಆನಂತರದ ಆಸ್ಟ್ರೇಲಿಯಾ ಪ್ರವಾಸದಲ್ಲಿ. ಕ್ರಿಕೆಟಗರನ್ನು ಕುರಿತ ಲೇಖನದಲ್ಲಿ ಇಂತಹ ತಪ್ಪುಗಳು ನುಸುಳದಂತೆ ಎಚ್ಚರ ವಹಿಸಬೇಕಿತ್ತು.

ರಾಜಕಾರಣ, ಪತ್ರಿಕೋದ್ಯಮ, ಕಲೆ, ಕ್ರೀಡೆಯಲ್ಲಿ ಆಸಕ್ತಿ ಇರುವವರ ಸಂಗ್ರಹದಲ್ಲಿ ಇರಬೇಕಾದ ಕೃತಿ ಇದಾಗಿದೆ. ವ್ಯಕ್ತಿ ಚಿತ್ರ ದಾಖಲಿಸುವಾಗ ಅಗತ್ಯಕ್ಕಿಂತ ಹೆಚ್ಚಾಗಿಯೆ ನುಸುಳುವ 'ನಾನು' ಎಂಬುದನ್ನು ಪ್ರಜ್ಞಾಪೂರ್ವಕವಾಗಿ ಬದಿಗಿಟ್ಟಿರುವುದು ಲೇಖಕರ ಸಂವೇದನಾಶೀಲತೆ, ಸೂಕ್ಷ್ಮತೆಗೆ ಹಿಡಿದಿರುವ ಕೈಗನ್ನಡಿಯಾಗಿದೆ.

**-ಎಂ.ರಾಘವೇಂದ್ರ**

**೧೪ನೇ ಪುಟದಿಂದ)**

ಎಂದರೆ ಅಧ್ಯಾತ್ಮ. ಅಧ್ಯಾತ್ಮ ಎಂದರೆ ನಂನಮ್ಮ ಧರ್ಮಗಳ ಸುತ್ತ ಕಟ್ಟಲ್ಪಟ್ಟಿರುವ ಕರ್ಮಠತನದ ಗೋಡೆಗಳನ್ನು ಒಡೆದು ಆ ಚಿಪ್ಪುಗಳಿಂದ ಹೊರಬಂದಾಗ ತೆರೆದುಕೊಳ್ಳುವ ಅನುಭಾವದ ಅವಕಾಶದಲ್ಲಿ ಚಿಟ್ಟೆಯಾಗಿ ಹಾರುವುದು. ಅಧ್ಯಾತ್ಮ ಎಂದರೆ, ಮನುಷ್ಯನನ್ನು ಅನಂತ ಸೃಷ್ಟಿಯ ಅಖಂಡತೆಯಲ್ಲಿ ಗ್ರಹಿಸಿ ನಮ್ರನೂ, ಪೂರ್ಣನೂ ಆಗುವ ಪ್ರಕ್ರಿಯೆ; ಪ್ರಯತ್ನ;ತುಡಿತ.. ಉಳಿದದ್ದೆಲ್ಲ ಬರೀ ರಾಜಕಾರಣ. ಅಥವಾ ಬೇರೆ ಮಾತುಗಳಲ್ಲಿ ಹೇಳುವುದಾದರೆ, ಒಂದು ಎಂದರೆ ಧರ್ಮ. ಎರಡಾದರೆ ಅದು ರಾಜಕಾರಣ. ಎರಡನ್ನು ಒಂದು ಮಾಡುವುದು ಸೆಕ್ಯುಲರ್ ರಾಜಕಾರಣ. ಗಾಂಧಿ ಮಾಡಹೊರಟದ್ದು ಇಂತಹ ರಾಜಕಾರಣವನ್ನೇ, ಇದು ಅರ್ಥವಾಗದ ಧಾರ್ಮಿಕ ವೇಷದ ರಾಜಕೀಯ ಶಕ್ತಿಗಳು ಅವರನ್ನು ಬಲಿ ತೆಗೆದುಕೊಂಡವು. ಅದರ ಪಶ್ಚಾತ್ತಾಪದ ಭಾಗವಾಗಿಯಾದರೂ ನಾವಿಂದು ನಿಜವಾದ ಸೆಕ್ಯುಲರ್ ರಾಜಕಾರಣದ ಹೊಸ ಅಧ್ಯಾಯವನ್ನು ಆರಂಭಿಸಬೇಕಿದೆ.

ಇದು ಸಾಧ್ಯವಾಗುವುದು ಬಾಬ್ರಿ ಮಸೀದಿ-ರಾಮಮಂದಿರ ವಿವಾದವನ್ನು ಪರಿಹರಿಸಲು ಇದ್ದ ಸುಲಭದ ಹಾದಿ ಎಂದು ಮೇಲೆ ಸೂಚಿಸಿದ, ಆ ವಿವಾದವನ್ನು ಆ ಊರಿನವರಿಗೆ ಬಿಟ್ಟುಕೊಡುವ ಮಾನಸಿಕ ವಿಕೇಂದ್ರೀಕರಣದಿಂದ ಮಾತ್ರ. ಅಂದರೆ ಒಂದು ಜನಸಮುದಾಯದ ಮನಸ್ಸನ್ನು ರಾಜಕೀಯ ಮಹತ್ವಾಕಾಂಕ್ಷೆಯಿಂದ ರೂಪಿಸಲಾಗುವ ರಾಜ್ಯ ಅಥವಾ ರಾಷ್ಟ್ರ ವ್ಯವಸ್ಥೆಯ ಒತ್ತಡಗಳಿಗೆ ಅಧೀನಗೊಳಿಸದಿರುವುದು. ಇದು ಧರ್ಮವನ್ನೂ ರಾಜಕೀಯಗೊಳಿಸಿ ಅದರ ಅಧ್ಯಾತ್ಮವನ್ನು ನಾಶ ಮಾಡುತ್ತದೆ. ಅಯೋಧ್ಯಾ ವಿವಾದ ಎರಡೂ ಕಡೆಗಳ ಪುರೋಹಿತಶಾಹಿಗಳ ವಶವಾಗಿ ಸಮಸ್ಯೆ ಭಾವನಾತ್ಮಕವಾಗಿ ಉದ್ದೀಪನಗೊಂಡು ಉನ್ಮಾದಮಯವಾಗಿದ್ದು ಹೀಗೆ. ಧರ್ಮವೆನ್ನುವುದು ಒಳಗಿನ ಮೌನದತ್ತ ತುಡಿಯುವ ಪ್ರವೃತ್ತಿಯಾಗಿ ಉಳಿಯದೆ ಹೊರಗಿನ ತಂಟೆಕೋರತನವಾಗಿ ಪರಿವರ್ತಿತವಾಗುವುದು, ಅದು ತನ್ನ ಹೊರಗಿನ ಲೋಕದ ಒತ್ತಡಗಳಿಗೆ ಒಳಗಾದಾಗ, ಹಾಗೆಂದೇ ಗಾಂಧಿ ರಾಜ್ಯ/ ರಾಷ್ಟ್ರವೆಂಬ ಪರಿಕಲ್ಪನೆಗಳು ಮೂಡುತ್ತಿದ್ದಾಗ ಅವುಗಳ ಗೊಡವೆ ಬೇಡವೆಂದು ಗ್ರಾಮ-ಸ್ವರಾಜ್ಯದ ಪರಿಕಲ್ಪನೆಯನ್ನು ನೀಡಿದ್ದು. ಹೀಗೆ ಭಾರತದಲ್ಲಿ ಸೆಕ್ಯುಲರಿಸಂ ಎಂದರೆ ವಿಕೇಂದ್ರೀಕರಣ ಮತ್ತು ಆ ಮೂಲಕ ಅಧ್ಯಾತ್ಮ ಎಂದು ಅರ್ಥವಾಗುತ್ತದೆ. ಈ ದೇಶ ಬೆಳೆಸಿಕೊಂಡು ಬಂದ ಹಿಂದೂ ಎಂದು ಕರೆಯಲಾಗುವ ಧರ್ಮ ಹೀಗೇ ಇತ್ತು. ಆದರೆ ರಾಷ್ಟ್ರೀಯತೆ ಎಂಬ ಪರಿಕಲ್ಪನೆಗೆ ಬಲಿ ಬಿದ್ದ ದೇಶ ಅದನ್ನು ಕಳೆದುಕೊಂಡು ತನ್ನ ಉಳಿವಿಗಾಗಿ ಸೆಕ್ಯುಲರಿಸಂನ್ನು ಮೊರೆ ಹೋಗಿ ಈಗ ೭೪ ವರ್ಷಗಳ ನಂತರ ಎರಡನ್ನೂ ಕಳೆದುಕೊಂಡು ಹಿಂದುತ್ವವೆಂಬ ಅಧ್ಯಾತ್ಮವೇ ಇಲ್ಲದ ಅಪ್ಪಟ ರಾಜಕೀಯ ಮೋಡಿಯಲ್ಲಿ ಬಂಧಿತವಾಗಿದೆ. ಯೂರೋಪ್‌ನಲ್ಲಿ ರಾಷ್ಟ್ರ ಪರಿಕಲ್ಪನೆಯ ಜೊತೆಗೆ ಸೆಕ್ಯುಲರಿಸಂ ತತ್ವ ಕೂಡ ಉದಯವಾಗಲು ಕಾರಣ ಅಲ್ಲಿ ಧರ್ಮ ಚರ್ಚ್ ರೂಪದಲ್ಲಿ ಸಂಘಟಿತಗೊಂಡು ಏಕರೂಪಿಯಾಗಿತ್ತು. ಆದರೆ ಭಾರತದಲ್ಲಿ ಧರ್ಮ ಚರ್ಚ್ ರೂಪದಲ್ಲಿ ಏಕರೂಪಿಯಾಗಿ ಸಂಘಟಿತಗೊಂಡಿರಲಿಲ್ಲ. ಹಾಗಾಗಿ ಇಲ್ಲಿ ಸೆಕ್ಯುಲರಿಸಂ ಪರಿಣಾಮ ತಾನಾಗಿಯೇ ಇತ್ತು. ಆದರೆ ಈಗ ನೋಡುತ್ತಿರುವಂತೆ ಆಮದಾದ ಸೆಕ್ಯುಲರಿಸಂ ಬಂದು ಇಲ್ಲಿ ಹಿಂದೂ ಚರ್ಚ್‌ಗಳ ನಿರ್ಮಾಣವನ್ನು ಕೈಗೊಂಡು ಹಿಂದೂ ಧರ್ಮದ ಆಧ್ಯಾತ್ಮವನ್ನೆಲ್ಲ ಕಳೆದು ಅದನ್ನು ರಾಷ್ಟ್ರೀಯಗೊಳಿಸುವಲ್ಲಿ ತೊಡಗಿದೆ. ವಿಶ್ವ ಹಿಂದೂ ಪರಿಷತ್ ಹಿಡಿದಿರುವ ಹಾದಿಯಾದರೂ ಇನ್ನಾವುದು? ಅದರ ಪರಿಣಾಮವೆಂದರೆ ಭಾರತಕ್ಕೆ ಬಂದು ಬಹುರೂಪಿಗಳಾಗಿ ವಿಕೇಂದ್ರೀಕೃತಗೊಂಡಿದ್ದ ಇತರ ಧರ್ಮಗಳೂ ತಂತಮ್ಮ ಹೊಸ 'ಚರ್ಚ್'ಗಳನ್ನು ಕಟ್ಟಿಕೊಳ್ಳತೊಡಗಿವೆ. ಇದನ್ನು ಅಧರ್ಮ ಎಂದು ಕರೆಯದೆ ಇನ್ನೇನೆನ್ನಬೇಕು?

‘ಹೊಸ ಮನುಷ್ಯ’ ಓದುಗರೆಲ್ಲರಿಗೂ
ಹಾರ್ದಿಕ ಶುಭಾಶಯಗಳು




**ಚಂದ್ರಶೇಖರ**
ಮತ್ತು ಕುಟುಂಬ
ಗೋಪಾಡಿ (ಕುಂದಾಪುರ ತಾ.)

---

‘ಹೊಸ ಮನುಷ್ಯ’ ಓದುಗರೆಲ್ಲರಿಗೂ
ಹಾರ್ದಿಕ ಶುಭಾಶಯಗಳು



**ಪ್ರೊ. ಜೆ.ಎಲ್. ಪದ್ಮನಾಭ**
ಮತ್ತು ಕುಟುಂಬ
**ಶಿವಮೊಗ್ಗ**

‘ಹೊಸ ಮನುಷ್ಯ’ ಓದುಗರೆಲ್ಲರಿಗೂ
ಹಾರ್ದಿಕ ಶುಭಾಶಯಗಳು



**ಶಶಿಧರ ತೋಡಕರ**
ಮತ್ತು **ಕುಟುಂಬ**
**ಧಾರವಾಡ**

## ತಿಂಗಳ ಕೊನೆಯ ಸಾಲುಗಳು



ಹುಲ್ಲಾಗಿ ಗಿಡವಾಗಿ ಹುಳುವಾಗಿ ಮರವಾಗಿ
ಹಲಬಗೆಯ ಮಿಗವಾಗಿ ಹಕ್ಕಿ ಹಾವಾಗಿ
ಕಲ್ಲಾಗಿ ನರನಾಗಿ ಪಿಶಾಚಿ, ಗಣವಾಗಿ
ಬಲ್ಲ ಅಸುರಾದಿ, ಮುನಿಯಾಗಿ ದೇವರೂ ನಾನಾಗಿ
ಎಲ್ಲಿಯೂ ನಿಲ್ಲದ ಚರವಾಗಿ, ಸ್ಥಿರವಾಗಿ
ಎಲ್ಲ ಹುಟ್ಟನೂ ಹುಟ್ಟಿ ಕೆಟ್ಟನೋ ಎನ್ನೊಡೆಯ!

-ಮಾಣಿಕ್ಯವಾಚಗರ್
(ತಮಿಳು‘ತಿರುವಾಸಗಂ’ನಿಂದ)
(ಕನ್ನಡಕ್ಕೆ: ಎಚ್.ಎಸ್. ಶಿವಪ್ರಕಾಶ)

**ಶುಭಾಶಯಗಳೊಂದಿಗೆ,**

**ಆರ್. ಉಮೇಶ್** ಅಂಡ್ ಅಸೋಸಿಯೇಟ್ಸ್
**ಲೆಕ್ಕಪರಿಶೋಧಕರು, ಮೈಸೂರು**
**ಸಂಪರ್ಕ: ೯೪೪೮೦೮೪೭೯೩**

HOSA MANUSHYA, a kannada Socialist monthly solely owned, edited, published and printed by D.S. Nagabhushana, at HIG-5,Kallahally Extn.,Vinoba Nagara, SHIVAMOGGA-577204. Printed at Replica Offset Printers, No.14/1, 1st Main, Industrial Town, Rajaji Nagara, Bengaluru-560 044 Ph: 08023357963

**Regd. News Paper RNI No. KARKAN/2012/47568**
**Rgd No. KA/SK/SMG-1209/2019-21**

ಇವರಿಗೆ \ To

If undelivered, please return to D.S. Nagabhushana, Editor, ‘Hosa Manushya’, ’HIG-5, ‘Nudi’, Kallahalli Extension, Vinoba Nagara, Shivamogga -577204( Karnataka)